4 ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ

+ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ತಾವು ಮುಖಪುಟಗಳಲ್ಲಿ ಬರಬೇಕು ಏನೇನೋ ವಿಚಾರ ಹೇಳಿದ್ದೀರಿ ತಮ್ಮ ಅಪೇಕ್ಷೆಗೆ ನಾನು ಅತ್ಯಂತ ಚಿರಋಣಿಯಾಗಿದ್ದೇನೆ.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಮಾನ್ಯ ರಾಜ್ಯಪಾಲರ ಭಾಷಣ ಸರಿಯಿಲ್ಲ, ಆ ವ್ಯವಸ್ಥೆಯೇ ಸರಿಯಿಲ್ಲವೆಂದು ನಾನು ಮೊದಲಿನಿಂದಲೂ ವಿರೋಧ ಮಾಡುತ್ತಿದ್ದೇನೆ. ಅಂದರೆ ಅದು ರಾಜ್ಯಪಾಲರಿಗೆ ಅಗೌರವ ಮಾಡಬೇಕೆನ್ನುವ ಉದ್ದೇಶದಿಂದಲ್ಲ, ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ, ನಮ್ಮ ರಾಜ್ಯದ ರಾಜ್ಯಪಾಲರಾದಂಥ ಶ್ರೀಮಾನ್ ಖುರ್ಷಿದ್ ಅಲಂ ಖಾನ್‌ರವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಅದರ ಬಗ್ಗೆ ಎರಡು ಅಭಿಪ್ರಾಯವಿಲ್ಲ. ಆದರೆ ಆ ವ್ಯವಸ್ಥೆ ಏನಿದೆ ಸರ್ಕಾರ ತಯಾರು ಮಾಡಿದ ಭಾಷಣ, ಅದನ್ನು ಮಾನ್ಯ ರಾಜ್ಯಪಾಲರು ಓದತಕ್ಕಂಥದ್ದು ಅಲ್ಲದೆ ಅನೇಕ ಸಂದರ್ಭಗಳಲ್ಲಿ ರಾಜ್ಯಪಾಲರೇ ಸರ್ಕಾರವನ್ನು ಟೀಕೆ ಮಾಡಿರತಕ್ಕದ್ದೂ ಉಂಟು. ಆದರೆ ಅವರ ಭಾಷಣದಲ್ಲಿ ಮಾತ್ರ ನಮ್ಮ ಸರ್ಕಾರ ಒಳ್ಳೆಯ ಸಾಧನೆ ಮಾಡಿದೆ ಎಂದು ಹೇಳಿದ್ದಾರೆಯೇ ಹೊರತು ಒಂದಕ್ಷರವೂ ಕೂಡ ನಮ್ಮ ಸರ್ಕಾರ ಸರಿಯಿಲ್ಲ ಎಂದು ಹೇಳತಕ್ಕಂಥ ಶಕ್ತಿ ಅವರಿಗಿಲ್ಲ ಎಂದು ನಾನು ಹೇಳುವುದಿಲ್ಲ. ಆ ವ್ಯವಸ್ಥೆ ಅದು ಸಂಪೂರ್ಣವಾಗಿ ಒಂದು ರೀತಿಯ ಸಂಕೋಲೆಯಾಗಿದೆ. ಸರ್ಕಾರದ ಭಾಷಣವನ್ನು ಅವರು ಮಾಡಬೇಕಾದರೆ ಸರ್ಕಾರ ಒಂದು ಪರಕಾಯ ಪ್ರವೇಶ ಮಾಡಿ ಅವರ ರೂಪದಲ್ಲಿ ಭಾಷಣ ಮಾಡಿದ ರೀತಿ ಆಗುತ್ತದೆ. ಇದು ಒಂದು ರೀತಿಯ ಪ್ರಜಾಪ್ರಭುತ್ವದ ವ್ಯವಸ್ಥೆ. ನಮ್ಮ ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ. ಹೆಚ್. ಪಟೇಲ್‌ರವರು ಮತ್ತು ಗೋಪಾಲಗೌಡರು ಹಿಂದೆ ಈ ರಾಜಶಾಹಿ ಹೋಗಬೇಕು ಎಂದು ಹೇಳಿ ಹತ್ತಾರು ವರ್ಷಗಳ ಕಾಲ ಮೈಸೂರಿನಲ್ಲಿ ಜಂಬೂಸವಾರಿ ನಡೆಯುವಾಗ ಆ ಜಂಬೂಸವಾರಿಯ ಮುಂದೆ ಕಪ್ಪುಬಾವುಟವನ್ನುಪ್ರದರ್ಶನ ಮಾಡಿರತಕ್ಕಂಥದ್ದನ್ನು ಕೇಳಿದ್ದೇನೆ. ಇವತ್ತಿನ ದಿವಸ ಅದೇ ಶ್ರೀಮಾನ್ ಪಟೇಲರು ಮುಖ್ಯ-ಮಂತ್ರಿಗಳಾಗಿದ್ದಾರೆ. ಆದರೆ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂದರೆ ಅವರೊಬ್ಬರ ಕೈಯಲ್ಲಿ ಸಾಧ್ಯವಿಲ್ಲ. ಇಡೀ ದೇಶದಲ್ಲಿ ಸಮಗ್ರ ಚಿಂತನೆ ಆಗಬೇಕು. ಈ ವ್ಯವಸ್ಥೆ ಬದಲಾವಣೆ ಆಗಬೇಕು. ಆದುದರಿಂದ ಅವರನ್ನು ನೇರವಾಗಿ ನೀವು ಪಟೇಲರು ಹಿಂದೆ ಇದ್ದಂಥ ತಮ್ಮ ಸಿದ್ಧಾಂತ ಈಗ ಎಲ್ಲಿ ಹೋಯಿತು ಎಂದು ನಾನು ಕೇಳಲಿಕ್ಕೆ ಹೋದರೆ ಈ ವ್ಯವಸ್ಥೆಯನ್ನು ಅವರ ಮನಸ್ಸಿನಲ್ಲಿ ತಂದು ಅಥವಾ ಚರ್ಚೆಯ ವಸ್ತುವಾಗಿ ಮಾಡಿ ವ್ಯವಸ್ಥೆ ಸರಿಯಿಲ್ಲವೆಂದು ಹೇಳಬಹುದು. ಆದರೆ ನೇರವಾಗಿ ಇದು ಸರಿಯಿಲ್ಲವೆಂದು ಮುಖ್ಯ ಮಂತ್ರಿಗಳಾಗಿ ಹೇಳತಕ್ಕ ಒಂದು ಅವಕಾಶ ದೊರಕಿದರೂ ಅವರು ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ನಿಜವಾಗಲೂ ಸಂವಿಧಾನದ ಅತ್ಯಂತ ಉನ್ನತ ಸ್ಥಾನದಲ್ಲಿರುವವರು ರಾಜ್ಯಪಾಲರು. ಇದು ಒಂದಕ್ಕೊಂದು ವ್ಯವಸ್ಥೆ? ನಾನು ಏನು ಅಗೌರವ ಮಾಡತಕ್ಕದ್ದು ಅಲ್ಲ, ಅವರು ಬಂದು ಭಾಷಣ ಮಾಡತಕ್ಕಂಥದ್ದು, ಅವರು ಇಲ್ಲಿ

ಬಂದ ತಕ್ಷಣ ನಾವೆಲ್ಲ ಎದ್ದು ನಿಂತುಕೊಳ್ಳತಕ್ಕಂಥದ್ದು, ಅವರು ನಿಂತು ಕೊಂಡ ತಕ್ಷಣ ನಾವು ಕುಳಿತುಕೊಳ್ಳತಕ್ಕಂಥದ್ದು, ತಿರುಗಿ ಅವರು ಎದ್ದು ನಿಂತುಕೊಳ್ಳತಕ್ಕಂಥದ್ದು, ತಿರುಗಿ ಹೋಗತಕ್ಕಂಥದ್ದು ಇವೆಲ್ಲ ರಾಜ ಮಹಾರಾಜರಿಗೆ ಜೈ - ಪರಾಕ್ ಹಾಕುತ್ತಿದ್ದ ಆ ಕಾಲದ ಒಂದು ವ್ಯವಸ್ಥೆ ಆಗುತ್ತದೆಯೋ ಹೊರತು ಇದೊಂದು ಪ್ರಜಾತಂತ್ರದ ವ್ಯವಸ್ಥೆ ಅಲ್ಲ. ನನ್ನ ಪ್ರಕಾರ ರಾಜಭವನ ಎನ್ನುವ ಹೆಸರನ್ನು ಕೂಡ ನಾನು ಒಪ್ಪುವುದಿಲ್ಲ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ರಾಜ್ಯ ಎಂದ ಮೇಲೆ ಈ ರಾಜಭವನ ಎನ್ನುವ ಹೆಸರು ಇವೆಲ್ಲಾ ಇದೆಯಲ್ಲ ಅದು ನಿಜವಾಗಲೂ ಪ್ರಜಾತಂತ್ರದ ವ್ಯವಸ್ತೆಗೆ ಒಂದು ಒಳ್ಳೆಯ ಸಂಪ್ರದಾಯ ಅಲ್ಲ ಎನ್ನತಕ್ಕಂಥದ್ದು ನನ್ನ ಚಿಂತನೆ. ಇದರ ಬಗ್ಗೆ ದೇಶದಲ್ಲಿ ಚಿಂತನೆ ನಡೆಯಬೇಕಾಗಿದೆ. ರಾಜ್ಯಪಾಲರ ಭಾಷಣ ಇರಬೇಕೋ ಅಥವಾ ಬೇಡವೋ, ಅವರ ಭಾಷಣ ರೀತಿ ಆಗಬೇಕೋ, ಬೇಡವೋ ಎನ್ನತಕ್ಕಂಥ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ಆದರೆ ಒಂದು ಅತ್ಯಂತ ನೋವಿನ ಪ್ರಸಂಗ ಎಂದರೆ, ಅವರು ನಮ್ಮ ರಾಜ್ಯದ ರಾಜ್ಯಪಾಲರಾಗಿ 5 ವರ್ಷಗಳ ಆಗಿವೆ ನನಗೆ ಅವರ ಬಗ್ಗೆ ವೈಯಕ್ತಿಕವಾಗಿ ಏನೂ ಇಲ್ಲ. 5 ವರ್ಷಗಳಲ್ಲಿ ಅವರು ಕನ್ನಡ ಕಲಿಯಬಹುದಾಗಿತು, ನಮ್ಮ ಪ್ರಧಾನ ಮಂತ್ರಿಗಳು ದೆಹಲಿಯಲ್ಲಿ ಒಂದೇ ವರ್ಷದಲ್ಲಿ ಹಿಂದಿ ಕಲಿಯಲಿಕ್ಕೆ ಹೋಗಿದ್ದಾರೆ ತಾವು ನೋಡಿರಬಹುದು. ನಾನು ಹಿಂದಿಯಲ್ಲಿ ಭಾಷಣ ಮಾಡುತ್ತೇನೆ ಎಂದು ಹೇಳಿ ಆಗಲೇ ಉತ್ತರ ಪ್ರದೇಶದಲ್ಲಿ ಮಾತನಾಡಿದ್ದನ್ನು ನಾನು ದೂರದರ್ಶನದಲ್ಲಿ ನೋಡಿದೆ. ತಪ್ಪೋ ಒಪ್ಪೋ ಹಿಂದಿಯಲ್ಲಿ ಭಾಷಣ ಮಾಡಲಿಕ್ಕೆ ಶುರು ಮಾಡಿದರು. ಅಂದರೆ ಈ ದೇಶದ ಭಾಷೆ ಹಿಂದಿ ಇರಬೇಕು ಎಂದು ಹೇಳಿ ಭಾಷಣ ಮಾಡಲಿಕ್ಕೆ ಹೋದರು. ಆದರೆ ಮಾನ್ಯ ರಾಜ್ಯಪಾಲರು ಆ ಪ್ರಯತ್ನವನ್ನೇ ಮಾಡಿಲ್ಲವೆಂದು ನನಗನಿಸುತ್ತದೆ. ಅವರು ಪ್ರಯತ್ನವನ್ನು ಮಾಡಿದ್ದರೆ ಅವರಿಗೆ ಒಳ್ಳೆಯ ಕನ್ನಡ ಪಂಡಿತರು ಸಿಗುತ್ತಿದ್ದರು, 5 ವರ್ಷಗಳ ನಮೆಲ್ಲರನ್ನೂ ಮೀರಿಸುವಂಥ ರೀತಿಯಲ್ಲಿ ಕನ್ನಡದಲ್ಲಿ ಮಾತನಾಡುವ ಶಕ್ತಿ ಅವರಿಗೆ ಇತ್ತು. ಅವರು ಕನ್ನಡದಲ್ಲಿ ಮಾತನಾಡಬಹುದಾಗಿತ್ತು. ಅದರ ಬಗ್ಗೆ ನನ್ನದೇನೂ ತಕರಾರಿಲ್ಲ.

1.00 ಪಿ. ಎಂ.

ಆದರೆ ಮತ್ತೊಮ್ಮೆ ಈ ಸದನದ ಮೂಲಕ ಸನ್ಮಾನ್ಯ ರಾಜ್ಯಪಾಲರಿಗೆ ನಾನು ಹೇಳುವುದೇನಂದರೆ, ಮುಂದಿನ ಜಂಟಿ ಅಧಿವೇಶನದಲ್ಲಿಯಾದರೂ ಎಂದರೆ ಒಂದು ವರ್ಷದಲ್ಲಿ ಸರಿಯಾದಂಥ ಕನ್ನಡ ಪಂಡಿತರನ್ನು ರಾಜಭವನಕ್ಕೆ ಕರೆಯಿಸಿ ಅವರಿಂದ ಕನ್ನಡದ ಪಾಠವನ್ನು ಕೇಳಿ, ಒಂದು ಸುಂದರವಾದಂತಹಕನ್ನಡದ ಭಾಷಣವನ್ನು ಮಾನ್ಯ ರಾಜ್ಯಪಾಲರು ಇಲ್ಲಿ ಮಾಡಬೇಕೆಂದು ನನ್ನ ಆಸೆ. ಏಕೆಂದರೆ, ಶ್ರೀಮಾನ್ ಜೆ. ಹೆಚ್. ಪಟೇಲರವರು 1967ರಲ್ಲಿ ಲೋಕಸಭೆಯಲ್ಲಿದ್ದರು. ಆಗ ಲೋಹಿಯಾರವರು ಗೆದ್ದಿದ್ದರು. ಆಗ ಇಂಗ್ಲೀಷ್‌ನಲ್ಲಿ ಭಾಷಣ ಬೇಡ ಎನ್ನತಕ್ಕಂಥ ವಿಚಾರ ಬಂತು. ಆಗ ಮಾನ್ಯ ಲೋಹಿಯಾ ಹಾಗೂ ಮಾನ್ಯ ಪಟೇಲ್‌ರವರು ಯಾವ ಭಾಷೆಯಲ್ಲಿ ಮಾತನಾಡಬೇಕೆಂದು ವಿಚಾರ ಮಾಡಿ ರಾಜ್ಯಭಾಷೆಯಲ್ಲಿ ಮಾತನಾಡಬೇಕೆಂದು ಪ್ರಪ್ರಥಮವಾಗಿ ಕನ್ನಡದಲ್ಲಿ ಲೋಕಸಭೆಯಲ್ಲಿ ಭಾಷಣ ಮಾಡಿದಂತಹ ಕೀರ್ತಿ ಶ್ರೀಮಾನ್ ಜೆ. ಹೆಚ್. ಪಟೇಲ್‌ರವರಿಗೆ ಹೋಗುತ್ತದೆ. ಅದನ್ನು ನಾನು ಮೆಚ್ಚುತ್ತೇನೆ. ಆದರೆ ಈ ಐದು ವರ್ಷಗಳಲ್ಲಿ ರಾಜ್ಯಪಾಲರು ಕನ್ನಡ ಮಾತನಾಡಬಹುದಾಗಿತ್ತು ಎಂಬ ನೋವು ಅಷ್ಟೇ ಹೊರತು

ಅವರ ಮೇಲೆ ನನಗೆ ವೈಯಕ್ತಿಕವಾಗಿ ದ್ವೇಷವಾಗಲಿ, ಅಸೂಯೆಯಾಗಲಿ ಇಲ್ಲ. ಆ ದೃಷ್ಟಿಯಿಂದ ಮುಂದೆ ಬರತಕ್ಕಂಥ ಜಂಟಿ ಅಧಿವೇಶನದಲ್ಲಿ ಸಂಪೂರ್ಣವಾಗಿ ಅವರು ಕನ್ನಡದಲ್ಲಿ ಮಾತನಾಡಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೇ, ಬರುವ ವರ್ಷ ಮಾನ್ಯ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡಿದರೆ ಅದನ್ನು ಪ್ರತಿಭಟನೆ ಮಾಡಿ ಹೊರಗಡೆ ಹೋಗುವುದಿಲ್ಲ ತಾನೇ?

ಶ್ರೀ ವಾಟಾಳ್ ನಾಗರಾಜ್ : ಕನ್ನಡ ಭಾಷಣಕ್ಕೂ ಆ ವ್ಯವಸ್ಥೆಗೂ ಸಂಬಂಧ ಇಲ್ಲ.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಾಟಾಳ್‌ರೇ ತಾವು ಡೆಲ್ಲಿಗೆ ಹೋದಾಗಿ ಅಲ್ಲಿ ಟ್ಯಾಕ್ಸಿ ಬೇಕಾದರೆ ಟ್ಯಾಕ್ಸಿವಾಲಾ ಆವ್ ಎಂದು ಕರೆಯುತ್ತಿರೋ? ಅಥವಾ ಟ್ಯಾಕ್ಸಿ ಕರೆದುಕೊಂಡು ಬಾ ಎಂದು ಕರೆದರೆ ಯಾರು ತೆಗೆದುಕೊಂಡು ಬರುತ್ತಾರೆ? ಮಾನ್ಯ ವಾಟಾಳ್ ನಾಗರಾಜ್‌ರವರು ಹಿರಿಯರು, ಈ ಸದನದಲ್ಲಿ 25 ವರ್ಷಗಳಿಂದ ಇದ್ದವರು, ಡೆಲ್ಲಿಗೆ ಹೋದರೆ ಇವರು ಕನ್ನಡದಲ್ಲಿ ಕೇಳಿದರೆ ಟ್ಯಾಕ್ಸಿ ಯಾರು ತೆಗೆದುಕೊಂಡು ಬರುತ್ತಾರೆ? ಟ್ಯಾಕ್ಸಿಯವನು ಬರುವುದಿಲ್ಲ, ಇವರನ್ನು ಕರೆದುಕೊಂಡು ಹೋಗುವುದಿಲ್ಲ. ಅಲ್ಲಿ ಹೇಳಬೇಕೆಂದರೆ ಹಿಂದಿಯಲ್ಲಿ ಅಥವಾ ಇಂಗ್ಲೀಷ್‌ನಲ್ಲಿ ಹೇಳಬೇಕಾಗುತ್ತದೆ.

ಶ್ರೀಮತಿ ಬಿ. ಟಿ. ಲಲಿತಾನಾಯಕ್ : ಮಾನ್ಯ ಉಪಾಧ್ಯಕ್ಷರೇ, ಜಿಲ್ಲೆಯ ವಿಷಯ ತೆಗೆದುಕೊಂಡು ಕರ್ನಾಟಕಕ್ಕೆ ಅಪಮಾನ ಮಾಡುವುದು ಎಷ್ಟರಮಟ್ಟಿಗೆ ಸರಿ. ಅವರು ಬಂದರೂ ಇಲ್ಲಿ ಹಿಂದಿಯಲ್ಲಿ, ಇಂಗ್ಲೀಷ್‌ನಲ್ಲಿ ಹೇಳುವುದಿಲ್ಲ. ಅವರು ಯಾವ ಭಾಷೆಯಲ್ಲಿ ಮಾತನಾಡುತ್ತಾರೋ, ಆ ಭಾಷೆಯಲ್ಲಿ ಹೇಳುತ್ತಾರೆ. ಹಾಗೆಂದು ಡೆಲ್ಲಿಗೆ ಹೋಗುವ ವಿಷಯ ಇಟ್ಟುಕೊಂಡು ನಾವು ಇಲ್ಲಿ ಕನ್ನಡಕ್ಕೆ ಅಪಮಾನ ಮಾಡುವುದು ಬೇಡ.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೇ, ಕನ್ನಡ ತಾಯಿ ಬಗ್ಗೆ ಪ್ರೀತಿ ವಿಶ್ವಾಸ ಎಲ್ಲಾ ಇದೆ. ನಮ್ಮ ತಾಯಿಗೆ ನಾವು ವಿರೋಧ ಮಾಡುವುದಿಲ್ಲ.

ಉಪಾಧ್ಯಕ್ಷರು : ತಾವು ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡುವಾಗ ಮಾತನಾಡಿ. ಈಗ ವಾಟಾಳ್ ನಾಗರಾಜ್‌ರವರೆ ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಈಗ ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಚುನಾವಣೆ ನಡೆಯತಕ್ಕಂಥ ವ್ಯವಸ್ಥೆ ಇದೆಯಲ್ಲ, ಚುನಾವಣಾ ಪದ್ಧತಿ ಇದೆಯಲ್ಲ ಈಗ ಜನತಾ ಪ್ರಾತಿನಿಧ್ಯ ಕಾಯಿದೆ ಪ್ರಕಾರ ಶಾಸನಸಭೆಗೆ ಮತ್ತು ಲೋಕಸಭೆಗೆ ಎಷ್ಟು ಹಣವನ್ನು ಖರ್ಚು ಮಾಡಬೇಕೆನ್ನುವ ವ್ಯವಸ್ಥೆ ಇದೆ. ನಾವು, ನೀವು ಪ್ರಾಮಾಣಿಕವಾಗಿ ಎಲ್ಲಾ ಪಕ್ಷದವರೂ ಒಪ್ಪಿಕೊಳ್ಳೋಣ. ಜನತಾ ಪ್ರಾತಿನಿಧ್ಯ ಕಾಯಿದೆ ಪ್ರಕಾರ ಚುನಾವಣೆಯಲ್ಲಿ ನಾವು ಖರ್ಚು ಮಾಡುತ್ತಿದ್ದೇವೆಯೋ ಇಲ್ಲಾ ಆ ವ್ಯವಸ್ಥೆ ಇಲ್ಲ. ಲೋಕಸಭೆಗೆ ಎಷ್ಟು ಮತ್ತು ಶಾಸನ ಸಭೆಗೆ ಎಷ್ಟು ಎಂದು ಇಟ್ಟಿದ್ದಾರೆ, ನಾವು ಆ ಪ್ರಕಾರ ಖರ್ಚು ಮಾಡುತ್ತಿಲ್ಲ. ಎಂದರೆ ತೆರೆಮರೆಯಲ್ಲಿ ಬ್ರಷ್ಟಾಚಾರಕ್ಕೆ ನೇರವಾಗಿ ಅವಕಾಶ ಕೊಟ್ಟ

ಹಾಗೆ ಆಗುತ್ತದೆ. ಈ ದೃಷ್ಟಿಯಿಂದ ಸಮಗ್ರ ಚುನಾವಣೆ ಕಾಯಿದೆಯನ್ನು ಬದಲಾವಣೆ ಮಾಡಬೇಕು ಮತ್ತು ಮತದಾನದ ಪದ್ಧತಿ ಕಡ್ಡಾಯವಾಗಬೇಕು. ಕಡ್ಡಾಯ ಮತದಾನ ಪದ್ಧತಿ ಬಗ್ಗೆ ಈ ದೇಶದ ಎಲ್ಲಾ ಶಾಸನಸಭೆಗಳು ನಿರ್ಣಯವನ್ನು ಮಾಡಬೇಕು. ಆ ರೀತಿ ಮಾಡಲಿಲ್ಲವೆಂದರೆ ನಾವು ಕಾಯಿದೆಗೂ ಅಪಚಾರ ಮಾಡಿದಹಾಗೆ ಆಗುತ್ತದೆ ಮತ್ತು ಮುಂದೆ ಚುನಾವಣೆಗೆ ಹಣ ಇದ್ದವರು ಮಾತ್ರ ನಿಲ್ಲಬೇಕು, ಹಣ ಇಲ್ಲದವರು ನಿಲ್ಲುವುದಕ್ಕೆ ಆಗುವುದಿಲ್ಲ ಎನ್ನುವ ವಿಚಾರ ಬರುತ್ತದೆ. ಇತ್ತೀಚಿಗೆ ಕೆಲವು ಉಪಚುನಾವಣೆಗಳಿಗೆ ಲಕ್ಷ ರೂಪಾಯಿಗಳಲ್ಲ, ಕೋಟಿಗಟ್ಟಲೆ ಖರ್ಚು ಮಾಡಿದರೂ ಕೂಡ ಗೆಲ್ಲತಕ್ಕಂಥ ಪರಿಸ್ಥಿತಿ ಇಲ್ಲ. ಲೋಕಸಭೆಗೆ ಹತ್ತಾರು ಕೋಟಿ ಖರ್ಚು ಮಾಡತಕ್ಕಂಥ ವ್ಯವಸ್ಥೆಯಾಗಿದೆ. ಯಾರು ಜಾಸ್ತಿ ಹಣ ಖರ್ಚು ಮಾಡುತ್ತಾರೆ ಅವರಿಗೆ ಆ ಸ್ಥಾನ ಎನ್ನುವಂತಹ ವ್ಯವಸ್ಥೆ ಬಂದಿರುವಾಗ ಚುನಾವಣೆ ಪದ್ಧತಿ ಸಮಗ್ರವಾಗಿ ಬದಲಾವಣೆಯಾಗಬೇಕು. ಅದರಲ್ಲಿ ಕಡ್ಡಾಯ ಮತದಾನದ ಪದ್ಧತಿ ಇರಲೇಬೇಕು. ಆಗ ಮಾತ್ರ ಪ್ರಜಾಪ್ರಭುತ್ವದಲ್ಲಿ ಅದಕ್ಕೆ ಒಂದು ಒಳ್ಳೆಯ ಆಯಾಮ ಸಿಗುತ್ತದೆ ಶಕ್ತಿ ಸಿಗುತ್ತದೆ ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ. ಜೊತೆಗೆ ಇತ್ತೀಚಿನ ದಿನಗಳಲ್ಲಿ ತಾವು ನೋಡುತ್ತಿದ್ದೀರಿ, ಪಕ್ಷ ಬಿಟ್ಟಾಗ ಒಂದು ಮೇಳ, ಪಕ್ಷ ಸೇರುವಾಗ ಒಂದು ಮೇಳ. ಮತ್ತು ಈ ಮೇಳಗಳು ಯಾವರೀತಿ ನಡೆಯುತ್ತವೆ. ಸಾಮಾನ್ಯವಾಗಿ ನಾವಾಗಲಿ ರೈತಸಂಘದವರಾಗಲಿ, ಕಮ್ಯೂನಿಸ್ಟ್ ಪಕ್ಷದವರಾಗಲಿ, ಈ ತರಹದ ಮೇಳಗಳನ್ನು ಮಾಡತಕ್ಕಂಥ ಶಕ್ತಿ ನಮಗಂತೂ ಇಲ್ಲ. ಅದು ಯಾವ ತರಹ? ಆ ವ್ಯವಸ್ಥೆ ಅದರಿಂದ ಏನಾಗುತ್ತದೆ? ತತ್ವದಿಂದ ಮೇಳಗಳು ನಡೆಯುತ್ತತ್ತದೆಯೇ? ಅಥವಾ ಯಾವ ಆಧಾರದ ಮೇಲೆ ನಡೆಯುತ್ತದೆ? ಆದುದರಿಂದ ಇಂತಹ ಮೇಳಗಳಿಂದ ಚುನಾವಣೆ ವ್ಯವಸ್ಥೆ, ಪ್ರಜಾತಂತ್ರದ ವ್ಯವಸ್ಥೆಯ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಇನ್ನು ಶಾಸನ ಸಭೆಯನ್ನು ಕರೆಯುವ ಬಗ್ಗೆ ಹೇಳಬೇಕಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿಮನವಿ ಮಾಡಿ ಕೊಳ್ಳುತ್ತೇನೆ. ನಾನು ಇಲ್ಲಿ ಹೆಚ್ಚು ಕಡಿಮೆ ಸುಮಾರು 1967ರಿಂದ ಇದ್ದೇವೆ. ಅದು ಅವರಿಗೂ ಗೊತ್ತಿದೆ. ಇಲ್ಲಿ ಎಷ್ಟು ದಿನಗಳು ಶಾಸನಸಭೆಯನ್ನು ಕರೆಯಬೇಕೆಂದು ನಿರ್ಧಾರವಾಗಬೇಕು. ಈ ಶಾಸನಸಭೆ ಪರಮಪವಿತ್ರವಾದಂಥ ಈ ನಾಡಿನ ಜನತೆಯ ಪ್ರಾತಿನಿಧ್ಯವನ್ನು ಪಡೆದಿರತಕ್ಕಂಥ ಸಭೆ. ಈ ಸಭೆ 62 ಹಾಗೂ 67 ಅದರ ಹಿಂದೆ ಆದರ ಹಿಂದೆ ಲೆಕ್ಕ ಹಾಕಿದ್ದೇನೆ. 70 ದಿವಸ 80 ದಿವಸ 90 ದಿನಗಳು ನಡೆದಿರತಕ್ಕಂಥಾದ್ದು ಉಂಟು. ಹೋದ ಬಾರಿ ರಾಜ್ಯಪಾಲರ ಭಾಷಣ ಹಾಗೂ ಅಯವ್ಯಯ ಸೇರಿ ಕೇವಲ 40 ದಿನಗಳು ಮಾತ್ರ ನಡೆದಿದೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿ ಕೊಳ್ಳುವುದೇನೆಂದರೆ, ಲೋಕಸಭೆಯನ್ನು ಯಾವ ರೀತಿ ಕಾಲಕಾಲಕ್ಕೆ ಕರೆಯುತ್ತಾರೆ ಅದೇ ರೀತಿ ಶಾಸನಸಭೆಯನ್ನು ಇಡೀ ವರ್ಷದಲ್ಲಿ ನೂರು ದಿನಗಳ ಕಾಲ ಯಾವ್ಯಾವಾಗ ಕರೆಯಬೇಕು ಎನ್ನುವುದನ್ನು ವ್ಯವಸ್ಥೆ ಮಾಡಿದರೆ ಈ ಸದನಕ್ಕೂ ಶಕ್ತಿ ಬರುತ್ತದೆ, ಮತ್ತು ಸರ್ಕಾರಕ್ಕೂ ಶಕ್ತಿ ಬರುತ್ತದೆ ಎಂದು ನನಗನ್ನಿಸುತ್ತದೆ. ಯಾವಾಗಲೋ ಒಂದು ಸಾರಿ ಕರೆಯುವಂಥ ವ್ಯವಸ್ಥೆಯಾದರೆ ಈ ಶಾಸನಸಭೆಯ ವ್ಯವಸ್ಥೆಗೆ ಅಪಚಾರ ಮಾಡಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಹೇಳುತ್ತಾ, ಈ ಶಾಸನಸಭೆಯನ್ನು ಕನಿಷ್ಟ ನೂರು ದಿನಗಳ ಕಾಲ ಕುಳಿತುಕೊಳ್ಳುವುದಕ್ಕೆ ಸರ್ಕಾರ ತೀರ್ಮಾನ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮೊನ್ನೆ ಮಾನ್ಯ ನಂಜೇಗೌಡರು ಬಹಳ ಚೆನ್ನಾಗಿ

ಮಾತನಾಡಿದರು. ಅವರು ನ್ಯಾಯಾಂಗದ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು. ಅದಕ್ಕೆ ಒತ್ತು ಬರುವಂತಹ ರೀತಿಯಲ್ಲಿ ನಿನ್ನೆ ನಿಯೋಜಿತ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡಿದೆ. ನ್ಯಾಯಾಂಗಕ್ಕೆ ಕಾನೂನು ರಿಯಾಯತಿ ಇಲ್ಲ. ನಿಯೋಜಿತ ಮುಕ್ಯ ನ್ಯಾಯಾಧೀಶರಾದ ಜಿ. ಎಸ್. ವರ್ಮ ಎಷ್ಟು ಚೆನ್ನಾಗಿ ಮಾತನಾಡಿದ್ದಾರೆಂದರೆ ಕಾರ್ಯಾಂಗ ಮತ್ತು ಅದರ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಬೇಕೆಂದು ನಿರ್ದೇಶನ ನೀಡುವ ನ್ಯಾಯಾಂಗ ಕೂಡ ಕಾನೂನಿನಿಂದ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗದ ಕ್ರಿಯಾಶೀಲತೆ, ಕಾರ್ಯಾಂಗದ ವ್ಯವಸ್ಥೆ, ಶಾಸಕಾಂಗದ ಪರಿಸ್ಥಿತಿ, ಇವು ಒಂದಕ್ಕೊಂದು ಅದರದರ ಹಂತದಲ್ಲಿ ಹೆಚ್ಚಿನದಾಗಿದೆ. ಇವು ಒಂದರ ಮೇಲೆ ಒಂದು ಸವಾರಿ ಮಾಡುವುದಕ್ಕೆ ಹೊರಟನೆ ದೇಶದಲ್ಲಿ ಒಂದು ರೀತಿಯಲ್ಲಿ ಅನಾಯಕತ್ವದ ಪ್ರಾರಂಭವಾದರೂ ಆಗುತ್ತದೆ. ಆ ಅನಾಯಕತ್ವವನ್ನು ತಪ್ಪಿಸತಕ್ಕಂಥ ವ್ಯವಸ್ಥೆ ಆಗಬೇಕು ಎಂದರೆ ಯಾವುದರ ಮೇಲೆ ಯಾವ ರೀತಿ ನಾವು ಸವಾರಿ ಮಾಡಬೇಕು ಎನ್ನುವುದರ ಬಗ್ಗೆ ಇತಿಮಿತಿ ಹಾಕಿಕೊಳ್ಳಬೇಕು. ಆ ದೃಷ್ಟಿಯಿಂದ ನಿನ್ನ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮುಖ್ಯ ನ್ಯಾಯಾಧೀಶರು ಹೇಳಿರತಕ್ಕಂಥ ಮಾತು ಅತ್ಯಂತ ಸಮಂಜಸವಾದುದು. ಆ ದೃಷ್ಟಿಯಿಂದ ನಾನು ಅದನ್ನು ಸ್ವಾಗತ ಮಾಡುತ್ತೇನೆ. 1956ರಲ್ಲಿ ಕರ್ನಾಟಕದ ಏಕೀಕರಣವಾಯಿತು. ಏಕೀಕರಣವಾಗಿ 40-41 ವರ್ಷಗಳಾಯಿತು. ಈ 41 ವರ್ಷಗಳಲ್ಲಿ ಜಿಲ್ಲೆಗಳ ಪುನರ್ ವಿಂಗಡಣೆಯಾಗಿಲ್ಲ. ಹೈದರಾಬಾದ್- ಕರ್ನಾಟಕ ಮತ್ತು ಬಾಂಬೆ ಕರ್ನಾಟಕದ ಹಾಗೂ ಮದರಾಸಿನಿಂದ ಅನೇಕ ಪ್ರದೇಶಗಳು ಸೇರಿ ಕರ್ನಾಟಕ ಏಕೀಕರಣವಾಯಿತು. ಅಲ್ಲಿಂದ ಇಲ್ಲಿನವರೆಗೆ ನಾವು ನೋಡಿದಾಗ ಅಸಮಾನತೆ ಇದೆ. ಆ ಅಸಮಾನತೆಯನ್ನು ನಾವು ಸರಿದೂಗಿಸಬೇಕು. ಒಂದನೆಯದು ಜಿಲ್ಲೆಗಳ ಪುನರ್ ವಿಂಗಡಣೆ ಆಗಲೇಬೇಕು. ಇದರಲ್ಲಿ ರಾಜೀ ಮಾತು ಇಲ್ಲವೇ ಇಲ್ಲ, ಕೆಲವು ಕಡೆ ವಿರೋಧ ಆಗಬಹುದು, ಕೆಲವು ಕಡೆ ಪರ ಆಗಬಹುದು. ಅದಕ್ಕಾಗಿ ಸರ್ಕಾರ ಅದನ್ನು ಮುಂದೆ ಹಾಕತಕ್ಕಂಥ ವ್ಯವಸ್ಥೆ ಒಳ್ಳೆಯದಲ್ಲ. ವಿರೋಧ ಇದ್ದೇ ಇರುತ್ತದೆ. ಈಗ ಯಾರಿಗಾದರೂ ಒಬ್ಬರಿಗೆ ಪರ ಆಗುತ್ತೆ ಇಲ್ಲದಿದ್ದರೆ ವಿರೋಧ ಆಗುತ್ತದೆ. ಆದರೆ ಪ್ರಾಮಾಣಿಕವಾಗಿ ಮಾಡತಕ್ಕಂಥ ವ್ಯವಸ್ಥೆ ಏನು ಇದೆ ಆ ದೃಷ್ಟಿಯಿಂದ ತಮಗೆ ನೇರವಾಗಿ ಮೂರು ಸಮಿತಿಗಳನ್ನು ಆದೇಶವನ್ನು ಕೊಟ್ಟಿದೆ. ಗದ್ದೀಗೌಡರ ಸಮಿತಿ, ಹುಂಡೇಕರ್ ಸಮಿತಿ, ವಾಸುದೇವ ಸಮಿತಿ. ಈ ಮೂರು ಸಮಿತಿಗಳು ನೇರವಾಗಿ ನಿಮಗೆ ಒಂದು ಆದೇಶವನ್ನು ಕೊಟ್ಟಿದೆ. ಈ ಪ್ರಕಾರ ಚಾಮರಾಜನಗರವೂ ಸೇರಿದಂತೆ ಒಟ್ಟು 11-9 ಈ ತರಹ ಒಂದೊಂದರ ರೀತಿಯಲ್ಲಿ ನಿರ್ಧಾರಗಳಿವೆ. ಮೊದಲು ತಾವು ನವೆಂಬರ್ 1ನೇ ತಾರೀಖು ಮಾಡುತ್ತೇವೆ ಎಂದು ಹೇಳಿದಿರಿ, ನಂತರ ಜನವರಿ 26 ಕ್ಕೆ ಮಾಡುತ್ತೇವೆಂದು ಹೇಳಿದಿರಿ, ಯಾವುದೇ ಕಾರಣಕ್ಕೆ ನಿಲ್ಲಿಸುವುದಿಲ್ಲ, ಏನೇ ಬರಲಿ ಶತಾಯ- ಗತಾಯ ಮಾಡುತ್ತೇವೆ ಎನ್ನತಕ್ಕಂಥ ನಿರ್ಧಾರವನ್ನು ತೆಗೆದುಕೊಂಡಿರಿ, ಅದಕ್ಕಾಗಿ ನಾನು ನಿಮ್ಮನ್ನು ಮೆಚ್ಚುತ್ತೇನೆ. ನೀವು ಒತ್ತಡಕ್ಕೂ ಮಣಿಯಬೇಡಿ ನಾನು ನಿಮಗೆ ಇವೊತ್ತಿನ ದಿನ ಹೇಳುತ್ತಿದ್ದೇನೆ, ಜಿಲ್ಲೆಗಳನ್ನು ಈ ಶಾಸನಸಭೆಯಲ್ಲೆ ನಿರ್ಧಾರ ಮಾಡಿ, ನೀವು ಅದನ್ನು ಪ್ರಕಟಣೆ ಮಾಡಲೇಬೇಕು ಒಂದು ವಿಚಾರ ಹೇಳುತ್ತೇನೆ, ಕರ್ನಾಟಕ ಏಕೀಕರಣ ಮಾಡಿ, ಹನುಮಂತಯ್ಯನವರು ಇತಿಹಾಸದಲ್ಲಿ ಹೋಗಿದ್ದಾರೆ,

ನಿಜಲಿಂಗಪ್ಪನವರು ಇತಿಹಾಸದಲ್ಲಿ ಹೋಗಿದ್ದಾರೆ. ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದಂಥ ದೇವರಾಜು ಅರಸುರವರು ಇತಿಹಾಸದಲ್ಲಿ ಹೋಗಿದ್ದಾರೆ. ಕನ್ನಡ ರಾಜ್ಯವನ್ನು ಪುನರ್ ವಿಂಗಡಣೆ ಮಾಡಿ ಜಿಲ್ಲೆಗಳನ್ನು ಮಾಡತಕ್ಕಂಥದ್ದರಲ್ಲಿ ನೀವು ಇತಿಹಾಸದಲ್ಲಿ ಹೋಗುತ್ತೀರಿ. ಇತಿಹಾಸದಲ್ಲಿ ಉಳಿಯಬೇಕೆಂದು ಇವೊತ್ತು ಅತ್ಯಂತ ಕಳಕಳಿಯಿಂದ ನಿಮಗೆ ಈ ಮಾತನ್ನು ಹೇಳುತ್ತಿದ್ದೇನೆ. ತಾವು ಈ ಮಾತಿನಿಂದ ಹಿಂದೆ ಹೋಗಲೇಬೇಡಿ. ಯಾರು ಏನೇ ಬರಲಿ, ಎಂತಹ ಸಂದರ್ಭ ಬರಲಿ ಈ ವಿಚಾರದಲ್ಲಿ ಎಲ್ಲಿ ಏನೇ ಆದರೂ ಚಿಂತೆ ಇಲ್ಲ ಇದರಲ್ಲಿ ಮಾತ್ರ ತಾವು ಸ್ಪಷ್ಟತೆ ಇರಲೇಬೇಕು. ತಾವು ಹಿಂದೆ ಮುಂದೆ ಬೀಳತಕ್ಕಂಥ ಗೋಜಿಗೆ ಹೋಗಬಾರದು ಎಂಬ ಮಾತನ್ನು ತಮ್ಮಲ್ಲಿ ಈ ಮೂಲಕ ನಾನು ಕಳಕಳಿಯಿಂದ ಹೇಳುತ್ತೇನೆ. ನನ್ನ ಸಂಪೂರ್ಣವಾದಂಥ ಬೆಂಬಲ ಇದೆ, ನಾಡಿನ ಜನತೆಯ ಬೆಂಬಲ ಇದೆ. ಅನೇಕ ದೊಡ್ಡ ದೊಡ್ಡ ಜಿಲ್ಲೆಗಳು ಅಂದರೆ ಬಿಜಾಪುರ ಆಗಿರಬಹುದು, ಗುಲ್ಬರ್ಗಾ ಆಗಿರಬಹುದು, ಬೀದರ್ ಆಗಿರಬಹುದು, ಬೆಳಗಾಂ ಆಗಿರಬಹುದು. ಆ ಜಿಲ್ಲೆಗಳು ಅಲ್ಲಿನ ಆಡಳಿತ ವ್ಯವಸ್ಥೆ, ಜನಸಾಮಾನ್ಯರ ಪರಿಸ್ಥಿತಿ ಇವೆಲ್ಲವನ್ನೂ ನೋಡಿದಾಗ ಜಿಲ್ಲೆಗಳ ಪುನರ್‌ವಿಂಗಡಣೆ ಅತಿಮುಖ್ಯವಾಗಿ ಆಗಬೇಕಾಗಿದೆ. ನಿಮ್ಮಲ್ಲಿ ಆ ಸ್ಥೈರ್ಯ ಇತ್ತು. ಪ್ರಾರಂಭದಲ್ಲಿ ನೀವು ಹೇಳಿದಿರಿ, ಯಾರು ಏನೇ ಬರಲಿ ಮಾಡುತ್ತೇನೆ ಎಂದು. ಏಕೆ ಹಿಂದೆ ಬೀಳುತ್ತಿದ್ದೀರಿ, ಕಾರಣ ಏನು? ಉದ್ದೇಶಗಳೇನು? ಇರಬಹುದು, ನಿಮ್ಮ ಸಚಿವಸಂಪುಟದಲ್ಲಿ ಇರಬಹುದು, ನಿಮ್ಮ ಸಹೋದ್ಯೋಗಿಗಳು ಇರಬಹುದು. ಆದರೆ ಒಂದು ಒಳ್ಳೆಯ ಕೆಲಸವನ್ನು ಮಾಡುವಾಗ ಅನೇಕ ವಿಧವಾದ ಅಡ್ಡಿಆತಂಕಗಳು ಬರುತ್ತದೆ. ಯಾವುದೇ ಅಡ್ಡಿಆತಂಕ ಬಂದರೂ ಇತಿಹಾಸದಲ್ಲಿ ಹೋಗತಕ್ಕಂಥದ್ದರಲ್ಲಿ ಜೆ. ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಆರು ಹೊಸ ಜಿಲ್ಲೆಗಳು ಬಂದವು ಎಂಬ ಕೀರ್ತಿ ತಮಗೆ ಬರುತ್ತದೆ ಎಂದು ಹೇಳುತ್ತೇನೆ. ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಕರ್ನಾಟಕ ಏಕೀಕರಣಕ್ಕೆ ಸಂಪೂರ್ಣ ವಿಪ್ ತೆಗೆದುಕೊಂಡು ಏಕೀಕರಣದ ವಿರುದ್ಧ ಯಾರೂ ಓಟು ಹಾಕಬಾರದು ಎಂದು ತೀರ್ಮಾನ ಮಾಡಿದಾಗ ಆಗ ಅದರ ವಿರುದ್ಧ ಓಟು ಹಾಕಿದವರು ಎ. ಜಿ. ರಾಮಚಂದ್ರರಾವ್, ಕಡಿದಾಳ್ ಮಂಜಪ್ಪ, ಅದು ತಮಗೆಲ್ಲಾ ಗೊತ್ತಿದೆ. ಆ ಸಂದರ್ಭದಲ್ಲಿ ಹಿಂದಿನ ರಾತ್ರಿ ನಮ್ಮ ರಾಜ್ಯ ಹಿರಿಯ ಸಾಹಿತಿಗಳಾದ ಶ್ರೀ ಬಿ. ಶಿವಮೂರ್ತಿ ಸ್ವಾಮಿಗಳು ಹನುಮಂತಯ್ಯನವರ ಮನೆಗೆ ಹೋದರು, ಹನುಮಂತಯ್ಯನವರ ನಾಳೆ ಬೆಳಿಗ್ಗೆ ನೀವು ಕರ್ನಾಟಕ ಏಕೀಕರಣಕ್ಕೆ ಬೆಂಬಲ ಕೊಡಬೇಕು ಎಂದು. ಹನುಮಂತಯ್ಯನರರು ಒಂದು ಮಾತು ಹೇಳಿದರು, ನಾನು ಬೆಂಬಲ ಕೊಟ್ಟ ತಕ್ಷಣ ನನ್ನ ಅಧಿಕಾರ ಹೋಗುತ್ತದೆ ಎಂದು. ಆಗ ಬಿ. ಶಿವಮೂರ್ತಿ ಸ್ವಾಮಿಗಳು ಹೇಳಿದರು ನಿಮ್ಮ ಅಧಿಕಾರ ಹೋದರೂ ಚಿಂತೆ ಇಲ್ಲ ನೀವು ಇತಿಹಾಸದಲ್ಲಿ ಉಳಿಯುತ್ತೀರಿ ಎಂದು. ಆ ಧೈರ್ಯ ಶಕ್ತಿ ಇದೆ, ಅಧಿಕಾರ ಹೋಗುತ್ತದೆ ಎನ್ನತಕ್ಕಂಥದ್ದಲ್ಲ, ನನ್ನ ಸಂಪೂರ್ಣ ಭರವಸೆ ಇದೆ, ತಮಗೆ ನಮ್ಮೆಲ್ಲರ ಸಹಕಾರ ಇದೆ, ರಾಜ್ಯದ ಐದು ಕೋಟಿ ಕನ್ನಡಿಗರ ಬೆಂಬಲ ಸಿಗುತ್ತದೆ. ಆದ್ದರಿಂದ ಹೊಸ ಜಿಲ್ಲೆಗಳನ್ನು ನಿರ್ಮಾಣ ಮಾಡಬೇಕೆಂದು ಕಳಕಳಿಯಿಂದ ಹೇಳುತ್ತಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಬಹಳ ದೊಡ್ಡದಾಗಿರತಕ್ಕಂಥ ಜಿಲ್ಲೆಗಳನ್ನು ಆಡಳಿತಾತತ್ಮಕವಾಗಿ ಮತ್ತು ಸಾಮಾನ್ಯ ಜನರ ಹಿತದೃಷ್ಟಿಯಿಂದ ವಿಭಜನೆ ಮಾಡಿ

ಮ್ಯಾನೇಜಬಲ್, ಅಂದರೆ ಆಡಳಿತಾತ್ಮಕವಾಗಿ ಸರಿದೂಗಿಸುವ ದೃಷ್ಟಿಯಿಂದ ದೊಡ್ಡ ಜಿಲ್ಲೆಗಳನ್ನು ವಿಭಜನೆ ಮಾಡುವ ತತ್ವವನ್ನು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದನ್ನು ಒಪ್ಪಿದೆ. ಅದಕ್ಕೇ ಇದನ್ನು ರಾಜ್ಯಪಾಲರ ಭಾಷಣದಲ್ಲಿ ಏಕೆ ಸೇರಿಸಿದ್ದೇವೆ ಎಂದರೆ ಸರ್ಕಾರ ಆ ಕಡೆ ಉದ್ದೇಶ ಮಾಡಿದೆ ಎಂದು. ಆ India has been accepted. ಆದರೆ ಫೈನಾನ್ಷಿಯಲ್ ಇಂಪ್ಲಿಕೇಷನ್ ಮತ್ತು ಅಡ್ಮಿನಿಸ್ಟ್ರೇಟಿವ್ ಸೆಟಪ್ ಮಾಡಬೇಕಲ್ಲ. ನಾನು ಅದಕ್ಕೆ ಏನು ಯೋಚನೆ ಮಾಡಿದ್ದೇನೆ ಎಂದರೆ ಹೆಚ್ಚು ಖರ್ಚು ಮಾಡದ ಹಾಗೆ ಈಗ ಇರತಕ್ಕಂಥ ವ್ಯವಸ್ಥೆಯನ್ನೇ ಉಪಯೋಗ ಮಾಡಿಕೊಂಡು, ಏಕೆಂದರೆ ಮತ್ತೆ ಹೊಸದಾಗಿ ಒಂದು ಎಸ್. ಪಿ. ಆಫೀಸ್, ಒಂದು ಜಿಲ್ಲಾಧಿಕಾರಿಗಳ ಆಫೀಸ್, ಇವೆಲ್ಲ ಹಣಕಾಸಿನ ತೊಂದರೆಯಿಂದಾಗಿ ಮಾಡಲಿಕ್ಕಾಗುವುದಿಲ್ಲ. ಮಾನ್ಯ ವಾಟಾಳ್‌ರವರೆ, ನಾನು ಅದರ ವಿರುದ್ಧ ಹೋಗುತ್ತೇನೆ ಎಂದು ಅಲ್ಲ. ಆದರೆ ಅದನ್ನು ಜಾರಿಗೆ ತರುವಾಗ ಇನ್‌ಫ್ರಾಸ್ಟ್ರಕ್ಚರ್ ಅಂಡ್ ಎಕ್ಸ್‌ಪೆಂಡಿಚರ್ ಅಂಡ್ ಆಲ್‌ಸೋ ಅಡ್ಮಿನಿಸ್ಟ್ರೇಟಿವ್ ಸ್ಟಾಫ್ ಇದನ್ನು ಹೇಗೆ ಸರಿದೂಗಿಸಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇನೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ನನಗನಿಸುತ್ತದೆ, ಅದೆಲ್ಲ ನೀವು ಚಿಂತನೆ ಮಾಡಬೇಕು, ಅದರ ಬಗ್ಗೆ ಚಿಂತನೆ ಮಾಡಬಾರದು, ಏಕಾಏಕಿ ಮಾಡಬೇಕು ಎನ್ನತಕ್ಕಂಥದ್ದಲ್ಲ. ಹಣಕಾಸಿನ ಹೊರೆ ಜಾಸ್ತಿ ಬರುತ್ತದೆ ಎಂದು ನಾನು ಅಂದುಕೊಂಡಿಲ್ಲ. ಈಗ ಇರತಕ್ಕಂಥ ಕಟ್ಟಡಗಳನ್ನೆ ತಾವು ಉಪಯೋಗಿಸಿಕೊಳ್ಳಬಹುದು. ಈಗ ಅನೇಕ ಕಡೆ ಮಿನಿ ವಿಧಾನಸೌಧ ಕಟ್ಟಿದ್ದಾರೆ, ಅದರಲ್ಲೆ ತಾವು ಜಿಲ್ಲಾಧಿಕಾರಿ ಕಛೇರಿಗಳನ್ನು ಮಾಡಬಹುದು, ಡಿವೈಎಸ್‌ಪಿ ಆಫೀಸನ್ನೇ ತಾವು ಎಸ್. ಪಿ. ಆಫೀಸ್ ಮಾಡಬಹುದು, ಇದೇನು ದೊಡ್ಡದಲ್ಲ. ಆದ್ದರಿಂದ ಇದರಿಂದ ತಮಗೆ ಹೆಚ್ಚಿಗೆ ಹೊರೆ ಬರುತ್ತದೆ ಎಂದು ನಾನು ಅಂದುಕೊಂಡಿಲ್ಲ. ದಯವಿಟ್ಟು ತಾವು ಅದನ್ನು ಪರಿಶೀಲನೆ ಮಾಡಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ. ಆದರೆ ಈ ಸದನ ಮುಗಿಯುವುದರೊಳಗಾಗಿ ತಾವು ಒಂದು ತೀರ್ಮಾನಕ್ಕೆ ಬರಬೇಕು. ಏಕೆಂದರೆ, ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಿ, ಅಂದರೆ ತಮ್ಮ ಸರ್ಕಾರದ ನೀತಿ, ಆ ನೀತಿಯಿಂದ ಹಿಂದೆ ಹೋದರೆ, ನನಗೆ ಒಂದು ಅನಿಸುತ್ತದೆ ನೀವು ಮಾಡಲಿಕ್ಕೆ ಆಗಲಿಲ್ಲ ಎಂದು ಹೇಳಿದರೆ ಇನ್ಯಾರೂ ಮಾಡಲಿಕ್ಕೆ ಸಾಧ್ಯವಿಲ್ಲ, ಮಾಡುವುದಿಲ್ಲ. ಅದನ್ನು ಸ್ಪಷ್ಟವಾಗಿ ಹೇಳಿದ್ದೇನೆ, ಅದನ್ನು ತಾವು ಬಹಳ ಪ್ರಾಮಾಣಿಕವಾಗಿ ಮಾಡಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಈಗ ಕರ್ನಾಟಕ ಏಕೀಕರಣ ಆಗಿದ್ದರೂ ಭಾವನಾತ್ಮಕವಾಗಿ ನಾವು ಇನ್ನೂ ಒಂದಾಗಿಲ್ಲ. ಏಕೀಕರಣ ಆಗಿದೆ, ಏಕೀಕರಣದ ಬಗ್ಗೆ ಅತ್ಯಂತ ದೊಡ್ಡ ಹೋರಾಟ ನಡೆಯಿತು, ಕೊಡಗು ಈ ಕಡೆ ಬೇರೆ ಬೇರೆ ರಾಜ್ಯಗಳಿಂದ ಬಂದಂಥ ಎಲ್ಲಾ ಪ್ರದೇಶಗಳಿವೆ. ಕರ್ನಾಟಕ ಏಕಿಕರಣಕ್ಕೆ ತ್ಯಾಗ, ಬಲಿದಾನ, ಅನೇಕರ ಶ್ರಮ ಆ ಬಲದಿಂದ ಕರ್ನಾಟಕ ಏಕೀಕರಣ ಆಯಿತು. ಇವೊತ್ತು ಎಲ್ಲೋ ಒಂದು ಕಡೆ ಅಪಸ್ವರ ಬರುತ್ತಾ ಇದೆ. ಎರಡು ಕರ್ನಾಟಕ ಆಗಬೇಕು ಎಂದು ಒಂದು ಅಪಸ್ವರ, ಕೊಡಗೇ ಬೇರೆ ಆಗಬೇಕು ಎಂದು ಒಂದು ಅಪಸ್ವರ. ಈ ಅಪಸ್ವರ ಬರುವುದಕ್ಕೆ ಕಾರಣಗಳಿವೆ, ಆದರೆ ಆ ಕಾರಣಗಳಿಗೋಸ್ಕರವಾಗಿ ಅಪಸ್ವರ ಬರಬೇಕು ಎಂದು ನಾನು ಹೇಳುವವನಲ್ಲ. ಉತ್ತರ ಕರ್ನಾಟಕದ ಅನೇಕ ಭಾಗಗಳನ್ನು ಕಡೆಗಾಣಿಸಿದ್ದಾರೆ ಎಂಬತಕ್ಕಂಥದ್ದು ಸತ್ಯ. ಹಾಗೆ ಕಡೆಗಾಣಿಸಿರುವ ಬಗ್ಗೆ ಯಾವ್ಯಾವ ಭಾಗದಲ್ಲಿ ಯಾವ ರೀತಿ

ಕಡೆಗಾಣಿಸಿದ್ದಾರೆ ಎಂಬುವುದಕ್ಕೆ ಸಾಧ್ಯವಾದರೆ ನಾವು ಒಂದು ಆಯೋಗವನ್ನೆರಚನೆ ಮಾಡಿ, ಉತ್ತರ ಕರ್ನಾಟಕಕ್ಕೆ ಅನ್ಯಾಯ ಆಗಿರತಕ್ಕಂಥದ್ದರ ಬಗ್ಗೆ ಏನೇನು ಸರಿಪಡಿಸಬೇಕು ಎನ್ನುವುದಕ್ಕೆ ಬೇಕಾದರೆ ರಾಜ್ಯ ಸರ್ಕಾರ ಒಂದು ಸದನ ಸಮಿತಿಯನ್ನಾದರು ಮಾಡಲಿ. ಹಿಂದೆ ಗುಲ್ಬರ್ಗಾದಲ್ಲಿ ಬರಗಾಲ ಬಂದಾಗ ಈ ಸದನದಲ್ಲಿ ಶ್ರೀಮಾನ್ ಆರುಮ್ಗಂ ಎಂಬುವವರು ಇದ್ದರು. ಅವರ ನಾಯಕತ್ವದಲ್ಲಿ ಒಂದು ಸಮಿತಿಯನ್ನು ಮಾಡಿ ಒಂದು ಒಳ್ಳೆಯ ವರದಿಯನ್ನು ಕೊಟ್ಟರು. ಅದೇ ರೀತಿ ಆ ಭಾಗದ ಜನರು ಉಚ್ಚ ನ್ಯಾಯಾಲಯದ ಒಂದು ಪೀಠ ಬೇಕು ಎಂದು ಕೇಳುತ್ತಿದ್ದಾರೆ. ಏನು ಸ್ವಾಮಿ ಅವರು ಎಷ್ಟು ದಿನ ಕೇಳುತ್ತಿದ್ದಾರೆ, ಉಚ್ಚನ್ಯಾಯಾಲಯದ ಪೀಠ ಬೇಕು ಎಂದು ಹಗಲೂರಾತ್ರಿ ಕೇಳುತ್ತಿದ್ದಾರೆ. ಇಂತಹ ವಿಚಾರಗಳ ಬಗ್ಗೆಯೂ ನಾವು ಜಿಜ್ಞಾಸೆ ಮಾಡುವುದಾದರೆ ಅವರಿಗೆ ಆ ನೋವು ಬರುತ್ತದೆ. ಬೆಳಗಾವಿಯವರು ಏನು ಕೇಳುತ್ತಿದ್ದಾರೆ, ಮಹಾಜನ್ ವರದಿಯಲ್ಲಿ ಬೆಳಗಾವಿ ಕರ್ನಾಟಕದ್ದಾಗಿದೆ, ಬೇರೆಯವರು ಬೇರೆ ಕಡೆ ಹೋಗಬೇಕೆಂದು ಹೇಳುತ್ತಿದ್ದಾರೆ. ಆದರೆ ಅಭಿವೃದ್ಧಿ ಕಡೆ ನಾವು ಇನ್ನೂ ಗಮನಕೊಟ್ಟಿಲ್ಲ. ಬೆಳಗಾವಿ ಜಿಲ್ಲೆಯನ್ನು ಸಂಪೂರ್ಣವಾಗಿಕಡೆಗಾಣಿಸಿದ್ದೇವೆ, ಅದು ಸ್ಪಷ್ಟ. ಅದರಲ್ಲೇನು ಹಿಂದೆ - ಮುಂದೆ ಮಾತನಾಡತಕ್ಕದ್ದಲ್ಲ. ಅದೇ ರೀತಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳು ಅತ್ಯಂತ ಹೀನಾಯ ಪರಿಸ್ಥಿತಿಯಲಿದ್ದಾವೆ. ಆ ಹಳ್ಳಿಗಳ ಪರಿಸ್ಥಿತಿ, ಅಲ್ಲಿಯ ಮನೆಗಳ ಆ ವ್ಯವಸ್ಥೆಯನ್ನು ನೋಡಿದರೆ, ಇದು ನಿಜವಾಗಲೂ ನಮ್ಮ ಹಳೇ ಮೈಸೂರು ರಾಜಾಶ್ರಯವನ್ನು ಪಡೆದಾಗ ಬೆಂಬಲ ಎಲ್ಲಾ ಸಿಗುತ್ತಿತ್ತು. ಆಗ ಆ ಉತ್ತರ ಕರ್ನಾಟಕ ಪ್ರದೇಶದ ಅತ್ಯಂತ ಹಿಂದುಳಿದಿರತಕ್ಕ ಪ್ರದೇಶ ಆಗಿತ್ತು. ಇವೊತ್ತು ನಾನು ಏನು ಹೇಳುತ್ತೇನೆ ಎಂದರೆ, ಆ ನೋವನ್ನು ತಾಳಲಾರದೆ ಕರ್ನಾಟಕವನ್ನು ಬೇರೆ ಮಾಡಬೇಕು ಎನ್ನುವ ಚಿಂತನೆಯಲ್ಲಿ ಇವೊತ್ತು ಇದ್ದಾರೆ. ನಾನು ಆ ನನ್ನ ಆತ್ಮೀಯರಿಗೆಲ್ಲ ಹೇಳುತ್ತೇನೆ, ಕರ್ನಾಟಕ ಎಂದೆಂದೂ ಎರಡಾಗುವುದಕ್ಕೆ ಸಾಧ್ಯವೇ ಇಲ್ಲ. ಕರ್ನಾಟಕ ಒಂದೇ, ಆ ದೃಷ್ಟಿಯಿಂದ ಆ ಉತ್ತರ ಕರ್ನಾಟಕ ಭಾಗದ ಆ ಜನರ ಕೂಗು ನೋವು, ಏನೇನು ಅದರ ಅಭಿವೃದ್ಧಿ ಬಗ್ಗೆ ಇದೆ ಅದಕ್ಕೆ ಸರ್ಕಾರ ಒಂದು ಆಯೋಗವನ್ನಾದರೂ ರಚನೆ ಮಾಡಿ, ಸದನ ಸಮಿತಿಯನ್ನಾದರು ಮಾಡಿ, ಸ್ಪಷ್ಟವಾಗಿ ಆ ಜನರ ಸಂಪೂರ್ಣವಾದ ಭಾವನೆಯನ್ನು ಕೇಳಬೇಕಾದ್ದು ಕರ್ತವ್ಯ. ಕೊಡಗಿನ ಬಗ್ಗೆ ಹೇಳುವುದಾದರೆ, ಕೊಡಗು ಬೇರೆ ರಾಜ್ಯ ಆಗಬೇಕೆಂದು ಅವರು ಕೇಳುತ್ತಿದ್ದಾರೆ. ಅದಕ್ಕೆ ಕಾರಣವೇನೆಂದರೆ ಅಲ್ಲಿ ಒಂದು ವೈದ್ಯಕೀಯ ಕಾಲೇಜು ಇಲ್ಲ, ಒಂದು ತಾಂತ್ರಿಕ ಕಾಲೇಜು ಇಲ್ಲ, ಏನೊಂದು ವ್ಯವಸ್ಥೆ ಇಲ್ಲ. ಆ ಕೊಡಗನವರನ್ನು ನಾವು ಕಾಡು ಜನರ ರೀತಿಯಲ್ಲಿ ಕಾಣುತ್ತಿದ್ದೇವೆ. ಕೊಡಗಿನ ಸೌಂದರ್ಯ ಎಷ್ಟು ಸೊಗಸಾಗಿದೆ, ಕೊಡಗು ಕರ್ನಾಟಕ ಕಾಶ್ಮೀರ, ಕೊಡಗಿಗೆ ಎಷ್ಟು ಒತ್ತನ್ನು ಕೊಡಬೇಕೊ ಎಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಅಷ್ಟು ಮಾಡಿಲ್ಲ. ಕೊಡಗು ಲೋಕಸಭೆಯ ಒಂದು ಕ್ಷೇತ್ರ ಆಗಿಲ್ಲ, ಕೊಡಗಿಗೆ ಮಂಗಳೂರು ಎಲ್ಲಾ ಸೇರಿ ಒಂದು ಕ್ಷೇತ್ರವಾಗಿದೆ. ಆದ್ದರಿಂದ ಕೊಡಗಿನ ಜನರ ನೋವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆಯಾಯ ಪ್ರದೇಶದ ಜನರನ್ನು ನಾವು ಅರ್ಥಮಾಡಿಕೊಳ್ಳದೆ ಹೋದರೆ ನಮಗೆ ಅಪಾಯ ತಪ್ಪಿದ್ದಲ್ಲ. ಈ ಅಪಾಯ ಶತ ಸಿದ್ಧ. ಕರ್ನಾಟಕ ಏಕೀಕರಣ ನಡೆದ ಸಂದರ್ಭದ ಒಂದು ಉದಾಹರಣೆಯನ್ನು ತಮಗೆ ಕೊಡಬಯಸುತ್ತೇನೆ. ಕರ್ನಾಟಕ ಏಕೀಕರಣಕ್ಕೆ ಒಂದು ಸಮಗ್ರವಾದ ಚರಿತ್ರೆ ಮತ್ತು ಇತಿಹಾಸ ಇದೆ. ಕರ್ನಾಟಕ ಸುಮ್ಮನೆ ಏನೋ ಒಂದು ನೋಟಕ್ಕೆ ಆದಂಥಾದ್ದಲ್ಲ. ಕರ್ನಾಟಕವನ್ನು ಕಟ್ಟಿದ ಅನೇಕ ಜನರು ಇದ್ದಾರೆ. ಅದರಲ್ಲಿ

ಅಗ್ರಗಣ್ಯ ಪಾತ್ರ ವಹಿಸಿದವರು ಶ್ರೀಮಾನ್ ನಿಜಲಿಂಗಪ್ಪನವರು ಅದನ್ನು ಎಂದೆಂದೂ ಮರೆಯತಕ್ಕದ್ದಲ್ಲ ಕರ್ನಾಟಕ ಏಕೀಕರಣಕ್ಕೆ ಇಡೀ ಹಳೆಯ ಮೈಸೂರು ಜನರು ಒಂದಾದರು. ಈ ಸದನದ ಸದಸ್ಯರಾಗಿದ್ದ ಶ್ರೀ ಶಾಂತವೇರಿಗೋಪಾಲಗೌಡರು ಮತ್ತು ಆರ್. ಅನಂತರಾಮನ್ ಎಂಬ ಬೆಂಗಳೂರು ಮಹಾನಗರಪಾಲಿಕೆಯ ಮೇಯರ್ ಆಗಿದ್ದವರು. ಇವರಿಬ್ಬರು ಆ ಕಾಲದಲ್ಲಿ ಕರ್ನಾಟಕ ಏಕೀಕರಣಕ್ಕೆ ನಿಂತಂಥ ಜನ. ಅದರಲ್ಲೂ ಸಾಹಿತಿಗಳು ಮತ್ತು ಕವಿಗಳು ಹೆಚ್ಚಿನ ರೀತಿಯಲ್ಲಿ ಒಂದು ಹೊಸ ಶಕ್ತಿಯನ್ನು ಕೊಟ್ಟಿದ್ದಾರೆ. ಅದಕ್ಕೆ ಎಷ್ಟು ಶಕ್ತಿ ಎಂದರೆ ರಾಷ್ಟ್ರಕವಿ ಕುವೆಂಪು ಅವರು ಅತ್ಯಂತ ಹೆಚ್ಚಿನ ರೀತಿಯಲ್ಲಿ ಶಕ್ತಿಯುತವಾಗಿ ಹೇಳಿದ್ದಾರೆ. ಕರ್ನಾಟಕ ಏಕೀಕರಣ ಅಂದರೆ ಅದು ಸುಮ್ಮಸುಮ್ಮನೆ ಆಗಿಲ್ಲ, ಮಂತ್ರಕಣ, ಶಕ್ತಿಕಣ, ತಾಯಿಕಣ, ದೇವಿಕಣ, ಬೆಂಕಿಕಣ, ಸಿಡಿಲುಕಣ, ಕಾವ ಕೊಲುವ ಒಲವ ಬಲವ ಪಡೆದ ಫಲದ ಚಂಡಿಕಣ, ಋಷಿಯ ಕಾಣುವ ಕಣ್ಣಿಗೆ... ಎಂಥೆಂಥ ಮಾತನ್ನು ಹೇಳಿ ಅದನ್ನು ಬರೆದಿದ್ದು ಯಾವಾಗ ಎಂದರೆ 1949ರಲ್ಲಿ ಕರ್ನಾಟಕ ಏಕೀಕರಣಕ್ಕೆ ಶಕ್ತಿಯನ್ನು ತುಂಬಿ ಬರೆದಿದ್ದಾರೆ. ಒಂದು ಕಡೆ ಸಾಹಿತಿಗಳು, ಮತ್ತೊಂದು ಕಡೆ ಕವಿಗಳು, ಇನ್ನೊಂದು ಕಡೆ ಹೋರಾಟಗಾರರು ಈ ರೀತಿಯಾಗಿ ಹೆಚ್ಚಿನ ಶಕ್ತಿ ತುಂಬಿ ಈ ಕರ್ನಾಟಕವನ್ನು ಕಟ್ಟಿದ್ದಾರೆ. ಆದ್ದರಿಂದ ಕರ್ನಾಟಕ ಎರಡು ಭಾಗ ಆಗುವುದಾದರೆ ಕನ್ನಡ ತಾಯಿಯನ್ನು ಸೀಳಿ ಎರಡು ಭಾಗ ಮಾಡಿದಂತೆ ಆಗುತ್ತದೆ. ಆದ್ದರಿಂದ ಕರ್ನಾಟಕ ಏಕೀಕರಣ ಉಳಿಯಲೇಬೇಕು, ಕರ್ನಾಟಕ ಭಾವನಾತ್ಮಕವಾಗಿ ಒಂದಾಗಬೇಕು. ಕರ್ನಾಟಕದ ಯಾವ ಯಾವ ಮೂಲೆಯಲ್ಲಿ ನಮ್ಮ ಅಣ್ಣತಮ್ಮಂದಿರ ಕ್ಷೇತ್ರ ಅಭಿವೃದ್ಧಿ ಆಗಿಲ್ಲ ಅದರ ಅಭಿವೃದ್ಧಿಗೆ ಸರ್ಕಾರ ವಿಶೇಷವಾದ ಗಮನ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಕರ್ನಾಟಕ ಶಾಸನಸಭೆಯಲ್ಲಿ ನಾವು 224ಜನ ಶಾಸಕರಿದ್ದೇವೆ. ಈ ಶಾಸನಸಭೆಯಲ್ಲಿ ಪ್ರತಿಸಾರಿ ಶಾಸಕರಿಗೆ ಸವಲತ್ತುಗಳು ಇಲ್ಲ, ಸವಲತ್ತುಗಲು ಎಂದರೆ ಸ್ವಂತಕ್ಕೆ ಅಲ್ಲ, ಆ ಕ್ಷೇತ್ರದಲ್ಲಿ ಅನುಕೂಲಗಳು ಇಲ್ಲ, ವ್ಯವಸ್ಥೆಗಳು ಇಲ್ಲ ಎಂದು ಒಂದೇ ಸಮನೆ ಕೂಗುತ್ತಿದ್ದೇವೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕೂಗನ್ನು ಕೇಳಿ ಕಾರ್ಯಲಯ, ಸಿಬ್ಬಂದಿ, ಒಬ್ಬ ವ್ಯಕ್ತಿ ಇಂಥಾದ್ದೆಲ್ಲ ಕೆಲವು ಮಾಡಿದ್ದಾರೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಮೊನ್ನೆ ಕೈಪಿಡಿಯಲ್ಲಿದ್ದ ಒಂದು ಆದೇಶವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದೆ. ಅದರಲ್ಲಿ ಆ ಕ್ಷೇತ್ರದ ಶಾಸಕರು ಕ್ಷೇತ್ರದಲ್ಲಿ ಜನಪರವಾಗಿ ಕೆಲಸಮಾಡಬೇಕಾದರೆ ಅಧಿಕಾರಿಗಳು ಪ್ರಾಮಾಣಿಕವಾಗಿ ಅವರ ಜೊತೆಯಲ್ಲಿರಬೇಕು, ಕನಿಷ್ಟ ಹತ್ತು ದಿನಗಳ ಕಾಲ ಅಧಿಕಾರಿಗಳು ಶಾಸಕರ ಜೊತೆಯಲ್ಲಿ ಇರಬೇಕೆಂದು ಇದೆ. ಇಲ್ಲದಿದ್ದರೆ ಕೆಲಸ ಸುಗಮವಾಗಿ ಆಗುವುದಿಲ್ಲ. ಇವತ್ತಿನ ದಿವಸ ಎಷ್ಟೋ ಕಡೆ ಶಾಸಕರ ಜೊತೆ ಅಧಿಕಾರಿಗಳು ಬರುವುದಿಲ್ಲ ಎಂಬ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಎಷ್ಟೋ ಕಡೆ ಶಾಸಕರು ತಮ್ಮ ಕ್ಷೇತ್ರದ ಕೆಲಸಕಾರ್ಯಗಳಿಗೆ ಹೋಗಬೇಕೆಂದರೆ ಅಧಿಕಾರಿಗಳು ಅವರ ಜೊತೆ ಬರುವ ಪ್ರಶ್ನೆಯೇ ಇಲ್ಲ. ನೀವು ಜಿಲ್ಲಾ ಉಸ್ತುವಾರಿ ಮಂತ್ರಿ ಎಂದು ಮಾಡಿದ್ದೀರಿ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಎಂದರೆ ಅವರು ಪಾಳೇಗಾರರು ಇದ್ದ ಹಾಗೆ. ನಾವೆಲ್ಲ ಸದಸ್ಯರುಗಳು ಪಾಳೇಗಾರರಿಗೆ ಕಪ್ಪಕಾಣಿಕೆ ಕೊಡುವವರ ಹಾಗೆ. ಇದು ಎಲ್ಲ ಕಡೆ ನಡೆದಿದೆ. ಪಾಳೇಗಾರರು ಬಂದರೆ ಎಲ್ಲ ಅಧಿಕಾರಿಗಳು ಅವರ ಹಿಂದೆ ಹೋಗಬೇಕು.

ಇದು ಒಂದು ರೀತಿಯ ಜಂಬುಸವಾರಿ ಬಿಡಿ. ಜಿಲ್ಲಾ ಉಸ್ತುವಾರಿ ಮಂತ್ರಿ ಎಂದರೆ ಒಂದು ರೀತಿಯ ಜಂಬುಸವಾರಿ ಇದ್ದ ಹಾಗೆ. ಅವರ ಹಿಂದೆ ನಾವೆಲ್ಲ ಬೆಳ್ಳಿ ಗದೆ ಹಿಡಿದುಕೊಂಡು ಹೋಗಬೇಕು. ಈ ಅಪಮಾನ ಯಾವ ಶಾಸಕರಿಗೂ ಬರುವುದು ಬೇಡ. ಇದು ಸಾಮಾನ್ಯವಾಗಿ ಆಗತಕ್ಕ ಪರಿಸ್ಥಿತಿ. ಎಷ್ಟೋ ಕಡೆ ಶಾಸಕರನ್ನು ಸಮಾರಂಭಕ್ಕೆ ಕರೆಯುವುದಿಲ್ಲ. ಶಾಸಕರ ಕ್ಷೇತ್ರದಲ್ಲಿ ಸಮಾರಂಭ ನಡೆದ ಒಂದು ಉದಾಹರಣೆಯನ್ನು ತಮಗೆ ಹೇಳಬಯಸುತ್ತೇನೆ. ಮಾನ್ಯ ವಿರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಕಾವೇರಿ ಉದ್ಘಾಟಣೆಗೆ ನನ್ನನ್ನು ಮುಖ್ಯ ಅತಿಥಿಯನ್ನಾಗಿ ಹಾಕಿದ್ದರು. ಆಗ ಮಾನ್ಯ ವೀರೇಂದ್ರ ಪಾಟೀಲರು ಆ ಆಹ್ವಾನ ಪತ್ರಿಕೆಯನ್ನು ತರಿಸಿ ಅವರವರ ಕ್ಷೇತ್ರಕ್ಕೆ ಆ ಕ್ಷೇತ್ರದ ಶಾಸಕರೇ ಮುಖ್ಯ ಅತಿಥಿ ಇದು ಯಾವ ನೀತಿ, ಸರಿಯಲ್ಲ ಎಂದು ಹೇಳಿ ಶಾಸಕರೇ ಅಧ್ಯಕ್ಷರಾಗಿರಬೇಕೆಂದು ನನ್ನ ಹೆಸರು ಹಾಕಿಸಿದ್ದರು. ಯಾರೇ ಶಾಸಕರಿರಲಿ ಅವರ ಕ್ಷೇತ್ರಕ್ಕೆ ಅವರ ಅಧ್ಯಕ್ಷತೆಗೆ ಹೆಸರು ಆಗಬೇಕೆಂದು ಸ್ಪಷ್ಟವಾದ ನಿರ್ದೇಶನ ಹೊರಡಿಸಿದರು. ಇಡೀ ಆ ಸಮಾರಂಭಕ್ಕೆ ಮುದ್ರಣ ಮಾಡಿದ್ದ ಇಡೀ ಆಹ್ವಾನ ಪತ್ರಿಕೆಗಳನ್ನೆಲ್ಲ ತಳ್ಳಿಹಾಕಿ ಹೊಸ ಮುದ್ರಣ ಮಾಡಿಸಿದ್ದರು. ಇವತ್ತು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಮಂತ್ರಿಗಳು ಬೇರೆ ಅಲ್ಲ, ಶಾಸಕರು ಬೇರೆ ಅಲ್ಲ, ಎಲ್ಲರೂ ಒಂದೇ. ಆದರೆ ಇವತ್ತು ಶಾಸಕರನ್ನು ಕಡೆಗಣಿಸಿದ್ದಾರೆ.

ಇನ್ನು ವರ್ಗಾವರ್ಗಿ ಬಗ್ಗೆ ತಮ್ಮ ನೀತಿ ಏನು? ತಾವು ಒಂದು ನೀತಿಯನ್ನು ಇಟ್ಟುಕೊಳ್ಳಬೇಕು. ತಾವು ನಾನು ಹೇಳಿದ್ದು ಮಾಡಬೇಡಿ, ಶಾಸಕರು ಹೇಳಿದ್ದು ಮಾಡಬೇಡಿ, ನಿಮಗೆ ಇಚ್ಚೆ ಬಂದವರನ್ನು ಹಾಕಿರಿ. ವರ್ಗಾವರ್ಗಿ ಬಗ್ಗೆ ಆ ಒಂದು ತೀರ್ಮಾನಕ್ಕಾದರೂ ತಾವು ಬರಬೇಕು. ವರ್ಗಾವರ್ಗಿ ಎಷ್ಟು ಅಪಮಾನಕರವಾದದ್ದು ಎಂದರೆ, ನಾನು ಬಂದು ಒಂದು ವರ್ಗಾವರ್ಗಿ ಮಾಡಿ ಎಂದು ಕೇಳುತ್ತೇನೆ. ನಿಮ್ಮ ಪಕ್ಷದವರು ಬರುತ್ತಾರೆ ಬದಲಾವಣೆ ಮಾಡಿ ಎಂದು ಹೇಳುತ್ತಾರೆ. ನಿಮಗೆ ಇಬ್ಬರ ಹೆಂಡರ ಕಾಟ ಕೆಲವು ಕಡೆ ಮೂವರು ಹೆಂಡರ ಕಾಟ. ಅವರ ಮಾತು ಕೇಳಬೇಕೆ. ನನ್ನ ಮಾತು ಕೇಳಬೇಕೇ ಎಂಬುದು ಸಮಸ್ಯೆ. ನನ್ನ ಬಗ್ಗೆ ವಿಶ್ವಾಸ, ಅವರ ಬಗ್ಗೆ ಪಕ್ಷ ಈ ಗೊಂದಲದಲ್ಲಿ ನೀವು ಸಿಕ್ಕಿದ್ದಿರಿ. ನಿಮ್ಮ ಪರಿಸ್ಥಿತಿ ನಮಗೆ ಅರ್ಥವಾಗುತ್ತದೆ. ಆದರೆ ಕ್ಷೇತ್ರದಲ್ಲಿ ಏನಾಗಿದೆ ಎಂದರೆ, ಯಾರು ವರ್ಗಮಾಡಿಸಿಕೊಂಡು ಬಂದರೂ ಅವರ ಹಿಂದೆ ಜನ ಓಡಾಡುತ್ತಾರೆ. ನಮಗೆ ಏನು ಹೇಳುತ್ತಾರೆ ಎಂದರೆ ನಿಮ್ಮಿಂದ ವರ್ಗಮಾಡಿಸಲಿಕ್ಕೆ ಆಗಲಿಲ್ಲ, ನಿಮ್ಮ ಕೆಲಸಕ್ಕೆ ನಾವು ಬರುವುದಿಲ್ಲ ಎನ್ನುತ್ತಾರೆ. ನಮ್ಮ ಕ್ಷೇತ್ರದಲ್ಲಿ ಎಸ್. ಐ. ಇಲ್ಲ, ಸರ್ಕಲ್ ಇನ್ಸಪೆಕ್ಟರ್ ಇಲ್ಲ, ಬಿ. ಡಿ. ಓ. ಇಲ್ಲ, ಎ ಇ ಇ ಇಲ್ಲ, ಇ ಓ ಇಲ್ಲ, ಯಾರೂ ಇಲ್ಲ ಅಂದರೆ ನಾವು ನಮ್ಮ ಕ್ಷೇತ್ರದಲ್ಲಿ ಏನು ಮಾಡಬೇಕು ಹೇಳಿ? ನೀವು ಯಾವ ಅಧಿಕಾರಿಗಳನ್ನು ಹಾಕಿರುತ್ತೀರಿ ಅವರು ವಿರೋಧ ಪಕ್ಷದವರು ಕರೆಯುವಂತಹ ಕ್ಷೇತ್ರದ ಕೆಲಸಗಳಿಗೆ ಬರುವುದಿಲ್ಲ ಅಂದರೆ ನಮ್ಮ ಪರಿಸ್ಥಿತಿ ಏನು? ನನ್ನ ಪರಿಸ್ಥಿತಿ ಹೇಳಿದರೆ ನಾಚಿಕೆಯಾಗುತ್ತದೆ. ನಮ್ಮ ಕ್ಷೇತ್ರದ ಅಭಿವೃದ್ಧಿ ಅಧಿಕಾರಿ ಭೇಟಿ ಮಾಡಿ- ನಾಲ್ಕು ತಿಂಗಳಾಯಿತು. ಹೀಗಾದರೆ ಅಲ್ಲಿ ನಾವು ಕೆಲಸ ಮಾಡುವುದಕ್ಕೆ ಸಾಧ್ಯವೇ? ಈ ಇಕ್ಕಟಿನ ಪರಿಸ್ಥಿತಿಯಲ್ಲಿ ಯಾರಿಗೆ ತಾನೆ ಕೆಲಸ ಮಾಡಲು ಸಾಧ್ಯ? ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಯಾರಿಗೆ ತಾನೆ ಕೆಲಸ ಮಾಡಲು ಸಾಧ್ಯ? ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನೀವು ಯಾರನ್ನಾದರೂ ಹಾಕಿ. ಅವರು ಆ ಕ್ಷೇತ್ರದ ಶಾಸಕರ ಸ್ವಂತ ಕೆಲಸಕ್ಕೆ ಬರುವುದು ಬೇಡ. ನಲ್ಲಿ ಹಾಕುವಾಗ, ರಸ್ತೆ ಮಾಡುವಾಗ, ಕಟ್ಟಡ ಕಟ್ಟುವಾಗ, ಪ್ರವಾಸ ಹೋಗುವಾಗ ಅಧಿಕಾರಿಗಳು

ಇಲ್ಲವೆಂದರೆ ಪರಿಸ್ಥಿತಿ ಏನು? ಇಂಥ ಪರಿಸ್ಥತಿ ಬಹುತೇಕ ಎಲ್ಲ ಶಾಸಕರಿಗೆ ಇದೆ. ಆದ್ದರಿಂದ ವರ್ಗಾವರ್ಗಿ ಮಾಡುವ ಒಂದು ನೀತಿಯನ್ನು ಬದಲಾವಣೆ ಮಾಡಿ. ಈಗ ವರ್ಗಾವರ್ಗಿ ನೀತಿಯಿಂದ ಕೆಟ್ಟ ಹೆಸರು ಬರುತ್ತದೆ, ಅಪಮಾನವಾಗುತ್ತದೆ. ಅದಕ್ಕೆ ಬೇಕಾದದರೆ ಒಂದು ಸಮಿತಿಮಾಡಿ ಪ್ರಾಮಾಣಿಕರಾಗಿ ಎಲ್ಲ 224 ಜನರು ಬರುತ್ತಾರೆ. ನಾನು ಇಂಥವರನ್ನು ನಮ್ಮ ಕ್ಷೇತ್ರಕ್ಕೆ ಕೊಡಿ ಎಂದು ಒಂದು ಅರ್ಜಿ ಕೊಡುವುದಿಲ್ಲ. ಯಾರ ಒತ್ತಾಯಕ್ಕೂ ಮಣಿಯದೆ ವರ್ಗಾವರ್ಗಿ ವಿಚಾರದಲ್ಲಿ ಸರ್ಕಾರ ಸ್ಪಷ್ಟವಾದ ನಿಲುವು ತೆಗೆದುಕೊಳ್ಳದಿದ್ದರೆ ಆಗುವುದಿಲ್ಲ. ಪಕ್ಷದವರು ಕೇಳಿದರೆ ಮಾಡುತ್ತೇವೆ ಎನ್ನುವುದಾದರೆ ನಾವು ಅರ್ಜಿ ಕೊಟ್ಟಿದ್ದನ್ನು ಮಾಡಿ ಇಲ್ಲದಿದ್ದರೆ ಅವರಿಗೂ ಬೇಡ ನಮಗೂ ಬೇಡ. ಅಧಿಕಾರಿಗಳಿಗೆ ಏನಾಗಿದೆ ಎಂದರೆ ಆ ಪಕ್ಷದವರು ಮಾಡುತ್ತಿದ್ದಾರೆ, ಇವರಿಗೆ ಮಾಡಿಸುವುದಕ್ಕೆ ಶಕ್ತಿಯಿಲ್ಲ ಎಂದು ಈ ಭಾವನೆ ನಿರ್ಮಾಣವಾಗಿ ನಾವು ಕರೆದರೂ ಅವರು ಬರುವುದಿಲ್ಲ. ನಾವು ಇಂತಹ ದಿವಸ ಬೆಳಿಗ್ಗೆ ಬರುತ್ತೀದ್ದೇವೆ. ಇಂತಹ ಹಳ್ಳಿಗೆ ಪ್ರವಾಸಕ್ಕೆ ಹೋಗಬೇಕು ಅಂದರೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಒಬ್ಬರೂ ಸಿಗುವುದಿಲ್ಲ. ಇದೆಲ್ಲಾ ಹೇಳಿಕೊಳ್ಳಬಾರದು, ಮನಸ್ಸಿಗೆ ನೋವಾಗುವುದರಿಂದ ಹೇಳಬೇಕಾಗಿದೆ. ಒಬ್ಬ ವಿದ್ಯಾ ಇಲಾಖೆ ಅಧಿಕಾರಿ ಅವನೇ ಆಹ್ವಾನ ಪತ್ರಿಕೆ ಮುದ್ರಣ ಮಾಡಿಸಿಬಿಡುತ್ತಾನೆ. ಇಂಥ ತಾರೀಖು ನೀವು ಬರಬೇಕು ನಿಮ್ಮ ಅಧ್ಯಕ್ಷತೆ ಹಾಕಿದ್ದೇವೆ ಎಂದು ಹೇಳುತ್ತಾನೆ. ನಮ್ಮನ್ನು ಕೇಳುವಹಾಗೆ ಇಲ್ಲ, ಮಾಡುವ ಹಾಗೆ ಇಲ್ಲ. ಎಲ್ಲಾ ಶಾಸಕರ ಹಣೆಬರಹ ಹೀಗಾಗಿದೆ. ನಿಮಗೆ ಯಾವ ಅಂಜಿಕೆ ಬೇಕಾಗಿಲ್ಲ, ಶಕ್ತಿಯುತವಾಗಿ ಮಾಡಿ. ನಾಳೆ ಏನಾಗುತ್ತದೆ ಎಂಬುದು ಬೇಡ. ನಿಮಗೆ ಭಗವಂತ ಶಕ್ತಿ ಕೊಟ್ಟಿದ್ದಾನೆ. ನಿಮ್ಮ ಬಗ್ಗೆ ಗೌರವ ಇದೆ. ನೀವು ಯಾವ ಹಗರಣದಲ್ಲಿಯೂ ಇಲ್ಲ. ಅತ್ಯಂತ ಪರಿಶುದ್ಧವಾದ ಹೃದಯವನ್ನು ಒಳ್ಳೆಯ ವ್ಯಕ್ತಿತ್ವವನ್ನು ಬೆಳೆಸಿಕೊಂಡಿರತಕ್ಕವರು. ನಿಮ್ಮ ಬಗ್ಗೆ ನನಗೆ ಅಪಾರ ಗೌರವವಿದೆ. ನೀವು ಧೈರ್ಯವಾಗಿ ಮಾಡಿ. ಈ ಸಾರಿಯಾದರೂ ನೀವು ವರ್ಗಾವರ್ಗಿ ನೀತಿಯನ್ನು ಸ್ಪಷ್ಟಪಡಿಸಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ. ನಾನು ನೇರವಾಗಿ ಸರ್ಕಾರವನ್ನು ಬೈಯುತ್ತೇನೆಂದು ಅಲ್ಲ, ಪೋಲಿಸ್ ಇಲಾಖೆಯ ಒಂದು ವಿಚಾರವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಇದು ನಿನ್ನೆ ನಡೆದಂತಹ ಒಂದು ಘಟನೆ, ತಾವು ಎಲ್ಲ ಪತ್ರಿಕೆಗಳಲ್ಲಿ ಓದಿರಬಹುದು. ಮೈಸೂರಿನಲ್ಲಿ ನಾಗಮಣಿ ಎಂಬ ಮಹಿಳೆ, ಆಕೆಯ ನಡತೆ ಸರಿಯಲ್ಲ ಎಂದು ತೀರ್ಮಾನ ಮಾಡುವವರು ಯಾರು?

1.30 ಪಿ. ಎಂ

ಆ ನಾಗಮಣಿ ಎನ್ನುವವರ ಮನೆಗೆ ನುಗ್ಗಿ 9 ಜನ ಪೊಲೀಸರು ಆಕೆಯನ್ನು ದರದರನೆ ಬೀದಿಗೆ ಎಳೆದು ತಂದು ಸೀರೆಯನ್ನು ಎಳೆದು ಇಷ್ಟೆಲ್ಲಾ ಅಪಮಾನ ಮಾಡಿ, ಆಕೆಯನ್ನು ಒಂದು ರಾತ್ರಿ ಪೊಲೀಸ್ ಠಾಣೆಯಲ್ಲಿ ಇಟ್ಟಿದ್ದಾರೆ. ಆಕೆಯ ಮೇಲೆ ಬೆಳಿಗ್ಗೆ ನೀತಿಗೆಟ್ಟವಳು ಎಂದು ಕಥೆ ಕಟ್ಟಿ ಆ ಕೊಪ್ಪಲಿನ ಜನರು ಅವಳನ್ನು ನಡತೆಗೆಟ್ಟವಳು ಎಂದು ಹೇಳಿ ಓಡಿಸಬೇಕು, ಈ ರೀತಿಯಾಗಿ ಮಾಡಿದ್ದಾರೆ. ಒಂದು ಕಡೆ ಪೊಲೀಸಿನವರ ಕಾಟ, ಮತ್ತೊಂದು ಕಡೆ ಜನರು ನಮ್ಮ ನಾಗರೀಕರು ಬಹಳ ಪ್ರವೀಣರು ಒಬ್ಬ ಹೆಣ್ಣು ಮಗಳ ಮೇಲೆ ಮಾಡಿರುವಂಥ ಅಪಮಾನ, ಇದಕ್ಕೆ ಯಾರು

ಸಂಬಂಧಪಟ್ಟಿದ್ದಾರೆ, ಅವರನ್ನು ಕೂಡಲೇ ತಾವು ವಜಾ ಮಾಡಬೇಕೆಂದು ತಮ್ಮ ಮುಂದೆ ಬೇಡಿಕೆಯನ್ನು ಇಟ್ಟಿದ್ದಾರೆ ಅದು ಈಗ ಮಂಚೇಗೌಡನ ಕೊಪ್ಪಲಿನಲ್ಲಿ ಇರುವಂಥಾದ್ದು. ಇವಳು ಪೊಲೀಸ್ ಠಾಣೆಯಿಂದ ಮನೆಗೆ ಹೋದ ಮೇಲೆ ಅಲ್ಲಿ ಜನರು ಸೇರಿ ನೀನು ನಡತೆಗೆಟ್ಟವಳು ನಮ್ಮ ಏರಿಯಾದಲ್ಲಿ ಇರಬೇಡ ಎಂದು ಹೇಳಿದ್ದಾರೆ. ಇದರಿಂದ ಅವಳಿಗೆ ಪೊಲೀಸರ ರಕ್ಷಣೆಯೂ ಇಲ್ಲ, ಜನರ ರಕ್ಷಣೆಯೂ ಇಲ್ಲ. ಈ ರೀತಿಯಾದರೆ ಯಾರು ಗತಿ? ನಡತೆಯನ್ನು ನಿರ್ಮಾಣ ಮಾಡತಕ್ಕವರುಯಾರು? ಈ ರೀತಿಯಾಗಿ ಪರಿಸ್ಥಿತಿ ನಿರ್ಮಾಣವಾದರೆ, ಈ ರೀತಿಯಾಗಿ ಪೊಲೀಸ್ ವ್ಯವಸ್ಥೆ ಆದರೆ ನಾಳೆ ಪರಿಸ್ಥಿತಿ ಏನು? ಇಷ್ಟು ಅತ್ಯಂತ ಅಮಾಯಕವಾಗಿ ನಡೆಸಿಕೊಂಡಿದ್ದಾರೆ. ನಿಜ ಸ್ಥಿತಿಯಲ್ಲಿ ಯಾರೊ ಒಬ್ಬ ಕಳ್ಳ ಇವಳ ಮನೆಯ ಕಡೆ ಹೋದ, ಇರಬಹುದು ಆ ಮಹಿಳೆಯ ಪರಿಚಯವಿರಬಹುದು. ಆದರೆ ಪೊಲೀಸರು ಕಳ್ಳನನ್ನು ಹಿಡಿಯಲು ಹೋಗಿ ಅಲ್ಲಿ ಆ ಮಹಿಳೆಯನ್ನೆ ಪೊಲೀಸ್ ಠಾಣೆಗೆ ಜನರ ಎದುರಿನಲ್ಲಿ ದರದರನೆ ಎಳೆದುಕೊಂಡು ಹೋಗಿದ್ದಾರೆ. ಇದು ತಮ್ಮ ಕಾಲದಲ್ಲಿ ಆಗಬಾರದು. ಇನ್ನು ಮತ್ತೊಂದು ವಿಷಯವನ್ನು ಸೂಕ್ಷ್ಮವಾಗಿ ಹೇಳುವುದೇನೆಂದರೆ ಇಡೀ ದೇಶದ ಇತಿಹಾಸದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಒಳ್ಳೆಯ ಚರಿತ್ರೆ ಇದೆ. ಅದನ್ನು ನಾನು ತಳ್ಳಿಹಾಕುವುದಿಲ್ಲ. ಪೊಲೀಸ್ ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇತ್ತೀಚಿನ ದಿವಸ ಈ ಇಲಾಖೆಗೆ ಒಂದು ರೀತಿಯ ಬಾಲಗ್ರಹ ಹಿಡಿದಿದೆ. 4-5 ವರ್ಷಗಳಿಂದೀಚೆಗೆ ಈ ರೀತಿಯಾಗಿದೆ. ನಮ್ಮಲ್ಲಿ ಅನೇಕ ಉತ್ತಮವಾದ, ಶ್ರೇಷ್ಠಮಟ್ಟದ ಪೊಲೀಸ್ ಅಧಿಕಾರಿಗಳು ಇದ್ದರು. ಈಗ ಏಕೆ ಹೀಗಾಗಿದೆ ಎಂಬುದನ್ನು ನಾನು ತಮಗೆ ಹೇಳುತ್ತೇನೆ. ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಪೇದೆ ಎಂದು ಕರೆಯುತ್ತಾರೆ. ಇದು ಏನು ಎಂದು ನಮಗೆ ಅರ್ಥವಾಗುತ್ತಿಲ್ಲ. ಈ ಪೇದೆ ಬಂದಿದ್ದಾನೆಯೆ, ಹೋಗಿದ್ದಾನೆಯೆ, ಅವನು ಬಂದಿದ್ದಾನೇನೊ, ಇದು ಸರಿಯಲ್ಲ. ಕೆಳಮಟ್ಟದಲ್ಲಿ ಕೆಲಸ ಮಾಡುವಂತಹ ಈ ಕಾನ್‌ಸ್ಟೇಬಲ್‌ಗಳನ್ನು ಕರೆಯುವಾಗ ಒಂದು ಸುಂದರವಾದ ಪದವನ್ನು ಉಪಯೋಗಿಸಿ ವ್ಯವಸ್ಥಿತವಾದ ರೀತಿಯಲ್ಲಿ ಕರೆಯಬೇಕು.

ಶ್ರೀಮತಿ ಬಿ. ಟಿ. ಲಲಿತಾನಾಯಕ್ : ಕಾನ್‌ಸ್ಟೇಬಲ್‌ಗಳಿಗೆ ಸುಂದರವಾದ ಹೆಸರನ್ನು ಇಟ್ಟರೂ ಅವರ ಮನಸ್ಸು ಸುಂದರವಾಗಿ ಇರಬೇಕಲ್ಲಾ. ಪೇದೆ ಎಂಬುದು ಬದಲಾವಣೆಯಾದರೂ ಅವರ ನಡವಳಿಕೆಗಳು ಬದಲಾವಣೆಯಾಗಬೇಕಲ್ಲಾ.

(ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಶ್ರೀ ವಾಟಾಳ್ ನಾಗರಾಜ್ : ಇತ್ತೀಚೆಗೆ ಪೊಲೀಸ್‌ನವರು ಬೊಜ್ಜು ಕರಗಿಸಬೇಕೆಂದು ಸರ್ಕಾರದವರು ಆದೇಶವನ್ನು ಹೊರಡಿಸಿದ್ದಾರೆಂದು ತಿಳಿದು ಬಂದಿದೆ. ಅವರಿಗೆ ಬೊಜ್ಜು ಕರಗಿಸದಿದ್ದರೆ ಯಾವ ಅನುಕೂಲಗಳನ್ನು ಕೊಡುವುದಿಲ್ಲರೆಂದು ಆದೇಶದಲ್ಲಿ ಇದೆ ಎಂದು ತಿಳಿದುಬಂದಿದೆ. ಇದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇದು ನನಗೆ ಅರ್ಥವಾಗುತ್ತಿಲ್ಲ. ಅವರು ಹೇಗೆ ಬೊಜ್ಜು ಕರಗಿಸುವುದು? ಪೊಲೀಸ್ ಮಂತ್ರಿಗಳಿಗೆ ಮೂರು ಅಡಿ ಬೊಜ್ಜು ಬಂದಿದೆ. ಇನ್ನು ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಬೊಜ್ಜು ಕರಗಿಸಿಕೊಂಡು ಬರತಕ್ಕಂಥದ್ದು ಎಂದರೆ ಹೇಗೆ? ಈ ಬೊಜ್ಜು ಬರುವುದಕ್ಕೆ ಕಾರಣವೇನು ಎಂಬುದು ಗೊತ್ತಿಲ್ಲ.

ಶ್ರೀ ಹೆಚ್ ಶಿವಪ್ಪ : ಬೊಜ್ಜು ಬರುವುದು ಸಂತೋಷಕ್ಕೆ, ನೀವು ಕಬ್ಬನ್‌ಪಾರ್ಕ್‌ಗೆ ಹೋಗುವುದನ್ನು ನಿಲ್ಲಿಸಿ ಆಗ ನಿಮಗೆ ಅರ್ಥವಾಗುತ್ತದೆ.

ಅಧ್ಯಕ್ಷರು : ಅವರು ಹಾಕುವಂತಹ ಸಮವಸ್ತ್ರವನ್ನು ದಪ್ಪನೆಯ ಡ್ರಮ್‌ಗೆ ಹಾಕುವ ರೀತಿಯಲ್ಲಿ ಹಾಕಿಕೊಂಡು, ಉಸಿರು ಬಿಗಿ ಹಿಡಿದುಕೊಂಡು ಅಟೆನ್‌ಷನ್‌ನಲ್ಲಿ ನಿಂತರೆ ನೋಡುವುದಕ್ಕೆ ಆಗುವುದಿಲ್ಲ. ಅವರು ವ್ಯಾಯಾಮ ಮಾಡಬೇಕು, ಶಿಸ್ತಿನಿಂದ ಇರಬೇಕು, ಅವರು ಏನು ಡ್ರೆಸ್ ಹಾಕಿಕೊಳ್ಳುತ್ತಾರೆ ಅದು ವಿಕಾರವಾಗಿ ಹಾಕುತ್ತಾರೆ. ಆದ್ದರಿಂದ ಶಿಸ್ತಿನಿಂದ ಇರಬೇಕೆಂದು ಮಾಡಿದ್ದುದು. ನಿಮಗೆ ಏಕೆ ಬೊಜ್ಜು ಬಂದಿಲ್ಲ? ಕಾರಣ ನೀವು ಶಿಸ್ತಿನಿಂದ ವಾಕಿಂಗ್ ಮಾಡುತ್ತೀರಿ, ಎಕ್ಸೈಸ್ ಮಾಡುತ್ತೀರಿ, ಪೊಲೀಸರು ಶೇಪ್ ಇಲ್ಲದೆ ಯದ್ವಾತದ್ವಾ ಪ್ರಾಣಿ ತರಹ ಇದ್ದರೆ, ಆ ಯೂನಿಫಾರಂಗೂ ಒಂದು ಗೌರವವಿರುವುದಿಲ್ಲವೆಂದು ಹಾಗೆ ಮಾಡಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಯವರಿಗೆ ಬೊಜ್ಜು ಏಕೆ ಬಂದಿಲ್ಲ. ಅವರು ಶಿಸ್ತಿನಿಂದ ಇದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಪೊಲೀಸ್‌ನವರ ವರ್ತನೆಯನ್ನು ನೋಡಿ ಕೆಲವು ಸಾರಿ ಅವರ ಕಷ್ಟವನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪ್ರತಿಯೊಂದು ವಿಷಯಕ್ಕೂಅವರು ಯೂನಿವರ್ಸಿಟಿಯಲ್ಲಾಗಲೀ, ಆಸ್ಪತ್ರೆಯಲ್ಲಾಗಲಿ, ಇಂತಹ ಡಿಪಾರ್ಟ್‌ಮೆಂಟ್ ಎಂದು ಇಲ್ಲ. ಎಲ್ಲೋ ತೊಂದರೇ ಆದರೂ ಅವರೇ ಹೋಗಬೇಕು ರಸ್ತೆಗಳಿಗೂ ಅವರೇ ಇರಬೇಕು ವಿಧಾನಸೌಧವನ್ನು ಅವರೇ ಕಾಯಬೇಕಾಗುತ್ತದೆ. ಇವರಲ್ಲಿ ಎಲ್ಲರೂ ದಪ್ಪಗೆ ಇರುವುದಿಲ್ಲ. ಕೆಲವರು ಎಷ್ಟು ತೆಳ್ಳಗೆ ಇದ್ದಾರೆಂದರೆ ಅವರ ಕೈಯಲ್ಲಿ ಲಾಠಿಯೂ ಉಳಿಯುವ ಹಾಗಿಲ್ಲ. ಅವರ ಕಾಲೂ ಅವರ ಕೈಯಲ್ಲಿರುವ ಕೋಲೂ ಒಂದೇ ತರಹ ಕಾಣುತ್ತದೆ. ಪಾಪ, ಬಹಳ ಕಷ್ಟದಲ್ಲಿ ಇದ್ದಾರೆ. ಆದರೆ ಅವರಲ್ಲಿ ಬೊಜ್ಜು ಬರುವುದು ಏಕೆಂದರೆ ಅವರು ವ್ಯಾಯಾಮ ಮಾಡುವುದಿಲ್ಲ.

ಅಧ್ಯಕ್ಷರು : ಕಾನ್‌ಸ್ಟೇಬಲ್‌ಗಳಲ್ಲಿ ಬೊಜ್ಜು ಇರುವವರು ಬಹಳ ಕಡಿಮೆ ಇರುತ್ತಾರೆ. ಇನ್‌ಸ್ಪೆಕ್ಟರ್‌ಗಳಿಗೆ ಹೆಚ್ಚು ಬೊಜ್ಜು ಇರುತ್ತದೆ. ಅವರು ಬೊಜ್ಜು ಕರಗಿಸಲೇಬೇಕು. ಅವರು ಡ್ರಮ್‌ಗಳ ರೀತಿಯಲ್ಲಿ ಬೆಲ್ಟ್ ಹಾಕಿದರೆ ಯಾವುದೋ ಮರಕ್ಕೆ ಕಟ್ಟಿದ ಹಾಗೆ ಕಾಣುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್ : ಕೆಲವರು ಟ್ರಿಮ್ ಆಗಿ ಇದ್ದಾರೆ, ಬಹಳ ಚೆನ್ನಾಗಿ ಇದ್ದಾರೆ.

ಅಧ್ಯಕ್ಷರು : ನಮ್ಮಲ್ಲಿ ಕೆಲವರು ಇನ್‌ಸ್ಪೆಕ್ಟರ್ಸ್ ಅವರೆಲ್ಲ ಎಷ್ಟು ಸ್ಮಾರ್ಟ್ ಆಗಿ ಇದ್ದಾರೆ. ಅವರು ರೆಗ್ಯೂಲರಾಗಿ ಎಕ್ಸೈಜ್ ಮಾಡುತ್ತಾರೆ. ಅವರನ್ನು ನೋಡುವುದಕ್ಕೆ ಖುಷಿಯಾಗುತ್ತದೆ. ಅವರು ಡ್ರೆಸ್ ಹಾಕಿಕೊಂಡರೆ ನೋಡುವುದಕ್ಕಾದರೂ ಗಂಭೀರತೆ ಬೇಡವೇ?

ಶ್ರೀ ಹೆಚ್ ಶಿವಪ್ಪ : ಮಾನ್ಯ ಅಧ್ಯಕ್ಷರೆ, ಈ ಬೊಜ್ಜು ಏಕೆ ಬರುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಯವರಿಂದ ವಿಶ್ಲೇಷಣೆಯನ್ನು ಕೊಡಿಸಿ.

ಶ್ರೀ ಜೆ. ಹೆಚ್. ಪಟೇಲ್ : ಕೆಲವು ಸಾರಿ ಇದು ಒಂದು ರೋಗ, ಅದು ತಿಂದರೆ ಬರುತ್ತದೆ ಎಂದು ಅಲ್ಲ. ಜಿಂದಾಲ್ ನ್ಯಾಚೂರೊಪತಿ ಎಂದು ಇದೆ, ತಾವು ಅಲ್ಲಿ ಹೋಗಿ ನೋಡಬಹುದು

ಅಧ್ಯಕ್ಷರು : ನಾನು ಅಲ್ಲಿಗೆ ನಿಮ್ಮನ್ನು ನೋಡಲು ಬಂದಿದ್ದೆ.

ಶ್ರೀ ಜೆ. ಹೆಚ್. ಪಟೇಲ್ : ಅಲ್ಲಿ ನಾನು ಹೋಗಿದ್ದು ಬೊಜ್ಜು ಕರಗಿಸುವುದಕ್ಕಲ್ಲ, ಬೇರೆ ಚಿಕಿತ್ಸೆಗೆ ಹೋಗಿದ್ದೆ, ಅಲ್ಲಿ ವ್ಯವಸ್ಥೆ ತುಂಬಾ ಚೆನ್ನಾಗಿದೆ. ಅಲ್ಲಿಗೆ ದೇಶದ ಎಲ್ಲಾ ಬಾಗದ ಜನರು ಬರುತ್ತಾರೆ. ಮಾನ್ಯ ವಾಟಾಳ್ ನಾಗರಾಜ್‌ರವರೆ ನೀವು ಜಿಂದಾಲ್‌ಗೆ ಹೋಗಿ ನೋಡಬೇಕು. ಕೆಲವು ಜನರು ಆನೆ ಗಾತ್ರದವರು ಇರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮಲ್ಲೇ ಇದ್ದಾರೆ, ಮಾನ್ಯ ಜಯರಾಂರವರು ಇದ್ದಾರೆ. ನನಗೆ ಅವರ ಬಗ್ಗೆ ಗೌರವವಿದೆ. ನಿಜವಾಗಿಯೂ ಅವರನ್ನು ನೋಡಿದಾಗ ಏನೋ ಪಾಪ ಅವರ ತೊಂದರೆಯಿಂದ ಹೀಗೆ ಆಗಿದೆ ಎಂದು ಅನ್ನಿಸಿದೆ.

ಅಧ್ಯಕ್ಷರು : ಮಾನ್ಯ ಜಯರಾಂರವರಿಗೆ ವ್ಯಾಯಾಮ ಇಲ್ಲದೇ ಇರುವುದರಿಂದ ಅಥವಾ ತಿಂಡಿಯಿಂದ ಆಗಿರುವುದಲ್ಲ. ಆರೋಗ್ಯದ ಕೊರತೆಯಿರುವುದರಿಂದ ಯಾವುದೊ ಕೆಲವು ಡ್ರಗ್ಸ್ ರೀಆ್ಯಕ್ಟ್ ಆಗಿರುವುದರ ಫಲವಾಗಿ ಆ ಒಂದು ಘಟನೆಯ ನಂತರ ಅವರಿಗೆ ಆ ರೀತಿ ಶರೀರ ಬಂದಿರತಕ್ಕಂಥದ್ದು.

ಶ್ರೀ ವಾಟಾಳ್ ನಾಗರಾಜ್ : ಅದು ನಿಜ, ಅವರು ಸಣ್ಣಗಿದ್ದಾಗ ನಾನು ನೋಡಿದ್ದೆ. ನನಗೆ ಈಗ ಅವರನ್ನು ನೋಡಿದರೆ ನೋವಾಗುತ್ತದೆ. ತಾವು ಹೇಳಿದ್ದು ನಿಜ ಆದರೆ ಶಿಸ್ತು ಸಂಯಮದಿಂದ ಬೊಜ್ಜು ಕಡಿಮೆ ಮಾಡಿಕೊಂಡು ಬನ್ನಿ ಎಂದು ಅವರನ್ನು ಕಳುಹಿಸಿಬಿಟ್ಟರೆ ನಾಳೆ ನಮ್ಮ ಕಾನೂನು ವ್ಯವಸ್ಥೆಯನ್ನು ನೋಡಿಕೊಳ್ಳುವವರು ಯಾರು?

ಅಧ್ಯಕ್ಷರು : ಅಂಥವರು ಬಹಳ ಕಡಿಮೆ ಜನರು ಇದ್ದಾರೆ. ಇಲಾಖೆಯಲ್ಲಿ ಶಿಸ್ತಿನ ವಾತಾವರಣವನ್ನು ನಿರ್ಮಿಸುವುದಕ್ಕೆ ಇದು ಒಂದು ಕ್ರಮವಾಗಿದೆ. ಅದನ್ನು ತಾವು ಸ್ವಾಗತ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಹಾಗೆಯೇ ಶಾಸಕರಿಗೂ, ಮಂತ್ರಿಗಳಿಗೂ ಮಾಡಿ. ಅವರಿಗೂ ಈ ರೀತಿ ಹೊಟ್ಟೆ ಇರಬೇಕು, ಇಷ್ಟೇ ತೂಕವಿರಬೇಕು ಎಂದು ಮಾಡಿ.

ಅಧ್ಯಕ್ಷರು : ಈಗ ಲೆಜಿಸ್ಲೇಚರ್ಸ್ ಹೋಂನಲ್ಲಿ ಹೆಲ್ತ್ ಕ್ಲಬ್ ಮಾಡಿಸುತ್ತಿದ್ದೇವೆ. ಇನ್ನು 15 ದಿವಸಗಳಲ್ಲಿ ಅಂದರೆ ಬಜೆಟ್ ಅಧಿವೇಶನಕ್ಕೆ ನಾವು ಬರುವಾಗ ಎಲ್ಲಾ ರೆಡಿಯಾಗಿರುತ್ತದೆ. ಅಲ್ಲಿ ಯೋಗ ಮತ್ತು ಇನ್ನಿತರ ಎಕ್ಸ್‌ಸೈಜ್‌ಗಳನ್ನು ಮಾಡುವುದಕ್ಕೆ ರೆಡಿಯಾಗುತ್ತಿದೆ. ಬಜೆಟ್ ಅಧಿವೇಶನಕ್ಕೆ ನಾವು ಮಾರ್ಚ್ 14 ರಂದು ಸೇರಿದಾಗ ಅಲ್ಲಿ ಪ್ರಾರಂಭೋತ್ಸವನ್ನು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ತಾವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ.

ಒಬ್ಬ ಮಾನ್ಯ ಸದಸ್ಯರು : ಪೊಲೀಸ್ ಡಿಪಾರ್ಟ್‌ಮೆಂಟ್‌ನವರಿಗೆ ಏನು ಸರ್ಕ್ಯೂಲರ್ ಕಳುಹಿಸುತ್ತಾರೋ ಹಾಗೇ ಶಾಸಕರಿಗೂ ಕಳುಹಿಸುವ ವಿಷಯವೇನಾದರೂ ಬರುತ್ತದೆಯೋ?

ಅಧ್ಯಕ್ಷರು : ಆಂಧ್ರಪ್ರದೇಶದ ಸೈಕ್ಲೋನ್‌ಗೆ ದುಡ್ಡು ಕೇಳಿದರೆ ಕೊಟ್ಟಿಲ್ಲ. ಇನ್ನು ಇದಕ್ಕೆ ಸರ್ಕ್ಯೂಲರ್ ಕಳುಹಿಸಿದರೆ ಕೇಳುತ್ತಾರೆಯೇ?

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಒಳ್ಳೆಯ ಸಲಹೆ ಮಾಡಿದ್ದೀರಿ. ದಯವಿಟ್ಟು ಶಾಸಕರಿಗೂ ಹೊಟ್ಟೆ ಇಷ್ಟೇ ಇರಬೇಕು, ತೂಕ ಇಷ್ಟೇ ಇರಬೇಕು ಮಂತ್ರಿಗಳಿಗೆ ಇಷ್ಟೇ ಇರಬೇಕೆಂದು ಮಾಡಿ. ಮಾನ್ಯ ಮುಖ್ಯಮಂತ್ರಿಯವರೇ, ತಾವು ಮುಂದಿನ ಬಾರಿ ಬದಲಾವಣೆ ಮಾಡುವಾಗ ಮಂತ್ರಿಗಳು ಇಷ್ಟೇ ತೂಕವಿರಬೇಕೆಂದು ಮಾಡಿ ಅವರನ್ನೆ ಮಂತ್ರಿಗಳನ್ನಾಗಿ ತೆಗೆದುಕೊಳ್ಳಿ. ಆಗ ಒಂದು ಶಿಸ್ತು ಬರುತ್ತದೆ, ನಾಳೆ ಅದನ್ನು ಶಿಸ್ತಿಗೆ ಒಳಪಡಿಸೋಣ. ತಮ್ಮ ಇಚ್ಛೆಗೆ ಬಂದಹಾಗೆ ಯದ್ವಾತದ್ವಾ ಕಣ್ಣು ಒಂದು ಕಡೆ, ಕಿವಿ ಒಂದು ಕಡೆ, ಮುಖ ಒಂದು ಕಡೆ ಬೆಳೆಸಿಕೊಂಡು ಬಂದರೆ...

ಅಧ್ಯಕ್ಷರು : ನೀವು ಮಾತು ಮಾತಿಗೂ ಕೈಯನ್ನು ಮಾನ್ಯ ಶಿವಪ್ಪನವರ ಕಡೆ ತೋರಿಸಬೇಡಿ. ಅದು ಚೆನ್ನಾಗಿರುವುದಿಲ್ಲ, ನಿಮಗೆ ನಾನು ಎಷ್ಟು ಸಲ ಹೇಳುವುದು. ಪಾಪ, ಅವರು ಪುಣ್ಯವಂತರು, ಕಾಫಿ ಬೆಳೆಗಾರರು...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶಿವಪ್ಪನವರು ಶಿವನೇ, ಅಂತಹ ವ್ಯಕ್ತಿತ್ವವಿದೆ. ಅವರಿಗಿಂತ ಹೆಚ್ಚಾಗಿ ಇಲ್ಲಿ ನನ್ನ ಪಕ್ಕದಲ್ಲಿ ಒಬ್ಬ ಬ್ರಹ್ಮಚಾರಿ ಕುಳಿತಿದ್ದಾರೆ ಅವರಿಂದ ನಮಗೆ ಅಪಾಯ. ನನಗೂ ಹಸಿರು ಕ್ರಾಂತಿ ಪುಟ್ಟಣ್ಣಯ್ಯನವರಿಗೂ ಇವರ ಚಿಂತೆಯಾಗಿ ಬಿಟ್ಟಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಮ್ಮ ತಂಟೆಗೆ ಏತಕ್ಕೆ ಬರುತ್ತೀರಿ, ನಮ್ಮ ಪಾಡಿಗೆ ನಮ್ಮನ್ನು ಬಿಟ್ಟುಬಿಡಿ, ನೀವು ಏನಾದರೂ ಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಏನಾಗಿದೆ ಎಂದರೆ, ವಿರಹ, ಆ ಪ್ರಶ್ನೆಯನ್ನು ನಾವು ಕೇಳುವುದಕ್ಕಾಗುವುದಿಲ್ಲ, ಕೆಲವು ವಿಚಾರಗಳನ್ನು ತಾವು ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ತಾವು ದಯಮಾಡಿ, ಶಾಸಕರ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೀರಿ, ಹೆಲ್ತ್ ಕ್ಲಬ್ ಮಾಡಿಸುತ್ತಿದ್ದೀರಿ, ಪುಸ್ತಕ ಮಳಿಗೆಯನ್ನು ತೆಗೆಸಿದ್ದೀರಿ....

ಶ್ರೀ ಜೆ. ಹೆಚ್. ಪಟೇಲ್ : ಈ ವಿವಾಹಿತರು ಹಾಗೂ ಅವಿವಾಹಿತರ ಬಗ್ಗೆ ಒಬ್ಬ ಆಂಗ್ಲ ವಿದ್ವಾಂಸ ಏನು ಹೆಳುತ್ತಾನೆಂದರೆ,

> " Marred ones, may or may not repent, but
> unmarried ones, are sure to repent"

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ವಿವಾಹಿತರು, ಅವವಿಹಾಹಿತರು, ಬ್ರಹ್ಮಚಾರಿ, ಇವೆಲ್ಲಾ ವ್ಯತ್ಯಾಸವಿರುವ ಪದಗಳು. ಬ್ರಹ್ಮಚಾರಿ ಬೇರೆ, ಅವಿವಾಹಿತರು ಬೇರೆ, ಇವನ್ನು

ಒಂದಕ್ಕೊಂದು ಸೇರಿಸಿ ವಿವಾಹಿತರ ಬಗ್ಗೆ ಆಂಗ್ಲ ವಿದ್ವಾಂಸ ಹೇಳಿರುವುದನ್ನು ಹೇಳಿದರೆ ಸರಿಹೋಗುವುದಿಲ್ಲ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಈಗ ನೀವು ವಿವಾಹಿತರೊ ಅವಿವಾಹಿತರೊ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಆ ವ್ಯಾಖ್ಯಾನವನ್ನು ಬೇಕಾದರೆ ಪ್ರತ್ಯೇಕವಾಗಿ ಮಾಡೋಣ, ಹಾಸ್ಯಕ್ಕೆ ನಾನು ಹೇಳುತ್ತಿದ್ದೇನೆ, ನನ್ನ ಪ್ರಕಾರ ನಮ್ಮ ದೇಶದ ವೇದ ಉಪನಿಷತ್ತುಗಳ ಪ್ರಕಾರ ಮದುವೆಯಾಗಿರಲಿ ಅಥವಾ ಆಗದಿರಲಿ 15 ವರ್ಷಗಳ ನಂತರ ಯಾರೂ ಕೂಡ ಬ್ರಹ್ಮಚಾರಿಯಾಗಿರಲಿಕ್ಕೆ, ಸಾಧ್ಯವಿಲ್ಲ. ಇದು ನಮ್ಮ ವೇದ ಹಾಗೂ ಉಪನಿಷತ್ತುಗಳು ಹೇಳುವ ವಿಷಯ. 15 ವರ್ಷಗಳ ನಂತರ ಬ್ರಹ್ಮಚರ್ಯ ಎಂದು ಹೇಳಿದರೆ ಅದಕ್ಕೆ ಪ್ರತ್ಯೇಕವಾದ ವಿಧಿವಿಧಾನವಿದೆ ಆದುದರಿಂದ ಬ್ರಹ್ಮಚರ್ಯದ ಬಗ್ಗೆ ವ್ಯಾಖ್ಯಾನವಲ್ಲ.

ಅಧ್ಯಕ್ಷರು : ನಾವು ಈ ರೀತಿ ಚರ್ಚೆ ಮಾಡುತ್ತಿದ್ದರೆ, ಪತ್ರಿಕೆಯವರು ಏನು ಬರೆಯುತ್ತಾರೋ ಎಂದು ಭಯ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆ ವರ್ಗಾವರ್ಗಿಯ ಬಗ್ಗೆ ಹೇಳುವಾಗ ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನೇಕ ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಮತ್ತು ಬೆಂಗಳೂರಿನಲ್ಲಿ, ಒಂದೇ ಸ್ಥಳದಲ್ಲಿ ಕೆಲವು ಅಧಿಕಾರಿಗಳು ಈ ಪೋಲಿಸ್ ಠಾಣೆ ತಪ್ಪಿದರೆ ಆ ಪೋಲೀಸ್ ಠಾಣೆಯಲ್ಲಿ ಯಾವುದೋ ರೂಪದಲ್ಲಿ ಇದ್ದೇ ಇರುತ್ತಾರೆ. ಅವರ ಬಗ್ಗೆ ತಾವು ಸ್ಪಷ್ಟವಾದ ನಿರ್ಧಾರವನ್ನು ಕೈಗೊಳ್ಳಬೇಕು. ಮತ್ತು ಅಧಿಕಾರಿಗಳಲ್ಲಿ ಇವರು ನಮ್ಮ ಜಾತಿಯವರು ಅವರನ್ನು ಇಲ್ಲಿಗೆ ಹಾಕಿಸಿಕೊಳ್ಳಬೇಕೆನ್ನುವ ಈ ಜಾತಿಯ ವರ್ಗಾವರ್ಗಿ ನಿಲ್ಲಬೇಕು. ಈ ಜಾತಿಯ ವರ್ಗಾವರ್ಗಿಯಿಂದ ಒಂದೇ ಕಡೆ ಕೆಲವು ಅಧಿಕಾರಿಗಳು ಹತ್ತು, ಹದಿನೈದು ವರ್ಷಗಳಿಂದ ಹಾಗೆಯೇ ಇರುತ್ತಾರೆ. ತಾಲ್ಲೂಕುಗಳಲ್ಲಿರಬಹುದು, ಜಿಲ್ಲೆಗಳಲ್ಲಿರಬಹುದು, ಬೆಂಗಳೂರಿನಲ್ಲಂತೂ ಸಾರೋದ್ಧಾರವಾಗಿ ಇದು ನಡೆಯುತ್ತಿದೆ. ಈ ರೀತಿ ನಿರಂತರವಾಗಿ ನಡೆಯುತ್ತಿರತಕ್ಕಂಥದ್ದನ್ನು ನಿಲ್ಲಿಸಬೇಕು.

ಅಧ್ಯಕ್ಷರು : ಯಾವ ಇಲಾಖೆಯಲ್ಲಿ ನಡೆಯುತ್ತಿದೆ?

ಶ್ರೀ ವಾಟಾಳ್ ನಾಗರಾಜ್ : ಸ್ವಲ್ಪ ಹೆಚ್ಚುಕಡಿಮೆ ಪೋಲಿಸ್ ಇಲಾಖೆಯಲ್ಲೇ ನಡೆಯುತ್ತಿರುವುದು. ಬೇರೆ ಬೇರೆ ಶಕ್ತಿ ಇರುವ ಕೆಲವು ಇಲಾಖೆಗಳಿವೆ.

ಅಧ್ಯಕ್ಷರು : ಶಕ್ತಿ ಎಂದರೇನು? ಜೋರಾಗಿರುತ್ತಾರೋ? ಆ ಶಕ್ತಿ ಅವರಿಗೆ ಎಲ್ಲಿಂದ ಸಿಗುತ್ತದೆ?

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನೇ ಸರ್ಕಾರಕ್ಕೆ ಹೇಳುತ್ತಿದ್ದೇನೆ.

ಅಧ್ಯಕ್ಷರು : ನಮ್ಮ ಎಂಎಲ್ಎಗಳ ಲೇಟರ್ ಪ್ಯಾಡ್ ಇರುತ್ತದಲ್ಲ, ಅದೇ ಅವರ ಶಕ್ತಿ.

ಶ್ರೀ ಎಸ್. ರಾಜೇಂದ್ರನ್ : ಎಲ್ಲಾ ಲೇಟರ್ ಪ್ಯಾಡ್‌ಗೆ ಇಲ್ಲ ಅಧ್ಯಕ್ಷರೆ, ಪಕ್ಷದ ಲೇಟರ್ ಪ್ಯಾಡ್‌ಗೆ ಮಾತ್ರ ಇರುತ್ತದೆ.

ಅಧ್ಯಕ್ಷರು : ಕೆಲವು ಈ ಪಕ್ಷ ಇತ್ಯಾದಿಗಳು ಬೇಕಾಗುತ್ತದೆ, ಈಗ ನಮ್ಮ ವಾಟಾಳ್‌ನಾಗರಾಜ್‌ರವರು ಬರೆದುಕೊಟ್ಟರೆ ಮಾಡುವುದಿಲ್ಲವೇ?

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೆ, ನಮ್ಮ ಲೇಟರ್ ಪ್ಯಾಡ್‌ಗೆಲ್ಲಾ ಬೆಲೆಯಿಲ್ಲ; ನಾವು ಎಷ್ಟೊ ಲೇಟರ್ ಪ್ಯಾಡ್ ಕೊಟ್ಟಿದ್ದೇವೆ ಯಾವುದೂ ಮಾಡಿಲ್ಲ.

ಅಧ್ಯಕ್ಷರು : ಅವರ ಗೋಳು ಅವರದು

ಶ್ರೀ ವಾಟಾಳ್ ನಾಗರಾಜ್ : ನಾನು ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎರಡು ಪತ್ರಗಳನ್ನು ಬರೆದಿದ್ದೇನೆಯೆ ಹೊರತು, ಅಧ್ಯಕ್ಷರೆ, ನಾನು ನಿಮಗೂ ಹೇಳಿದ್ದೇನೆ, ತಮಗೂ ಗೊತ್ತಿದೆ.

ಅಧ್ಯಕ್ಷರು : ಆ ವಿಚಾರ ನನಗೂ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಆದರೆ ಸಾಮಾನ್ಯವಾಗಿ ನಾನು ಮಾತನಾಡುವುದಾದರೆ, ಆ ಜನರದ್ದೇ ಒಂದು ವರ್ಗ, ಅವರು ಆರಾಮವಾಗಿ, ಖಾಯಂ ಆಗಿ ಇರತಕ್ಕಂಥವರದೇ ಒಂದು ಜಾತಿ. ಯಾರೇ ಬರಲಿ, ಯಾವುದೇ ಸರ್ಕಾರ ಬರಲಿ, ತಕ್ಷಣ ಅಲ್ಲಿಗೆ ಹೋಗುತ್ತಾರೆ, ಯಾವುದೊ ಸೂತ್ರ, ಎಲ್ಲಿಂದಲೊ ಕರೆದುಕೊಂಡು ಬಂದು ಹಿಡಿದುಕೊಂಡು ಅಲ್ಲಿ ಉಳಿದುಕೊಳ್ಳುತ್ತಾರೆ. ಮತ್ತೇ ಈ ಜಾತಿಯ ವರ್ಗಾವರ್ಗಿ ಇದೆಯಲ್ಲ, ಇದು ಬಹಳ ಅನಿಷ್ಟ. ನಾವು ಬಂದಿದ್ದೇವೆ ನಾನು ಮುಖ್ಯ ಮಂತ್ರಿ, ನಾನು ಮಂತ್ರಿ, ನಮ್ಮ ಜಾತಿಯವರು ಎನ್ನುವುದು ಇದೆಯಲ್ಲ ಇದು ಹೋಗಬೇಕಾದದ್ದು ಕರ್ತವ್ಯ. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಇವೆಲ್ಲವನ್ನೂ ಮಾಡುವುದಕ್ಕೆ ಮುಖ್ಯಮಂತ್ರಿಗಳು ಸಮರ್ಥರು ಎಂದು ಹೇಳುತ್ತಿದ್ದೇನೆ. ಅವರು ಯಾವುದೇ ಆಸೆ ಆಕಾಂಕ್ಷೆ ಇಟ್ಟುಕೊಂಡು ಅಥವಾ ಯಾವುದೇ ಉದ್ದೇಶವಿಟ್ಟುಕೊಂಡು ಇರತಕ್ಕಂಥವರಲ್ಲ, ನೇರವಾಗಿ ಮಾಡುವ ಶಕ್ತಿ ನಿಮಗಿದೆ, ಅದನ್ನು ಮಾಡಿ ಇಲ್ಲದಿದ್ದರೆ ಎಲ್ಲಾ ಮುಖ್ಯಮಂತ್ರಿಗಳಂತೆ ಎಲ್ಲರ ಮಾತಿಗೂ ಕಿವಿಗೊಟ್ಟುಕೊಂಡು ಹಿತ್ತಾಳೆ ಕಿವಿಯಾಗಿ ಅವರು ಹೇಳಿದ್ದಕ್ಕೂ ಒಪ್ಪಿಕೊಂಡು, ಇವರು ಹೇಳಿದ್ದಕ್ಕೂ ಒಪ್ಪಿಕೊಂಡು, ಬೆಳಿಗ್ಗೆ ಒಂದು ಆದೇಶ, ಮಧ್ಯಾಹ್ನ ಒಂದು ಆದೇಶ, ಸಂಜೆ ಒಂದು ಆದೇಶ, ಈ ಒತ್ತಡಗಳಿಗೆ ಮಣಿದು ಮಾಡುವ ವ್ಯವಸ್ಥೆ ತಮ್ಮದಾಗಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅಧ್ಯಕ್ಷರೆ, ಈ ಪೋಲಿಸರ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು ಹಾಗೂ ಒಂದು ಚಿಂತನೆಯಾಗಬೇಕು. 1994 ರಿಂದ ಕಳೆದ ಮೂರು ವರ್ಷಗಳ ಒಂದು ಅಂಕಿಅಂಶವನ್ನು ಕೊಡುತ್ತೇನೆ. 19994 ರಲ್ಲಿ ಕಳ್ಳತನ 19,635, 1995 ರಲ್ಲಿ 18,995, 1996ರಲ್ಲಿ 16,830 - ಇವು ಹೆಚ್ಚು ಕಡಿಮೆ ಈ ಮೂರು ವರ್ಷಗಳಲ್ಲಿ ನಡೆದಿರುವ ಕಳ್ಳತನದ ಪ್ರಕರಣಗಳ ಸಂಖ್ಯೆಯಾಗಿದೆ. ಒಟ್ಟು ಕಳ್ಳತನ 55,450, ಲಾಕ್‌ಅಪ್ ಸಾವು 15 ನಾನು ಯಾರನ್ನೂ ಬೈಯಬೇಕು ಎನ್ನುವ ಉದ್ದೇಶದಿಂದ ಇದನ್ನು ಹೇಳುತ್ತಿಲ್ಲ. ಈ ಮೂರು ವರ್ಷಗಳಲ್ಲಿ ಸಣ್ಣ ಕಳ್ಳತನ 29,096 196 ಜನವರಿಯಿಂದ 1997

ರವರೆಗೆ ದರೋಡೆ 273, ಸುಲಿಗೆ 1084, ಕೊಲೆ 1756 ಆಗಿವೆ. 1756 ಕೊಲೆಯಾಗಿರಬೇಕಾದರೆ ಒಂದು ದಿನಕ್ಕೆ ಸರಾಸರಿ 5 ಕೊಲೆ ಕರ್ನಾಟಕ ರಾಜ್ಯದಲ್ಲಿ ಆಗಿವೆ. ನಾನೇ ನೇರವಾಗಿ ಪೋಲಿಸ್‌ನವರನ್ನು ಗುರುತಿಸುತ್ತೇನೆಂದಲ್ಲ, ವ್ಯವಸ್ಥೆ ಹೇಗಿದೆ ಎಂದು ಪ್ರತಿದಿನ ಕಾಣುತ್ತಿರುವುದೇನೆಂದರೆ, ಮಕ್ಕಳ ಅಪಹರಣ, ದರೋಡೆ, ಸುಲಿಗೆ ಮತ್ತು ಪಿಸ್ತೂಲಿನ ಸಂಸ್ಕೃತಿ ಈಗ ಕರ್ನಾಟಕ ರಾಜ್ಯಕ್ಕೆ ಬರುತ್ತಿದೆ; ತಾವು ಎಚ್ಚರ ವಹಿಸಬೇಕು. ಪಿಸ್ತೂಲ್ ಸಂಸ್ಕೃತಿ, ಮಕ್ಕಳ ಅಪಹರಣದ ಸಂಸ್ಕೃತಿ, ಇದು ಕರ್ನಾಟಕ ರಾಜ್ಯದಲ್ಲಿ ಇರಲಿಲ್ಲ, ನಾನು ತಿಳಿದಂತೆ ಕರ್ನಾಟಕದ ಇತಿಹಾಸದಲ್ಲಿರಲಿಲ್ಲ. ನಿನ್ನೆಯ ದಿವಸ ಹತ್ತಿರದಲ್ಲೆ ಇರುವ ಜಾಕಿಯೊಬ್ಬನ ಮೇಲೆ ಗುಂಡು ಹಾರಿಸಿದ್ದಾರೆ. ಹಿಂದೆ ಆಟೋರಿಕ್ಷಾದಲ್ಲಿ ಹೋಗುತ್ತಿರುವವರ ಮೇಲೆ ಗುಂಡು ಹಾರಿಸಿದ್ದಾರೆ, ನಮ್ಮ ಗುರುಪಾದಪ್ಪ ನಾಗಮಾರಪಳ್ಳಿಯವರು ಅವರ ಮನೆಯಲ್ಲಿ ಸಭೆ ನಡೆಸುತ್ತಿರುವಾಗ ಒಬ್ಬ ಬ್ಲೇಡ್ ತೆಗೆದುಕೊಂಡು ಕುತ್ತಿಗೆಗೆ ಹೊಡೆಯುವುದಕ್ಕೆ ಹೋಗಿದ್ದಾನೆ, ನಕ್ಸಲೀಯರು ಅಲ್ಲಿ ತಳಪಳಿಸುತ್ತಿದ್ದಾರೆ. ಹೀಗೆ ಕರ್ನಾಟಕದ ಉದ್ದಗಲಕ್ಕೂ ಭಯೋತ್ಪಾದನೆ ನಿರ್ಮಾಣವಾಗಿದೆ; ರಸ್ತೆಯಲ್ಲಿ ಸಾಮಾನ್ಯ ಜನ ಓಡಾಡುವ ಪರಿಸ್ಥಿತಿ ಇಲ್ಲ. ರಾತ್ರಿಯಂತೂ ಬಿಡಿ, ರಸ್ತೆಯಲ್ಲಿ ಹೋಗುವಂಥ ಮಾತೇ ಇಲ್ಲ. ಇಂಥ ಮೋಡ ಕವಿದ ವಾತಾವರಣ ರಾಜ್ಯದಲ್ಲಿ ನಿರ್ಮಾಣವಾಗಿದೆ ಪೋಲಿಸ್ ಇಲಾಖೆಯಲ್ಲಿ ಸಂಪೂರ್ಣವಾಗಿ ಎಲ್ಲರೂ ಭ್ರಷ್ಟರು ಎಂದು ನಾನು ಹೇಳದೆ ಇದ್ದರೂ ಕೂಡ ಇದು ಒಂದು ಕೂಡ ಪೋಲಿಸರಿಗೆ ಸವಾಲಾಗಿದೆ. ಪೊಲೀಸ್ ಇಲಾಖೆ ಇದನ್ನು ಸವಾಲಾಗಿ ಸ್ವೀಕಾರ ಮಾಡಬೇಕು; ಇದನ್ನು ಸವಾಲಾಗಿ ಸ್ವೀಕಾರ ಮಾಡಲಿಲ್ಲವೆಂದರೆ, ಇದು ಸರಿಯಾದ ಮಾರ್ಗವಲ್ಲ. ಪೋಲಿಸರಿಗೆ ಸೌಜನ್ಯದ ಭಾಷೆಬೇಕು. ಆ ಸೌಜನ್ಯ ಭಾಷೆ ಅವರಿಗೆ ಇಲ್ಲವೇ ಇಲ್ಲ. ಎಲ್ಲಾ ಪೋಲಿಸ್ ಠಾಣೆಗಳಲ್ಲೂ ಸತ್ಯಮೇವ ಜಯತೆ ಎಂದು ಇರುತ್ತದೆ, ಅದಕ್ಕೆ ಅಪಮಾನ, ಅಲ್ಲಿ ಸತ್ಯಮೇವ ಜಯತೆ ಇಲ್ಲವೇ ಇಲ್ಲ, ಸತ್ಯವನ್ನು ಮೇಯುವ ಜಯತೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಪೋಲಿಸರಿಗೂ ಹಾಗೂ ನಿಮಗೆ ಬಹಳ ಕನಿಷ್ಟ ಸಂಬಂಧವಿದ್ದರೂ ಕೂಡ ಈ ಮೂವತ್ತು ವರ್ಷಗಳಲ್ಲಾದರೂ ನೀವು ಅವರಿಗೆ ಭಾಷೆಯನ್ನು ಕಲಿಸಲಿಲ್ಲವೆಂದರೆ ಹೇಗೆ? ಏಕೆಂದರೆ ಅವರಿಗೂ ಇವರಿಗೂ ಬಹಳ ಸಂಪರ್ಕ, ಮೂವತ್ತು ವರ್ಷಗಳಿಂದ ಬಹಳ ಕ್ಲೋಸ್ ಫ್ರೆಂಡಶಿಫ್ ಇದೆ. ಮೂವತ್ತು ವರ್ಷಗಳಾದರೂ ಕೂಡ ಅವರ ನಡವಳಿಕೆಯಲ್ಲಿ ಬದಲಾವಣೆಯಾಗಲಿಲ್ಲವೆಂದರೆ ನಿಮ್ಮ ಪ್ರಭಾವ ಅವರ ಮೇಲೆ ಬಿದ್ದಿಲ್ಲವೆಂದಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಪ್ರಭಾವ ಬಿದ್ದಿಲ್ಲವೆನ್ನುವುದು ಅಧ್ಯಕ್ಷರಿಗೂ ಗೊತ್ತು.

ಅಧ್ಯಕ್ಷರು : ಮೂವತ್ತು ವರ್ಷಗಳಿಂದ ಇವರೂ ಇದ್ದರು, ಇವರು ಪವರ್‌ಫುಲ್ ಎಂದಾಯಿತು, ಇವರ ಪ್ರಭಾವವೇ ಅವರ ಮೇಲಿದೆ, ನಿಮ್ಮ ಪ್ರಬಾವವಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸರ್, ನಾನು ಯಾವುದೇ ಸರ್ಕಾರವನ್ನು, ಯಾರನ್ನು ಬೈಯುತ್ತಿಲ್ಲ, ಈ ವ್ಯವಸ್ಥೆ ಇದ್ದರೆ ಹೇಗೆ ಎಂದು ನಾವೇ ಆತ್ಮಾವಲೋಕನ ಮಾಡಿಕೊಳ್ಳೋಣ. ನಾಗರೀಕರಿಗೆ ಕಾನೂನು ಸುವ್ಯವಸ್ಥೆಯನ್ನು ನಾವು ಕೊಡುತ್ತೇವೆ ಎನ್ನುವವರು ಇಷ್ಟು ಕೊಲೆ, ಇಷ್ಟು ದರೋಡೆ, ಇಷ್ಟು ಸುಲಿಗೆ ನಡೆಯುತ್ತಿದ್ದರೆ ಹೇಗೆ. ತಮಗೆ ಗೊತ್ತಿರಬಹುದು, ಕಳೆದ

ವರ್ಷ ಒಬ್ಬ ವಿದೇಶಿ ಪ್ರಜೆಯನ್ನು ಆಟೋ ರಿಕ್ಷಾದಲ್ಲಿ ಕೊಂದು ಹೆಂಡತಿಯನ್ನು ಬೇರೆ ಕಡೆ ಹಾಕಿದರು, ಆ ಕೊಲೆ ಮಾಡಿದವರು ಯಾರೆಂದು ಇವತ್ತಿನವರೆಗೂ ಪತ್ತೆಯಾಗಿಲ್ಲ, ಪರಿಸ್ಥಿತಿ ಈ ರೀತಿ ಇದೆ. ಯಾವುದು ಬೇಡ ಸ್ವಾಮಿ, ದೂರಕ್ಕೆ ಹೋಗುವುದು ಬೇಡ ಶಾಸಕರ ಭವನದಲ್ಲಿ ಕೊಲೆಯಾಯಿತು; ಅದು ಹೊಡೆದಾಟವಿರಬಹುದು, ಏನೇ ಇರಬಹುದು, ಕೊಲೆಯಾಯಿತು.

ಅಧ್ಯಕ್ಷರು : ಪತ್ರಿಕೆಯಲ್ಲಿ ಮತ್ತೆ ಶಾಸಕರ ಭವನದ ಕೊಲೆ ವಿಷಯ ಇಲ್ಲಿ ಪ್ರಸ್ತಾಪವಾಯಿತು ಎಂದು ಬಂದುಬಿಟ್ಟಾರು ಎಂದು ನನಗೆ ಭಯ; ಅಲ್ಲಿ ವಾತಾವರಣವನ್ನು ಸುಧಾರಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅಲ್ಲಿ ದೋಬಿ ಕೆಲಸದವನಾದ ಮಡಿವಾಳದವನು ಒಬ್ಬ ಇದ್ದಾನೆ. ಅವನ ಜೊತೆ ಅವನ ಸಂಬಂಧಿಕರು ಯಾರೊ ಬಂದಿದ್ದವರು, ಅವರದೇನೊ ಮನೆಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಕುಡಿದುಬಿಟ್ಟು ಏನೊ ಜಗಳ ಮಾಡಿಕೊಂಡರು. ಅದನ್ನು ಪ್ರಸ್ತಾಪ ಮಾಡಿದರೆ, ಅದು ಬೇರೆ ರೀತಿಯಲ್ಲಿ ಶಾಸಕರ ಭವನದಲ್ಲಿ ಈ ರೀತಿಯ ವಾತಾವರಣ ಇದೆ ಎನ್ನುವ ಅಭಿಪ್ರಾಯ ಬರುವುದು ಬೇಡ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅಲ್ಲಿ ಯಾವ ರೀತಿ ಭಯ ಭೀತಿ ಇಲ್ಲದ ವಾತಾವರಣವಿದೆ ಎಂದು ಹೇಳಿದೆ ಅಷ್ಟೆ. ತಮಗೆ ಗೊತ್ತಿರುವ ಹಾಗೆ ಈ ಸದನದ ಶಾಸಕರಾದ ಡಾ: ಚಿತ್ತರಂಜನ್‌ರವರ ಕೊಲೆಯಾಯಿತು. ಕರ್ನಾಟಕ ಇತಿಹಾಸದಲ್ಲಿ ಒಬ್ಬ ಶಾಸಕರನ್ನು ಕೊಲೆ ಮಾಡಿದ ಪರಿಸ್ಥಿತಿಯನ್ನು ನೋಡಿದಾಗ, ನಾನೇನು ಸರ್ಕಾರವಾಗಲಿ, ಪೊಲೀಸ್ ನವರನ್ನಾಗಲಿ ನೀವು ಸರಿಯೇ ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ, ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಆತ್ಮಾವಲೋಕನವಾಗಬೇಕು, ಚಿಂತನೆಯಾಗಬೇಕು. ನಮ್ಮ ಶಾಸಕರಾದ ವೈ. ರಾಮಕೃಷ್ಣರವರ ಕ್ಷೇತ್ರದಲ್ಲಿ ದಿನನಿತ್ಯ ಲೆಕ್ಕವಿಲ್ಲದಂತೆ ಕೊಲೆ ನಡೆಯುತ್ತಿದೆ, ಯಾರು ಅದನ್ನು ನಿಯಂತ್ರಿಸಬೇಕು.?

ಅಧ್ಯಕ್ಷರು : ಅವರು ಹೇಳಿದರೆಂದು ನೀವು ಕೂಡ ದಿನನಿತ್ಯ ನಡೆಯುತ್ತಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಅರ್ಥವಿದೆ, ಆ ಪಟ್ಟಿಯನ್ನು ನೋಡಿದರೆ, ಅದರಲ್ಲಿ ಸರಾಸರಿ ತೆಗೆದುಕೊಂಡರೆ ಪ್ರತಿದಿನ ಎನ್ನುವ ವ್ಯವಸ್ಥೆ ಬರುತ್ತದೆ, ಅದರಲ್ಲೇನು ಅನುಮಾನವಿಲ್ಲ. ಕೆ. ಜಿ. ಎಫ್. ಪುರಸಭೆಯಲ್ಲಿ ಕೊಲೆಯಾಯಿತು. ಹೆಜ್ಜಾಲದಲ್ಲಿ ಗೋಲಿಬಾರ್ ಆಯಿತು. ಮುಳಬಾಗಿಲಿನಲ್ಲಿ ಗೋಲಿಬಾರ್ ಆಯಿತು. ಈ ಗೋಲಿಬಾರ್ ಮಾಡತಕ್ಕಂಥ ವ್ಯವಸ್ಥೆ ಸಾಧುವಲ್ಲ ಮತ್ತು ಸರಿಯಾದುದಲ್ಲ. ಲಾಕಪ್ ಸಾವಿನ ಬಗ್ಗೆ ಹೇಳುವುದಾದರೆ, ಹಿಂದೆ ಮಲ್ಲೇಶ್ವರದಲ್ಲಿ ಮುನಿಯಮ್ಮನ ಪ್ರಕರಣ ಆಯಿತು. ಇದು ತಮಗೂ ಗೊತ್ತಿರಬಹುದು. ಅದರ ಬಗ್ಗೆ ಒಂದು ವಾರ ಕಾಲ ಚರ್ಚೆ ಆಯಿತು. ಆಗ ಶ್ರೀಯುತರಾದ ಪೂಣಚ್ಚ ಅವರು ಗೃಹಮಂತ್ರಿಗಳಾಗಿದ್ದರು. ಇದೆಲ್ಲದರ ಬಗ್ಗೆ ನಾನು ಯಾರ ಮೇಲೂ ಆಕ್ಷೇಪಣೆ ಮಾಡುತ್ತಿಲ್ಲ. ನಮಗೆ ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ. ಈ ಪೊಲೀಸ್ ವ್ಯವಸ್ಥೆ, ಕಾನೂನು ಸುವ್ಯವಸ್ಥೆ, ನಾಗರೀಕರ ಪರಿಸ್ಥಿತಿ, ಇವೆಲ್ಲ ಸರಿಹೋಗಬೇಕೆಂದು ನಾನು ಹೇಳುತ್ತಿದ್ದೇನೆ. ಮತ್ತು ಬೇಬುಕಳ್ಳರು, ಚೈನು ಕೀಳತಕ್ಕಂಥವರು, ಭಯೋತ್ಪಾದಕರು, ಮೊದಲು ಬೆಂಗಳೂರಿನಲ್ಲಿ

ಭಯೋತ್ಪಾದಕರ ಹೆಸರೇ ಇರಲಿಲ್ಲ. ಈಗ ಭೂಗತರಾದವರು ಬೆಂಗಳೂರಿಗೆ ಬರುತ್ತಿದ್ದಾರೆ. ಈ ಭಯೋತ್ಪಾದನೆಕೃತ್ಯದಲ್ಲಿ ಕರ್ನಾಟಕದವರಿಗಿಂತ ಹೆಚ್ಚಾಗಿ ಹೊರಗಿನಿಂದ ಜನ ಬಂದು ಪಾಲ್ಗೊಳ್ಳುತ್ತಿದ್ದಾರೆ. ಇದನ್ನು ನಾವು ಹದ್ದಿನ ಕಣ್ಣಿನ ರೀತಿಯಲ್ಲಿ ಎಚ್ಚರವಹಿಸಿ ನೋಡಬೇಕು. ಪೊಲೀಸ್ ಇಲಾಖೆ ಸಂಪೂರ್ಣವಾಗಿ ಕಾಯಕಲ್ಪವಾಗಬೇಕು. ಈ ಪೊಲೀಸ್ ಇಲಾಖೆಗೆ ಕಾಯಕಲ್ಪವಾಗಲಿಲ್ಲವೆಂದು ಹೇಳಿದರೆ ಅದು ಸಂಪ್ರದಾಯ ಅಲ್ಲ, ಮತ್ತು ಒಳ್ಳೆಯ ನೀತಿ ಆಗುವುದಿಲ್ಲ. ಈಗ ಪೊಲೀಸ್ ಇಲಾಖೆಗೆ ಒಂದು ಹೊಸ ವ್ಯವಸ್ಥೆ ಮಾಡುತ್ತಿದ್ದಾರಂತೆ. ತಮಗೆ ಗೊತ್ತಿರುವ ಹಾಗೆ ಈ ಪೊಲೀಸ್ ಇನ್ಸ್‌ಪೆಕ್ಟರುಗಳಿಗೆ ಮತ್ತು ಸಬ್ ಇನ್ಸ್‌ಪೆಕ್ಟರುಗಳಿಗೆ ಒಂದು ಟೋಪಿಯನ್ನು ಕೊಟ್ಟಿದ್ದಾರೆ. ಈ ಹೊಸದಾಗಿ ತಂದಿರುವಂಥ ಟೋಪಿಯನ್ನು ಪೊಲೀಸರು ಹಾಕಿಕೊಂಡರೆ ಅವರು ಪೊಲೀಸರು ಕಂಡ ಹಾಗೆ ಕಣ್ಣಿಗೆ ಕಾಣುವುದಿಲ್ಲ. ಸರ್ಕಾರ ವರ್ಷಕ್ಕೊಂದು ಸಾರಿ ಟೋಪಿಗಳನ್ನು ಬದಲಾವಣೆ ಮಾಡುವುದು ಒಳ್ಳೆಯ ವ್ಯವಸ್ಥೆಯಲ್ಲ. ಇದು ಗೃಹ ಇಲಾಖೆಗೆ ಗೌರವ ತರತಕ್ಕಂಥದ್ದು ಅಲ್ಲ; ಪೊಲೀಸ್ ಇಲಾಖೆಯವರು ಹಾಕತಕ್ಕಂಥ ಸಮವಸ್ತ್ರಗಳನ್ನು ಖಾಸಗಿಯವವರು ಯಾರೂ ಕೂಡ ಹಾಕಬಾರದೆಂದು ಸರ್ಕಾರ ಸ್ಪಷ್ಟವಾದ ಆದೇಶವನ್ನು ಹೊರಡಿಸಬೇಕು. ಪೊಲೀಸ್‌ನವರು ಖಾಕಿ ಬಟ್ಟೆಯನ್ನು ಹಾಕುತ್ತಾರೆ ಕಾರ್ಖಾನೆಗೆ ಹೋಗುವವನೂ ಕೂಡ ಖಾಕಿ ಬಟ್ಟೆಯನ್ನು ಹಾಕುತ್ತಾನೆ. ಬೇರೆ ಅಂಗಡಿಯವನೂ ಕೂಡ ಪೊಲೀಸ್ ಡ್ರೆಸ್ ತರಹ ಖಾಕಿ ಬಟ್ಟೆ ಹಾಕುತ್ತಾನೆ, ಅದೇ ತರಹ ಹ್ಯಾಟ್ ಹಾಕುತ್ತಾನೆ, 3-4 ಬಹುಮಾನವೆಂದು ಹೇಳಿ ಅವನೇ ಬಿಲ್ಲೆಗಳನ್ನು ಹಾಕಿಕೊಳ್ಳುತ್ತಾನೆ. ಅಲ್ಲಿ ನಿಂತಿರುವ ಜವಾನನು ಕೂಡ ಇದೇ ರೀತಿಯ ಬಿಲ್ಲೆಗಳನ್ನು ಹಾಕಿಕೊಳ್ಳುತ್ತಾನೆ. ನಮ್ಮಲ್ಲಿ ಡಿ. ಜಿ. ಯವರು, ಎಸ್. ಪಿ. ಯವರು ಬಿಲ್ಲೆಗಳನ್ನು ಹಾಕಿಕೊಳ್ಳುತ್ತಾರೆ. ಅದೇ ರೀತಿ ಖಾಸಗಿಯವರೂ ಹಾಕಿಕೊಂಡಿರುತ್ತಾರೆ. ಈ ವ್ಯವಸ್ಥೆ ಹೋಗಬೇಕಾದರೆ ಪೊಲೀಸ್ ಇಲಾಖೆಗೆಂದೇ ಏನು ಸಮವಸ್ತ್ರ ಮಾಡಿದ್ದೇವೆ ಆ ಸಮವಸ್ತ್ರ ಬದಲಾವಣೆಯಾಗಬಾರದು. ಖಾಕಿ ಎಂದು ಏನು ಮಾಡಿದ್ದೇವೆ ಅದು ಹಾಗೆಯೇ ಇರಬೇಕು. ಈಗ ಹೊಸದಾಗಿ ಪೊಲೀಸರಿಗೆಂದು ಮಾಡಿರತಕ್ಕಂಥ ಟೋಪಿಯನ್ನು ತಮಗೆ ತೋರಿಸಬೇಕೆಂದು ತಂದಿದ್ದೇನೆ. ನೋಡಿ, ಈ ಟೋಪಿಯನ್ನು ಹಾಕಿಕೊಂಡು ಹೋದರೆ ಇವರು ಪೊಲೀಸರು ಎಂದು ಹೇಳುತ್ತಾರೆ? ಇದಕ್ಕೆ ಒಂದು ಸರ್ಕಾರದ ಬಿಲ್ಲೆ ಇದೆ. ಇದನ್ನು ತಲೆಗೆ ಹಾಕಿಕೊಂಡು ಹೋದರೆ ಅವನಿಗೆ ಇರುವ ಮರ್ಯಾದೆಯೂ ಹೋಗುತ್ತದೆ. ಇವನಿಗೆ ಕಳ್ಳರೂ ಸಹ ಹೆದರುವುದಿಲ್ಲ, ದರೋಡೆಕಾರರು ಹೆದರುವುದಿಲ್ಲ, ಬೇರೆ ಗೌರವಸ್ಥರು ಸಹ ಹೆದರುವುದಿಲ್ಲ. ಆದ್ದರಿಂದ ಈ ತರಹದ ಟೋಪಿಯನ್ನು ಏಕೆ ಮಾಡಿದಿರಿ? ಪೊಲೀಸ್ ಇಲಾಖೆ ನಮ್ಮ ಎಲ್ಲಾ ಇಲಾಖೆಗಳಿಂತ ಅತ್ಯಂತ ಶಕ್ತಿಯುತವಾದ ಇಲಾಖೆ. ಆ ಇಲಾಖೆಯನ್ನು ಯಾವತ್ತು ಕೂಡ ಕೆಳಕ್ಕೆ ತರಬಾರದು. ಅದಕ್ಕೆ ಶಕ್ತಿ ಕೊಡಬೇಕು. ದಕ್ಷತೆ ಹೆಚ್ಚಿಸಬೇಕು, ರಾಜ್ಯದಲ್ಲಿ ಅವರಿಗೆ ಹೆಚ್ಚು ಸಹಕಾರ ಕೊಡಬೇಕು. ಈ ಹಳೆಯ ಟೋಪಿ ಎಷ್ಟು ಸುಂದರವಾಗಿದೆ ನೋಡಿ. ಇದನ್ನು ಹಾಕಿಕೊಂಡು ಹೋದರೆ ಎಷ್ಟು ಶಕ್ತಿಯುತವಾಗಿ ಕಾಣುತ್ತಾರೆ, ಎಷ್ಟು ಗಂಭೀರವಾಗಿ ಕಾಣುತ್ತಾರೆ. ಈ ಹೊಸದಾಗಿ ತಂದಿರುವ ಟೋಪಿಯನ್ನು ಹಾಕಿಕೊಂಡರೆ ಕಳ್ಳಬಟ್ಟಿ ಸರಾಯಿ ಮಾರುವವನು ಕೂಡ ಎದ್ದು ನಿಂತುಕೊಳ್ಳುವುದಿಲ್ಲ. ಇದನ್ನು ಹಾಸ್ಯಕ್ಕೆ ಹೇಳುತ್ತಿಲ್ಲ. ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಸುಮಾರು 30 ವರ್ಷಗಳ ಕಾಲ ಪೊಲೀಸರಿಂದ ತೊಂದರೆ ಪಟ್ಟಿದ್ದೇನೆ. ನಾನು ಇದರ ಬಗ್ಗೆ ಅವರ ಮೇಲೆ ಅಕ್ಷೇಪಣೆ ಮಾಡುವುದಕ್ಕೆ ಹೋಗುವುದಿಲ್ಲ.... ಹೌದು,

ನಾನು ಚಳುವಳಿ ಮಾಡಿದ್ದೇನೆ, ಹೋರಾಟ ಮಾಡಿದ್ದೇನೆ, ಜೈಲಿಗೆ ಹೋಗಿದ್ದೇನೆ, ಲಾಕಪ್‌ಗೆ ಹಾಕಿದ್ದಾರೆ. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಅದರ ಬಗ್ಗೆ ಅವರು ಕ್ಷಮಾಪಣೆ ಕೇಳಬೇಕೆಂದು ಹೇಳುತ್ತಿಲ್ಲ ಅವರಿಗೆ ಕರುಣೆ ಇಲ್ಲ. ಆದರೆ ಈ ಉಡುಪುಗಳನ್ನು ಬದಲಾವಣೆ ಮಾಡುವುದರಿಂದ ಅವರ ಶಕ್ತಿ ಕುಂದುತ್ತದೆ, ಅಪಾರವಾದ ಅವರ ಶಕ್ತಿ ಕೆಳಕ್ಕಿಳಿಯುತ್ತದೆ, ಇದರಿಂದ ವ್ಯವಸ್ಥೆ ಸರಿಯಾಗುವುದಿಲ್ಲ. ಸಾರಿಗೆ ಸಂಸ್ಥೆಯವರು, ಕಾರ್ಖಾನೆಗೆ ಹೋಗುವವರು, ಎಲ್ಲರೂ ಇದೇ ಖಾಕಿಯನ್ನು ಹಾಕುತ್ತಾರೆ. ಕಳ್ಳತನ ಮಾಡುವವನೂ ಸಹ ಹ್ಯಾಟ್ ಬೂಟ್ ಹಾಕಿಕೊಂಡು ಬಂದು ಯಾವ ಮನೆಗೆ ಬೇಕಾದರೂ ಸಿ. ಒ. ಡಿ. ಇಲಾಖೆಯಿಂದ ಲೋಕಾಯುಕ್ತದಿಂದ ಬಂದಿದ್ದೇವೆಂದು ಹೇಳಿ ನುಗ್ಗಿದರೆ ಅವನು ದಡಕ್ಕನೆ ಎದ್ದು - ಬೇಡಪ್ಪ, ದುಡ್ಡು ತೆಗೆದುಕೊಂಡು ಹೋಗು ಎಂದು ಹೇಳಬಹುದು. ಇವರು ಪೊಲೀಸರೇ ಅಲ್ಲವೇ ಎಂದು ಹೇಗೆ ಗೊತ್ತಾಗಬೇಕು ಆದ್ದರಿಂದ ಖಾಕಿ ಬಟ್ಟೆ ಪೊಲೀಸರಿಗೇ ಇರಬೇಕು, ಇಂಥ ಟೋಪಿ ಪೊಲೀಸರಿಗೇ ಇರಬೇಕು, ಅವರನ್ನು ಬಿಟ್ಟು ಬೇರೆ ಯಾರೂ ಉಪಯೋಗಿಸಬಾರದೆಂದು ಸರ್ಕಾರ ಸ್ಪಷ್ಟವಾದ ಆದೇಶವನ್ನು ಹೊರಡಿಸಬೇಕು. ಇಂತಹ ಆದೇಶವನ್ನು ಹೊರಡಿಸಲಿಲ್ಲವೆಂದರೆ ಇದು ಒಂದು ರೀತಿ ಸಂತೆಯಾಗುತ್ತದೆ. ಆ ಸಂತೆಯಲ್ಲಿ ಯಾವುದೋ ಒಂದು ಅದ್ವಾನ ಆಗುತ್ತದೆ, ಪೊಲೀಸ್ ಇಲಾಖೆಗೆ ಅಪಚಾರವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ ಈ ಬಗ್ಗೆ ನಾನು ಹೇಳಿದ್ದನು ಸ್ವೀಕಾರ ಮಾಡಿ ಎಂದು ಕಳಕಳಿಯಿಂದ ಹೇಳುತ್ತಿದ್ದೇನೆ. ಇನ್ನು ಪೊಲೀಸ್ ನೇಮಕಾತಿಗೆ ಸಂಬಂಧಪಟ್ಟಂತೆ ಸಂದರ್ಶನ ಬರುತ್ತದೆ. ತಾವು ಯಾವುದೋ ಒಂದು ಜಾತಿಯ ಅಥವಾ ಗುಂಪಿನ ಅಥವಾ ವರ್ಗದ ಜನರನ್ನು ಆಯ್ಕೆ ಮಾಡುವುದರ ಬದಲು, ಯಾರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ, ನನಗೆ ಗೊತ್ತಿದ್ದ ಹಾಗೆ ವರ್ಗಾವರ್ಗಿ ಬಗ್ಗೆ ನಿಮ್ಮದು ಸ್ಪಷ್ಟ ಸೂಚನೆ ಇತ್ತು. ಈಗ ಸ್ವಲ್ಪ ಜಾರುತ್ತಿದ್ದೀರಿ. ಇದು ಏಕೋ ಗೊತ್ತಿಲ್ಲ. ಮೊದಲು ಬಂದಾಗ ವರ್ಗಾವರ್ಗಿಯನ್ನು ನಮ್ಮ ಸರ್ಕಾರ ಮಾಡುವುದಿಲ್ಲವೆಂದು ತಮ್ಮ ನಿರ್ಧಾರವನ್ನು ಹೇಳಿದ್ದೀರಿ. ಅಲ್ಲಿ ಇಲ್ಲಿ ಒಂದೊಂದು ಕಡೆ ವರ್ಗ ಆಗುತ್ತಿದೆ. ಅದು ಆಗಬಾರದು, ಆ ರೀತಿಯಾದರ ನಿಮಗೆ ಗೌರವ ಬರುವುದಿಲ್ಲ. ಎಲ್ಲ ಇತಿಹಾಸ, ಚರಿತ್ರೆ ಇರತಕ್ಕಂಥ, ಒಬ್ಬ ಒಳ್ಳೆಯ ಅಸಾದಾರಣರಾದಂಥ ವ್ಯಕ್ತಿತ್ವ ಇರತಕ್ಕಂಥ ಮುಖ್ಯಮಂತ್ರಿಗಳಾದ ಇವರ ಕೈಯಲ್ಲಿ ಈ ರಾಜ್ಯದಲ್ಲಿ ಅನೇಕ ವಿಚಾರಗಳನ್ನು ಬದಲಾವಣೆ ಮಾಡತಕ್ಕಂಥ ಶಕ್ತಿ ಇರುವ ಇವರೊಬ್ಬರಿಗೆ ಮಾತ್ರ ಸಾಧ್ಯವೆಂದು ನಾವೆಲ್ಲ ಒಂದೆಡೆ ಸೇರಿದಾಗ ಮಾತನಾಡುತ್ತಿರುತ್ತೇವೆ. ಆದರೆ ನೀವು ಇಷ್ಟೇಕೆ ಚಿಂತನೆ ಮಾಡುತ್ತಿದ್ದೀರಿ? ಅದಕ್ಕೆ ಕಾರಣಗಳೇನು? ನಿಮಗಿರತಕ್ಕಂಥ ನೋವೇನು? ಆಡಳಿತದಲ್ಲಿ ಏನಾದರೂ ನೋವು ಇದೆಯೇ? ಅಥವಾ ನಿಮ್ಮ ಸಹವಾಸ, ಸಹಪಾಠಿಗಳಿಂದ ಏನಾದರೂ ತೊಂದರೆ ಇದೆಯೇ? ಇದ್ದರೆ ಹೇಳಿಬಿಡಿ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಆಡಳಿತದಲ್ಲಿ ಸಮಗ್ರರಾದ ಬದಲಾವಣೆ ತರಬೇಕೆಂದು ಹೇಳಿ, ಆಡಳಿತದಲ್ಲಿ ಬದಲಾವಣೆ ಬರಲಿ ಎನ್ನುವ ಉದ್ದೇಶದಿಂದ ಈಗ ಅವರ ಹತ್ತಿರ ಮೂರು ಮುಖ್ಯವಾದ ಪೋರ್ಟ್‌ಫೋಲಿಯೋಗಳಿವೆ. ಅಂದರೆ ಪವರ್, ಮತ್ತು ಪೊಲೀಸ್ ಇಲಾಖೆ ಅವರ ಹತ್ತಿರವೇ ಇದೆ. ಅದಕ್ಕಾಗಿ ಮೂರು ಪ್ರಮುಖವಾದಂಥ ಇಲಾಖೆಗಳನ್ನು ಸಮಗ್ರರಾಗಿ ಬದಲಾವಣೆಗೋಸ್ಕರವೇ ಅವರಿಗೆ ಕೊಟ್ಟಿದೆ. ಅದಕ್ಕಾಗಿ ಪೊಲೀಸರು

ಬಹಳ ವೀಕ್ ಇದ್ದಾರೆ, ಆಶಕ್ತರು ಇದ್ದಾರೆಂದು ಏನು ಹೇಳುತ್ತಿದ್ದೀರಿ - ಪವರ್ ಮತ್ತ ಎಕ್ಸೈಸ್ ಇರುವುದರಿಂದ ಅದಕ್ಕೆ ಸಪೋರ್ಟ್ ಕೊಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಭಗವಂತ ಒಳ್ಳೆಯ ಅವಕಾಶವನ್ನು ಕೊಟ್ಟಿದ್ದಾನೆ. ನೀವು ಮುಖ್ಯಮಂತ್ರಿಯಾಗಬೇಕೆಂದು ಕೇಳಿದವರಲ್ಲ, ಹೋರಾಟ ಮಾಡಿದವರಲ್ಲ. ನಿಮಗೆ ಭಗವಂತ ಅವಕಾಶ ಕೊಟ್ಟಿದ್ದಾನೆ. ನಿಮಗೆ ಆ ಶಕ್ತಿ ಇದೆ. ಮತ್ತು ಹೋರಾಟದ ಹಿನ್ನೆಲೆ ಇದೆ. ಸುಮಾರು 4 ದಶಕಗಳ ಕಾಲ...

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅದ್ಯಕ್ಷರೆ, ಮಾನ್ಯ ವಾಟಾಳರು ಮುಖ್ಯಮಂತ್ರಿಗಳ ಆಗುವುದಕ್ಕೆ ಶ್ರೀ ಜೆ. ಹೆಚ್. ಪಟೇಲರು ಹೋರಾಟ ಮಾಡಿಲ್ಲ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ಹರಿಕೆ ಮಾಡುವುದರಿಂದ ಮಕ್ಕಳಾಗುತ್ತವೆ ಎನ್ನುವ ಹಾಗಿದ್ದರೆ ಯಾರೂ ಲಗ್ನ ಮಾಡಿಕೊಳ್ಳುತ್ತಿರಲಿಲ್ಲ. ಅವರಿಗೆ ಮುಖ್ಯಮಂತ್ರಿಯಾಗಲು ಇಚ್ಛೆ ಇರಲಿಲ್ಲವೆಂದು ಏಕೆ ಹೇಳುತ್ತೀರಿ? ಅವರಿಗೆ ಇಚ್ಛಾಶಕ್ತಿ ಇತ್ತು. ಆಗುವುದಕ್ಕೆ ಅವಕಾಶ ಇತ್ತು, ಆಗಿದ್ದಾರೆ. ಮುಖ್ಯಮಂತ್ರಿಗಳ ಪದವಿ ತಾನಾಗಿಯೇ ಬಂದಿದೆ, ದೇವರು ಕೊಟ್ಟಿದ್ದಾರೆ, ಎಂದು ನೀವು ಹೇಳಿಕೊಳ್ಳುತ್ತಾ ಹೋದರೆ ನಾಳೆ ಯಾರೂ ಲಗ್ನ ಮಾಡಿಕೊಳ್ಳುವುದಿಲ್ಲ. ಶ್ರೀ ರಾಮರೆಡ್ಡಿಯವರು ಬರೀ ದೇವರನ್ನು ಸುತ್ತು ಹಾಕಿದರೆ ಮಕ್ಕಳಾಗಬಹುದು ಬೇರೆಯವರಿಗೂ ಕೂಡ ಅದೇ ಆಗಬಹುದು. ಯಾವುದಕ್ಕೂ ಮನುಷ್ಯನ ಪ್ರಯತ್ನವೂ ಬೇಕು. ಮನಸ್ಸು ಮಾಡದಿದ್ದರೆ ಆಗುವುದಿಲ್ಲ. ಅದಕ್ಕಾಗಿ ಮಾನ್ಯ ಜೆ. ಹೆಚ್. ಪಟೇಲರು ಪ್ರಯತ್ನ ಮಾಡಿ ಮುಖ್ಯಮಂತ್ರಿಗಳಾಗಿದ್ದಾರೆ. ಅದನ್ನು ಬಿಟ್ಟು ಮೇಲಿಂದ ಬಂದಿದೆ, ಎಂದು ನೀವು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ಮಾನ್ಯ ಅಧ್ಯಕ್ಷರು ಇದಕ್ಕೆ ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ.

SRI H. SHIVAPPA : He has not chased the power. Power chased him. That's....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಹಿಂದೆ ಮಾನ್ಯ ಶಾಂತವೇರಿ ಗೋಪಾಲಗೌಡರು ಅಲ್ಪಸಂಖ್ಯಾತರ ಸರ್ಕಾರ ರಚನೆ ಮಾಡಬೇಕೆಂದು ಹೇಳಿ, ನಾವೆಲ್ಲ ಹೋರಾಟ ಮಾಡಿ ಎಲ್ಲರನ್ನು ಕರೆದುಕೊಂಡು ಬಂದು ಅವರನ್ನು ಮುಖ್ಯಮಂತ್ರಿಯಾಗಿ ಮಾಡಬೇಕೆಂದು ಪ್ರಯತ್ನಪಟ್ಟೆವು. ನಿನ್ನನ್ನು ಖಂಡಿತ ಮಂತ್ರಿ ಮಾಡುತ್ತೇನೆಂದು ಗೋಪಾಲಗೌಡರು ನನಗೆ ಆಸೆ ತೋರಿಸಿದರು. ಕೊನೆಗೆ ನನ್ನ ಪರಿಸ್ಥಿತಿ ಏನಾಯಿತು ಎಂದರೆ, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು, ಕೊಣಂದೂರು ಲಿಂಗಪ್ಪನವರು ಹೀಗೆ ಎಲ್ಲಾ ಸ್ನೇಹಿತರು ಲೈನ್ ಆಗಿ ನಿಂತುಬಿಟ್ಟು ಕೊನೆಗೆ ನನಗೆ ಉಪ - ಮಂತ್ರಿ ಸ್ಥಾನ ಕೂಡ ಸಿಗುವ ಪರಿಸ್ಥಿತಿ ಇರಲಿಲ್ಲ. ಅಂದರೆ ಮಂತ್ರಿ ಪದವಿ ನನಗೆ ಬೇಕು ನನಗೆ ಬೇಕು ಎಂದು....

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಕೆಲವರೆಲ್ಲ ಕಾಂಗ್ರೆಸ್ಸಿಗೆ ಸೇರುವುದಕ್ಕೆ ಹೊರಟ್ಟಿದ್ದರು. ಗೊಪಾಲಗೌಡರು ಮುಖ್ಯಮಂತ್ರಿಯಾಗುತ್ತಾರೆಂದು ತಿಳಿದುಕೊಂಡು ಊರೆಲ್ಲ ಓಡಿಬಂದು ಸೇರಬೇಕಾದರೆ ಆ ಪಾರ್ಟಿಯೇ ಕಿತ್ತುಹೋಯಿತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಶಿವಮೊಗ್ಗದಿಂದ ಜನ ಆ ಮುಖ್ಯ ಮಂತ್ರಿಯನ್ನು ನೋಡಬೇಕೆಂದು ಖುಷಿಯಿಂದ ಬಂದರು ಪಟೇಲರು ಪಾಪ ಅವರನ್ನು ಏನಾದರೂ ಮಾಡಿ ಮುಖ್ಯಮಂತ್ರಿ ಮಾಡಬೇಕೆಂದು ಹೇಳಿ ಬಹಳ ಓಡಾಡಿದರು. ಇದೊಂದು ದೊಡ್ಡ ಇತಿಹಾಸ. ಅಲ್ಲಿ 21ನೇ ಕೊಠಡಿಯಲ್ಲಿಯೇ ಇರುತ್ತಿದ್ದರು. ಗೋಪಾಲಗೌಡರು, ಮುಖ್ಯಮಂತ್ರಿಯಾದ ಮೇಲೆ ಏನು ಮಾಡಬೇಕು ಎಂದು ನನ್ನನ್ನು ಕೇಳಿದರು. ಮನೆಯನ್ನು ತೆಗೆದುಕೊಳ್ಳಲಿಕ್ಕೆ ಹೋಗಬೇಡಿ, ಬಹಳಷ್ಟು ದಿವಸ ನೀವು ಉಳಿಯುವುದಿಲ್ಲವೆಂದು ಹೇಳಿದೆ. ಅದಕ್ಕೆ ಅವರು ಹೌದು, ರೂಮನ್ನು ನಾನು ಬಿಟ್ಟು ಹೋಗುವುದಿಲ್ಲ ರೂಮಿನಲ್ಲಿಯೇ ಇರುತ್ತೇನೆಂದು ಹೇಳಿದರು.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಎಷ್ಟು ಜನ ಮಂತ್ರಿಗಳು ಆಗಬೇಕು ಎನ್ನುವುದಕ್ಕೆ ಇವರು ಒಂದು ಸಲಹೆಯನ್ನು ಕೊಟ್ಟರು. ಅದೇನೆಂದರೆ, ಒಟ್ಟು ಲೆಕ್ಕ ಹಾಕಿ ಮೂರನೇ ಎರಡು ಭಾಗವನ್ನು ಮಂತ್ರಿ ಸ್ಥಾನಕ್ಕೆ ಆರಿಸಬೇಕೆಂದು ಹೇಳಿದರು.

2.00 ಪಿ. ಎಂ

ಮಂತ್ರಿಗಳು ಮೂರನೇ ಎರಡು ಭಾಗ, ಸದಸ್ಯರು ಮೂರನೇ ಒಂದು ಭಾಗ. ಏಕೆಂದರೆ ಅವಿಶ್ವಾಸ ನಿರ್ಣಯವನ್ನು ತರುವುದಕ್ಕೆ ಸಾಧ್ಯವೇ ಇರುವುದಿಲ್ಲ. ಮೂರನೇ ಎರಡು ಭಾಗ ಮಂತ್ರಿಯಾದವರಿಗೆ ಏನು ಮಾಡುವುದು ಎಲ್ಲೆಲ್ಲಿ ಲೆಜಿಸ್ಲೇಚರ್ ಹೋಮ್‌ನಲ್ಲಿದ್ದಾರೆ ಅಲ್ಲಿಯೇ ಇರುವುದು,ಕಾರ್ ಬದಲು ಸ್ಕೂಟರ್‌ನೋ ಏನೋ ಕೊಡೋಣ ಸ್ಕೂಟರ್ ಅದೇ ರೂಂನಲ್ಲಿರಬೇಕು. ಇದು ವಾಟಾಳ ನಾಗರಾಜ್‌ರವರ ಸಿದ್ಧಾಂತ

ಶ್ರೀ ವಾಟಾಳ್ ನಾಗರಾಜ್ : ಏನಾಯಿತು ಎಂದರೆ, ಬೇಗ ನಾವು ಅಧಿಕಾರವನ್ನು ಕಳೆದುಕೊಳ್ಳುವುದಕ್ಕೆ ತಯಾರು ಇರಲಿಲ್ಲ. ಬಹು ಮತದವರು ಮಂತ್ರಿಗಳಾಗಿ ಬಿಟ್ಟು ಅಲ್ಪ ಮತದವರು ಶಾಸಕರಾದರೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲವಲ್ಲ, ಅದನ್ನು ಸಹ ಯೋಚನೆ ಮಾಡಿದ್ದೆವು. ಅದರಲ್ಲಿ ಶ್ರೀ ಜೆ. ಹೆಚ್. ಪಟೇಲರು ಎಲ್ಲಾ, ಬಹಳ ಪ್ರಯತ್ನ ಮಾಡಿದರು.

ಅಧ್ಯಕ್ಷರು : ನೀವು ಸಲಹೆಯನ್ನು ಕೊಡುವುದನ್ನು ಅಲ್ಲಿಗೆ ನಿಲ್ಲಿಸಿ ಬಿಟ್ಟರೋ ಅಥವಾ ಈಗಲೂ ಮುಂದುವರೆಸಿದ್ದೀರೋ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಈಗಲೂ ಅವರೇ ಸಲಹೆಯನ್ನು ಕೊಟ್ಟಿರಬಹುದು ಅದಕ್ಕೆ 40 ಮಂದಿ ಮಂತ್ರಿಗಳಾಗಿದ್ದಾರೆ. ಮುಗಿದ ಮೇಲಾದರೂ ಸ್ಪಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಆ ರೀತಿಯಾಗಿ ಸಲಹೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ಇಷ್ಟೆಲ್ಲ ಆಯಿತ್ತಲ್ಲಾ ಇನ್ನೊಂದು ವಿಷಯವನ್ನು ಹೇಳಬೇಕು. ಮಾನ್ಯ ಶ್ರೀ ಹೆಚ್. ಎನ್. ನಂಜೇಗೌಡರು ಈಗ ಸದನದಲ್ಲಿ ಇಲ್ಲ. ಎಲ್ಲಾ ಆಗಿ ಬೆಳಿಗ್ಗೆ ಮಂತ್ರಿ ಮಂಡಲ ರಚನೆಯಾಗುವುದಕ್ಕೆ ತೀರ್ಮಾನ ಆಗಿ ಹೋಯಿತು, ವಾಟಾಳ್ ನಾಗರಾಜ್ ಮಂತ್ರಿಯಾಗುತ್ತಾರೆಂದೂ ಸಹ ತೀರ್ಮಾನವಾಯಿತು. ರಾತ್ರೋ ರಾತ್ರಿ ಶ್ರೀ ಹೆಚ್. ಎಸ್. ನಂಜೇಗೌಡರು 1.00 ಗಂಟೆಗೆ ಬಂದು ನಾವು ವಿರೋಧವನ್ನು ಮಾಡುತ್ತಿದ್ದೇವಪ್ಪ ನಾನಂತೂ

ಬರುವುದಿಲ್ಲ. ನೀನು ಹೇಗಾದರೂ ಮಾಡಿ ಹೋಮ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಬೇಕೆಂದು ಗುಟ್ಟಾಗಿ ಬಂದು ಹೇಳಿದರು. ಆವತ್ತು ಶ್ರೀ ಹೆಚ್. ಎನ್. ನಂಜೇಗೌಡರು ಅರಸ್‌ರವರ ಜೊತೆಯಲ್ಲಿ ಬಹಳ ಪ್ರಮುಖವಾದಂತಹ ಗುಂಪುಗಳನ್ನೆಲ್ಲ ಕಟ್ಟಿ ಅದನ್ನೆಲ್ಲ ನಡೆಸಿರುವುದರ ಇತಿಹಾಸ ತಮಗೆಲ್ಲಾ ಗೊತ್ತಿದೆ. ಯಾರು ಯಾವ ಗಳಿಗೆಯಲ್ಲಿ ಏನಾಗುತ್ತಾರೆಂದು ಕನಸಿನಲ್ಲಿಯೂ ಇಲ್ಲ. ಯಾವ ಗಳಿಗೆಯಲ್ಲಿ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಶ್ರೀ ಹೆಚ್. ಡಿ. ದೇವೇಗೌಡರು ಪ್ರದಾನ ಮಂತ್ರಿಗಳಾಗುತ್ತಾರೆಂದು ಯಾರು ಕಂಡಿದ್ದರು? ನೆಹರು ಅವರು ಪ್ರಧಾನ ಮಂತ್ರಿಯಾಗಿದ್ದ ಜಾಗದಲ್ಲಿ ಇವತ್ತು ದೇವೇಗೌಡರನ್ನು ನೋಡುತ್ತೇವೆ. ಮೌಲಾನಾ ಅಬ್ದುಲ ಕಲಂ ಅಜಾದ್‌ರವರನ್ನು ನೋಡಿದಂಥವರು ಇವತ್ತು ಆ ಸ್ಥಾನದಲ್ಲಿ ಇಬ್ರಾಹಿಂರನ್ನು ನೋಡುತ್ತಿದ್ದೇವೆ. ಯಾರು ಎಲ್ಲಿಗೆ ಎಲ್ಲಿಗೆ ಹೋಗುತ್ತಾರೆಂದು ಯಾರು ಕಂಡಿದ್ದರು. ಅದಕ್ಕೆ ಶಿಶುನಾಳ ಷರೀಫರವರು ಎಂತಹ ಮಾತನ್ನು ಹೇಳಿದ್ದಾರೆಂದರೆ;

> "ಕೋಡಗನ ಕೋಳಿ ನುಂಗಿತ್ತ ನೋಡವ್ವ ತಂಗಿ, ಕೋಡಗನ ಕೋಳಿ ನುಂಗಿತ್ತ, ಆಡು ಆನೆಯ ನುಂಗಿ, ಗೋಡೆ ಸುಣ್ಣವ ನುಂಗಿ, ಹಾಡಲು ಬಂದ ಪಾತಕದವಳ ಮದ್ದಲೆ ನುಂಗುತ್ತಾ, ಹೊಳ್ಳು ಒನಕೆಯ ನುಂಗಿ, ಬೀಸೋ ಕಲ್ಲು ಗೂಟವ ನುಂಗಿ, ಕುಟ್ಟಲು ಬಂದ ಮುದುಕಿಯನ್ನು ನೊಣವ ನುಂಗಿತ್ತಾ ತಂಗಿ, ಹಗ್ಗ ಮಗ್ಗಾವ ನುಂಗಿ, ಮಗ್ಗಾವ ಲಾಲಿ ನುಂಗಿ, ಮಗ್ಗದಾಗಿರುವ ಅಣ್ಣನ ಗುಣಿಯ ನುಂಗಿತ್ತಾ, ಎತ್ತು ಜೆತ್ತಗಿ ನುಂಗಿ, ಭತ್ತ ಜಾನವ ನುಂಗಿ, ಕುಂಟಿ ಒಡೆಯ ಅಣ್ಣನ ಮೇಳಿ ನುಂಗಿತ್ತಾ, ಗುಡ್ಡ ಗುಡ್ಡವ ನುಂಗಿ, ಹೂ ಹಾರೆಯಿರುವ ನುಂಗಿ, ಗುರು ಗೋವಿಂದನ ಪಾದ"

ಎಂಥ ಮಾತನ್ನು ಹೇಳಿ ಬಿಟ್ಟಿದ್ದಾನೆ. ನಾನು ಯಾರನ್ನೂ ಆಕ್ಷೇಪಣೆಯನ್ನು ಮಾಡುವುದಿಲ್ಲ. ಯಾರು ಯಾವ ಗಳಿಗೆಯಲ್ಲಿ ಏನಾಗುತ್ತಾರೋ, ಎಂ. ವಿ. ರಾಮರಾಯರಂತಹ ಗೃಹ ಸಚಿವರನ್ನು ನೋಡಿದೇವು, ರೋಷನ್ ಬೇಗ್‌ರವರನ್ನೂ ನೋಡುತ್ತಿದ್ದೇವೆ ತಪ್ಪು ಏನೂ ಇಲ್ಲ. ಅದರ ಬಗ್ಗೆ ನನ್ನ ವ್ಯಾಕ್ಯಾನವೇ ಇಲ್ಲ. ಇವತ್ತು ಎ. ವಿ. ರಾಮರಾಯರನ್ನು ಈ ಸದನದಲ್ಲಿ ನೆನಪು ಮಾಡಿಕೊಳ್ಳುತ್ತೇನೆ. ನಾನು ವೃತ್ತವನ್ನು ಮಾಡಿದ್ದು ತಮಗೆ ನೆನಪು ಇರಬೇಕು, ತಮ್ಮನ್ನು ಸಹ ಕರೆದುಕೊಂಡು ಹೋಗಿದ್ದೆ. ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಇದೇ ವಿಧಾನಸೌಧದ ಮುಂದೆ ನಡೆದ ಇತಿಹಾಸವನ್ನು ಸ್ವಲ್ಪ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಮಧುಗಿರಿ ಪ್ರಕರಣದ ಪೋಲೀಸ್ ಬಗ್ಗೆ ಭಾಷಣ ಮಾಡಿದ ನಂತರ ಇದೇ ಸದನದಲ್ಲಿ ನಿಂತು ರಾಜೀನಾಮೆಯನ್ನು ಕೊಡುತ್ತೇವೆ, ನಿಮ್ಮ ಮಾತಿಗೆ ನಾನು ಒಪ್ಪಿದ್ದೇನೆ, ಇದಕ್ಕೆ ನನ್ನ ಸಂಪೂರ್ಣ ಹೊಣೆಗಾರಿಕೆ ಇದೆ ಎಂದು ಹೇಳಿದ್ದನ್ನು ನೋಡಿದ್ದೇವೆ. ಸಿದ್ದಲಿಂಗಯ್ಯನವರನ್ನು ನೋಡಿದ್ದೇವೆ. ಹನುಮಂತಯ್ಯನವರ ಬಗ್ಗೆ ಕೇಳಿದ್ದೇವೆ. ಈಗ ಅಂತಹ ಸಾವಿರ ಮಧುಗಿರಿಯ ಪ್ರಕರಣಗಳಾದರೂ ಸಹಿತ ರಾಜೀನಾಮೆಯನ್ನು ಕೊಟ್ಟುಬಿಡುತ್ತಾರೆಯೇ? ಅಷ್ಟು ಸುಲಭವೇ? ಅವರು ಒಪ್ಪುತ್ತಾರೆಯೇ? ಅದು ಆಗುವುದಿಲ್ಲ ಅದಕ್ಕೆ ಮಾನ್ಯ ಶಿಶುನಾಳ ಷರೀಫರು ಎಂತಹ ಕಾವ್ಯವನ್ನು ಬರೆದಿದ್ದಾರೆ. ಕಾಲ

ಬದಲಾವಣೆಗಳಾಗುತ್ತವೆ. ಆದ್ದರಿಂದ ಇದರ ಬಗ್ಗೆ ನಾನು ಚಿಂತನೆಯನ್ನು ಮಾಡಬೇಕಾಗಿಲ್ಲ. ಮೊನ್ನೆ ಪಶುಸಂಗೋಪನಾ ಇಲಾಖೆಯಲ್ಲಿ....

ಅಧ್ಯಕ್ಷರು : ಅಪರೂಪಕ್ಕೆ ಹೆಣ್ಣು ಮಕ್ಕಳೆಲ್ಲಾ ಹಸಿವು ಊಟಕ್ಕೆ ಹೋಗಬೇಕೆಂದರು. ತಾವು ಭಾಷಣವನ್ನು ಮುಗಿಸಿಬಿಟ್ಟರೆ ಕ್ಲೋಸ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು ಬೇಗ ಮುಗಿಸುತ್ತೇನೆ. ನಾನು ನಿಮ್ಮಲ್ಲಿ ಮತ್ತು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿಯನ್ನು ಮಾಡುವುದೇನೆಂದರೆ....

ಅಧ್ಯಕ್ಷರು : ನಾನು ಹೆಣ್ಣು ಮಕ್ಕಳ ವಿಚಾರವಾಗಿ ಹೇಳಿದ್ದುದು, ಮಾನ್ಯ ಲಿಲಾದೇವಿ. ಆರ್. ಪ್ರಸಾದ್‌ರವರು ಏಕೆ ಎದ್ದು ನಿಂತಿದ್ದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅಧ್ಯಕ್ಷರಿಗೆ ಇವೊತ್ತು ನಮ್ಮ ಬಗ್ಗೆ ಬಹಳ ಗೌರವ ಬಂದುಬಿಟ್ಟಿದೆ.

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಬಹಳ ಸಾರಿ ಗಂಡು ಮಕ್ಕಳ ಬಗ್ಗೆ ಬಹಳ ಪ್ರೀತಿ, ಒಂದೊಂದು ಸಾರಿ ನಿಮ್ಮಗಳ ಬಗ್ಗೆ ಪ್ರೀತಿ ಬರುತ್ತದೆ. ನಿಮ್ಮಗಳನ್ನೆಲ್ಲ ನೋಡಿ ಅವರಿಗೆ ಪ್ರೀತಿ ಬಂದಿರಬಹುದು, ನಾವು ಏನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀಮತಿ ಬಿ. ಟಿ. ಲಲಿತಾನಾಯಕ್ : ಅಧ್ಯಕ್ಷರಿಗೆ ಹೆಣ್ಣುಮಕ್ಕಳ ಬಗ್ಗೆ ಹೆಚ್ಚು ಪ್ರೀತಿ ಇದೆ, ಕರುಣೆ ಇದೆ. ಅವರಷ್ಟು ಮಾನವೀಯತೆ ಬೇರೆಯವರಲ್ಲಿ ನಾನು ಕಂಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ಇಲ್ಲವೇ? ನಮ್ಮ ಶ್ರೀ ಜೆ. ಹೆಚ್. ಪಟೇಲ್‌ರಿಗೆ ಇಲ್ಲವೇ? ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲರಿಂಗಿಂತಲೂ ಹೆಚ್ಚಾಗಿರುವುದು ಅವರಿಗೇನೇ. ಅದರ ಬಗ್ಗೆ ಯಾರದೂ ತಕರಾರು ಇಲ್ಲ.

ಅಧ್ಯಕ್ಷರು : ತಕರಾರು ಇದೆ, ಹೇಳುವುದಕ್ಕೆ ಧೈರ್ಯವಿಲ್ಲ. ಅವರು ಹೇಳುತ್ತಾರೆ ಬೇರೆಯವರು ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದು ಸತ್ಯ ನಾನು ಅದನ್ನು ಒಪ್ಪಿದೆ. ಪ್ರಾಮಾಣಿಕತೆಯಿಂದ ಅವರು ಏನು ಹೇಳುತ್ತಾರೆ ಅದನ್ನು ಬಹಳ ಜನ ಅಪಾರ್ಥ ಮಾಡಿಕೊಂಡು ಬಿಟ್ಟಿದ್ದಾರೆ. ಅನೇಕ ಸಾರಿ ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಚಾರದಲ್ಲಿ ವಸ್ತು ಸ್ಥಿತಿ ಪ್ರಮಾಣಿಕವನ್ನು ಇದು ತೆರೆದ ಪುಸ್ತಕವೆಂದು ತೆರೆದು ಇಡುತ್ತಾರೆ. ಕೆಲವರು ಅದನ್ನು ಅಪಾರ್ಥ ಮಾಡಿಕೊಂಡು ಸಮಾಜಕ್ಕೆ ಅಗೌರವ, ಸಮಾಜಕ್ಕೆ ಅನ್ಯಾಯ ನೀವು ಮಾಡಿರತಕ್ಕಂತಹ ಭಾಷಣ ಎಂದು ಎಲ್ಲಾ ಮಾಡುತ್ತಾರೆ. ನಾನು ಅದನ್ನು ಒಪ್ಪುವುದಿಲ್ಲ. ಮಡಿವಂತಿಕೆ ಜನ ಕೆಲವರು ಇದ್ದಾರೆ. ವರ್ಷವೆಲ್ಲ ಗಂಭೀರವಾಗಿ ಪುರೋಹಿತ ಮಾಡುವುದು, ಕದ್ದು ಹೋಗಿ ಮಾಂಸವನ್ನು ತಿನ್ನುವುದು ಇದೆಲ್ಲ ಇರುತ್ತದೆಯಲ್ಲಾ ಇದು ಆಗಬಾರದು, ಆ ರೀತಿಯ ಬಾವನೆ ಅವರಲ್ಲಿ ಇಲ್ಲ ಅದನ್ನು ನಾನು ಒಪ್ಪುತ್ತೇನೆ. ಒಂದು ಕಾರ್ಯಕ್ರಮ ಜೀ ಟಿ. ವಿ. ಯಲ್ಲಿ ಬಂತು...

ಶ್ರೀ ಜೆ. ಹೆಚ್. ಪಟೇಲ್ : ನನಗೆ ಅಲಹಾಬಾದ್ ಹೈಕೋರ್ಟ್‌ನಿಂದ ಒಂದು ನೋಟೀಸ್ ಬಂದಿದೆ. ಬೇರೆಯವರು ಹೋಗಿ ಅಪಿಯರ್ ಆಗುತ್ತಾರೆ. ಚಾರ್ಜ್ ಏನೆಂದರೆ ಸದಾಚಾರ, ವ್ಯಭಿಚಾರ, ಅತ್ಯಾಚಾರ. ಅದು ರಾಮನಿಗೆ ಸದಾಚಾರಿ ಎಂದು ಹೇಳುತ್ತಾರೆ. ಕೃಷ್ಣನಿಗೆ ವ್ಯಭಿಚಾರಿ ಎನ್ನುತ್ತಾರೆ, ರಾವಣನಿಗೆ ಬಲಾತ್ಕಾರಿ ಎಂದು ಹೇಳುತ್ತಾರೆ ಎಂದು ಅದು ಸಾಹಿತ್ಯದಲ್ಲಿ ಬಂದಿರುವುದನ್ನು ನಾನು ಹೇಳಿದ್ದುದು. ಕೃಷ್ಣನಿಗೆ ವ್ಯಭಿಚಾರಿ ಎಂದು ಹೇಳಿದ ಎಂದು ಅಲಹಾಬಾದ್ ಹೈಕೋರ್ಟ್‌ನಲ್ಲಿ ನನ್ನ ಮೇಲೆ ಕೇಸ್ ಹಾಕಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅದು ತಪ್ಪು ಕಲ್ಪನೆ, ಕೆಲವರು ಕೃಷ್ಣನಿಗೆ ಬೈದರು, ರಾಮನಿಗೆ ಬೈದರು ಎನ್ನುತ್ತಾರೆ. ಅದೆಲ್ಲ ಮಾತಿನ ಗಾಂಭೀರ್ಯ ಮತ್ತು ಅದರ ಹಿಂದಿನ ಅರ್ಥವನ್ನು ಬಹಳ ಜನರು ಅರ್ಥ ಮಾಡಿಕೊಳ್ಳುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ನಿರ್ಮಲವಾದಂತಹ ಹೃದಯ, ಪ್ರಾಮಾಣಿಕತೆ ಇದೆ, ಅವರ ಬಗ್ಗೆ ಭಾರೀ ಹಗರಣಗಳು ಯಾವುವೂ ಆಗಿಲ್ಲ. ನಾನು ಹೇಳುವುದೇನೆಂದರೆ, ನೀವು ನಿಮ್ಮ ಆಡಳಿತವನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಿದೆ. ನಿಮ್ಮ ಏಳು ತಿಂಗಳ ಆಡಳಿತದಲ್ಲಿ ಚುರುಕಾಗಿ ಹೋಗುತ್ತಿಲ್ಲ. ತಾವು ತಪ್ಪು ತಿಳಿದುಕೊಳ್ಳಬೇಡಿ. ಆಡಳಿತ ಚುರುಕಾಗಬೇಕು. ನೀವು ಏನು ಮಾಡುತ್ತಿದ್ದೀರಿ ಎಂದು ಜನಕ್ಕೆ ಗೊತ್ತಾಗಬೇಕು. ಅದು ಆಗುತ್ತಿಲ್ಲ. ನೀವು ಏನು ತಿಳಿದುಕೊಂಡಿದ್ದೀರಿ ಎಂದರೆ ಎಲ್ಲಾ ಮಂತ್ರಿಗಳಿಗೂ ಸ್ವತಂತ್ರವನ್ನು ಕೊಟ್ಟು ಬಿಟ್ಟಿರುತ್ತೇನೆ ಆದುದರಿಂದ ರಾಜ್ಯದಲ್ಲಿ ಎಲ್ಲಾ ನಡೆದುಹೋಗುತ್ತದೆಂದು ಒಂದು ದಿವಸ ದರ್ಬಾರ್ ಮಾಡಿದಾಗ ಮಂತ್ರಿ ಏನಾಯಿತು ಎಂದಾಗ ಎಲ್ಲರೂ ಬಂದು ವರದಿಯನ್ನು ಒಪ್ಪಿಸುತ್ತಾರಲ್ಲಿ ಹಾಗೆ ಆಗಬಾರದು. ತಾವೇ ಕಣ್ಣಿನ ಮೇಲೆ ಕಣ್ಣಿಟ್ಟು ಇಡೀ ಸಮಗ್ರ ಇಲಾಖೆಗಳ ಆಡಳಿತ ಎಲ್ಲವನ್ನು ನೋಡಿ, 20 ಜಿಲ್ಲೆಗಳ ಎಲ್ಲಾ ಆಡಳಿತವನ್ನೂ ನೋಡಿ. ತಾವೇನೂ ಪೂರ್ವಾಗ್ರಹ ಪೀಡಿತರಲ್ಲ ಮತ್ತು ಪಿತೂರಿಯನ್ನು ಮಾಡತಕ್ಕಂಥವರು ಅಲ್ಲ, ರಾಜಕಾರಣ ಇಲ್ಲ. ಆದುದರಿಂದ ತಾವು ಯಾರಿಗೆ ಹೆದರಬೇಕು? ಪ್ರದಾನ ಮಂತ್ರಿಗಳಾದ ಶ್ರೀ ಹೆಚ್. ಡಿ. ದೇವೇಗೌಡರು ಪರಾಶಕ್ತಿ ಇದ್ದ ಹಾಗೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಲೋಕ ಶಕ್ತಿ, ನೀವು ಆದಿ ಶಕ್ತಿ; ಈ ರಾಜ್ಯ ನಿಶಕ್ತಿ

ಅಧ್ಯಕ್ಷರು : ದುಷ್ಟ ಶಕ್ತಿ ಯಾರು?

ಶ್ರೀ ವಾಟಾಳ್ ನಾಗರಾಜ್ : ದುಷ್ಟ ಶಕ್ತಿ ಇನ್ನು ಬಂದಿಲ್ಲ, ಆದಕ್ಕೆ ಆದಿಶಕ್ತಿಗೆ ಬಹಳ ಬಲ. ಆದಿಶಕ್ತಿಗೆ ಪರಾಶಕ್ತಿ ಹೆದರಬೇಕು. ಲೋಕಶಕ್ತಿ ಹೆದರಬೇಕು. ಆ ತಂತ್ರಗಾರಿಕೆ ಆ ಶಕ್ತಿ ಅವರಿಗಿದೆ. ಇವರನ್ನು ಬಿಟ್ಟು ಆ ಶಕ್ತಿಗಳು ಏನೂ ಮಾಡುವ ಹಾಗಿಲ್ಲ. ಆದುದರಿಂದ ಇವರಿಗೆ ಬಹಳ ಅತ್ಯಂತ ಹೆಚ್ಚಿನ ಶಕ್ತಿ ಇದೆ. ಈ ರಾಜ್ಯವನ್ನು ಒಳ್ಳೆಯ ದಿಕ್ಕಿಗೆ ತೆಗೆದುಕೊಂಡು ಹೋಗತಕ್ಕಂತಹ ಶಕ್ತಿ ಇದೆ.

ಒಬ್ಬ ಮಾನ್ಯ ಸದಸ್ಯರು : ಆದಿಶಕ್ತಿ, ಲೋಕಶಕ್ತಿ ಎರಡೂ ಒಟ್ಟಾಗಬೇಕು. ಆಗ ಪರಾಶಕ್ತಿಯನ್ನು ಎದುರಿಸಬಹುದು ಎನ್ನುವುದು ನಿಮ್ಮ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್ : ಹಾಗಾಗುವುದಿಲ್ಲ. ಇದೇ ಕರೆಕ್ಟ್. ಪರಾಶಕ್ತಿ ಅವರು; ಲೋಕಶಕ್ತಿ ಅವರು; ಆದಿಶಕ್ತಿ ಇವರು. ಆದರೆ ನಮ್ಮ ಶಕ್ತಿ ನಿಶ್ಯಕ್ತಿಯಾಗಿದೆ. ಕರ್ನಾಟಕ ನಿಶ್ಯಕ್ತಿಯಾಗಿದೆ. ಇದಕ್ಕೆ ಶಕ್ತಿ ತುಂಬಬೇಕಾದರೆ ತಾವು ಹೆಚ್ಚಿನ ರೀತಿಯಲ್ಲಿ.....

ಶ್ರೀ ಸಿ. ಆರ್. ಸಗೀರ್ ಅಹಮದ್ : ಕಾಂಗ್ರೆಸ್ಸಿನವರು ಸಪೋರ್ಟ್ ವಾಪಸ್ ತೆಗೆದುಕೊಳ್ಳಬೇಕೇ?

ಶ್ರೀ ವಾಟಾಳ್ ನಾಗರಾಜ್ : ಅದು ಕಾಂಗ್ರೆಸ್ಸಿನವರ, ನಿಮ್ಮ ಹಣೆಬರಹ. ಸಪೋರ್ಟ್ ವಾಪಸ್ ಕೊಳ್ಳುತ್ತೀರೋ ಬಿಡುತ್ತೀರೋ. ಇದ್ಯಾಕೆ ಎಂದು ನನಗೆ ಅರ್ಥವಾಗುವುದಿಲ್ಲ. ಅಲ್ಲಿ ದೆಹಲಿಯಲ್ಲಿ ವಾಪಸ್ ತೆಗೆದುಕೊಳ್ಳಬೇಕು ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಇಲ್ಲಿ ಏತಕ್ಕೆ ಇವರು ಸೇರಿಕೊಳ್ಳಬಾರದು? ಒಟ್ಟಾಗಿ ಸೇರಿಕೊಂಡು ಇಲ್ಲೂ ಸಂಯುಕ್ತ ರಂಗ ಆಗಲಿ, ನೋಡೋಣ. ಇಲ್ಲೂ ಒಂದು ತರಹ ನೋಡೋಣ.

ಶ್ರೀ ಯು. ಆರ್. ಸಭಾಪತಿ : ನೀವೂ ಬರುವುದಾದರೆ ಪರ್ವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಬರುವುದು ಬಿಡಿ, ಅದು ಬೇರೆ. ನೀವೆಲ್ಲಾ ಹೋಗುವುದಾದರೆ ನಾನೂ ಬಂದೇಬಿಡುತ್ತೇನೆ. ನಡೀರಪ್ಪ ಹೋಗೋಣ. ಒಂದು ತೀರ್ಮಾನ ಆಗಿಬಿಡಲಿ. ಪಟೇಲರ ನಾಯಕತ್ವದಲ್ಲಿ ಬರುತ್ತೇನೆ ಎಂದರೆ ಎಲ್ಲರೂ ಹೋಗೋಣ. ಬನ್ನಿ ಮತ್ತೆ ಹೋಗೋಣ. ನೀವು ಅದಕ್ಕೆ ತಯಾರಾಗಿಲ್ಲವೇ. ತಯಾರಾಗಿದ್ದರೆ ಅವರೂ ಸಿದ್ಧರಾಗುತ್ತಾರೆ. ಸಿದ್ಧ ಮಾಡೋಣ. ಅಧ್ಯಕ್ಷರು ಮಧ್ಯಸ್ತಿಕೆ ವಹಿಸಲಿ. ಹೋಗಲಿ ಚಿಂತೆ ಇಲ್ಲ, ನಾನು ಬರುತ್ತೇನೆ. ಬರುತ್ತೀರೇನ್ರಪ್ಪ? ಸುಮ್ಮನೆ ಬಡಿದುಕೊಳ್ಳುತ್ತೀರಿ. ಅಲ್ಲಿ ವಿತ್ಡ್ರಾ ಮಾಡಿಕೊಳ್ಳಿ, ಹಿಂತೆಗೆದುಕೊಳ್ಳಿ ಹಿಂತೆಗೆದುಕೊಳ್ಳಿ ಎಂದು ಅಲ್ಲಿ ಕೂಗಿಕೊಳ್ಳುತ್ತಾ ಇದ್ದೀರಿ. ಇಲ್ಲಿ ಜೊತೆಯಲ್ಲಿ ಇಲ್ಲ. ಅಲ್ಲಿ ಹಿಂದಕ್ಕೆ ಹೋಗುತ್ತೀರಿ. ನನಗೆ ಖರ್ಗೆಯವರ ಬಗ್ಗೆ ಬಹಳ....

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಅವರು ಪಶುಸಂಗೋಪನೆ ಬಿಟ್ಟು ಕಾಂಗ್ರೆಸ್ಸಿಗೆ ಏತಕ್ಕೆ ಬಂದರು? ಈ ಕಡೆ ಏತಕ್ಕೆ ಹೋಗುತ್ತಿದ್ದೀರಿ? ಪಶುಸಂಗೋಪನೆ ಇಲಾಖೆ ಬಗ್ಗೆ ಪ್ರಸ್ತಾಪ ಮಾಡಿ ಇಲ್ಲಿಗೆ ಬಂದರು.

ಅಧ್ಯಕ್ಷರು : ನೀವು ಪಶುಸಂಗೋಪನೆ ಬಗ್ಗೆ ಪ್ರಸ್ತಾಪ ಮಾಡಿ ಸೀದಾ ಕಾಂಗ್ರೆಸ್ ಕಡೆ ತಿರುಗಿದಿರಿ. ನಿಮ್ಮ ಅಭಿಪ್ರಾಯ ಏನು?

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಇಲ್ಲ. ಖರ್ಗೆಯವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರಿಗೆ ಗೊತ್ತಿದೆ. ಇದನ್ನು ಏತಕ್ಕೆ ನಾನು ಹೇಳುತ್ತೇನೆಂದರೆ ಇದು ಖರ್ಗೆಯವರ ಹೇಳಿಕೇನೆ. ಖರ್ಗೆಯವರ ಹೇಳಿಕೆಯನ್ನೇ ನಾನು ಹೇಳಿದ್ದುದು. ಪಶುಸಂಗೋಪನೆಗೆ ಆಮೇಲೆ ಬರೋಣ. ಆದಕ್ಕೇನಿಲ್ಲ. ಇಲ್ಲಿ ಎಲ್ಲರೂ ಒಂದು ರೀತಿ ಪಶು ಇದ್ದ ಹಾಗೆ ಇದ್ದೇವೆ. ಈ ವ್ಯವಸ್ಥೆ ಪಶುಸಂಗೋಪನೆ ಮಾಡಿದೆ. ಪಶುಸಂಗೋಪನೆ ಬಗ್ಗೆ ಹೇಳುವುದಾದರೆ, ಮೈಸೂರಿನಲ್ಲಿ ಒಂದು ಸಂದರ್ಶನ ಕರೆದರು. ಸಂದರ್ಶನ ಕರೆದುಬಿಟ್ಟು ಸರಿಯಾಗಿ ಪಶುಸಂಗೋಪನೆ ಬಗ್ಗೆ ಮಾತನಾಡುವುದನ್ನು ಬಿಟ್ಟು ಯಾವಯಾವುದೋ ಪ್ರಶ್ನೆಗಳನ್ನು ಕೇಳಿ ಸುಮಾರು ಮೂರು ಸಾವಿರ

ಜನರನ್ನು ಕರೆದು ಅವರನ್ನು ಹೊರಗೆ ಹಾಕಿ ತಮಗೆ ಇಚ್ಛೆ ಬಂದವರನ್ನೆಲ್ಲಾ ಅಲ್ಲಿ ನೇಮಕ ಮಾಡಿಕೊಂಡರು ಎನ್ನತಕ್ಕಂಥದ್ದು ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಒಂದು ವರದಿ. ಆ ದೃಷ್ಟಿಯಿಂದ ಅದನ್ನು ಸ್ಪಷ್ಟವಾಗಿ ತಮಗೆ ಹೇಳುತ್ತಾ ಇದ್ದೇನೆ, ಇವತ್ತು ಈ ಕರ್ನಾಟಕ ರಾಜ್ಯದಲ್ಲಿ ಜನ ಅನೇಕ ನಿರೀಕ್ಷಣೆಗಳನ್ನು ಮಾಡಿದ್ದಾರೆ. ಸಾಮಾನ್ಯ ಜನರು ನಿರೀಕ್ಷಣೆ ಮಾಡಿದ್ದಾರೆ. ನಾಗರೀಕರು ನಿರೀಕ್ಷಣೆ ಮಾಡಿದ್ದಾರೆ. ಆ ನಿರೀಕ್ಷೆ ಹುಸಿಯಾಗದಂತೆ ನಡೆದುಕೊಳ್ಳಬೇಕು. ತಾವು ತಿಪ್ಪಗೊಂಡನಹಳ್ಳಿಯಲ್ಲಿ ಒಂದು ತೀರ್ಮಾನ ತೆಗೆದುಕೊಂಡಿರಿ. ಅನೇಕ ಸಚಿವರನ್ನೆಲ್ಲಾ ಕರೆದು ಒಂದು ಹೊಸ ಕಾಯಕಲ್ಪ ಕೊಡುತ್ತೇನೆ ಎಂದು ಹೇಳಿದಿರಿ. ಅಲ್ಲಿಂದಾಚೆಗೆ ಏನೂ ಆಗಲಿಲ್ಲ. ನೀವು ಮತ್ತೊಂದು ಹೇಳಿದ್ದೀರಿ, ಹುಬ್ಬಳ್ಳಿಯಲ್ಲಿ 15 ಜನ ಮಂತ್ರಿಗಳನ್ನು ತೆಗೆಯುತ್ತೇವೆ, ಹೊಸ ಮಂತ್ರಿಗಳನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಸಂತೋಷ. ಅದು ಯಾರನ್ನು ತೆಗೆಯುತ್ತೀರಿ? ಯಾರನ್ನು ಮಾಡುತ್ತೀರಿ? ಇದೆಲ್ಲಾ ಒಳ್ಳೆಯದೆ. ತಾವು ಯಾರು ಯಾರನ್ನು ತೆಗೆಯುತ್ತೀರೋ ನಮಗಂತೂ ಗೊತ್ತಿಲ್ಲ. ಅದು ಯಾರನ್ನು ತೆಗೆಯುತ್ತೀರೋ ತೆಗೆದುಕೊಳ್ಳಿ. ನಮ್ಮದೇನೂ ಅಭ್ಯಂತರ ಇಲ್ಲ. ಆದರೆ ಸ್ಪಷ್ಟವಾಗಿ ಒಂದು ಒಳ್ಳೆಯ ಆಡಳಿತ ಕೊಡಿ. ಮುಂದೆ ಒಂದೇ ತಿಂಗಳಿರಲಿ. ಇವತ್ತು ಏತಕ್ಕೆ ನಾವು ಹನುಮಂತಯ್ಯನವರ ಹೆಸರು ಹೇಳುತ್ತೇವೆ? ಹನುಮಂತಯ್ಯನವರ ಹೆಸರನ್ನು ನಾವು ಏತಕ್ಕೆ ಹೇಳುತ್ತೇವೆ ಅಂದರೆ ಅವರ ಆಡಳಿತದಿಂದ. ಆ ಶಕ್ತಿಯುತವಾದ ಆಡಳಿತವನ್ನು ನಡೆಸಿ ವಿಧಾನಸೌಧದ ಹೊರಗಡೆ "ಸರ್ಕಾರದ ಕೆಲಸ ದೇವರ ಕೆಲಸ" ಎಂದು ಅವರು ಹಾಕಿಸಬೇಕಾದರೆ ಆ ಶಕ್ತಿ ಹನುಮಂತಯ್ಯನವರಿಗೆ ಇತ್ತು. ಆ ಶಕ್ತಿಯ ಪ್ರತೀಕರಾಗಿ ಅವರು ಮಾಡಿದ್ದಾರೆ. ಆ ರೀತಿ ತಮಗೊಂದು ಅವಕಾಶ ಇದೆ. ನಾನು ನಿಮಗೆ ಹೇಳುತ್ತಾ ಇದ್ದೇನೆ. ಈ ಅವಕಾಶವನ್ನು ಕಳೆದುಕೊಳ್ಳದೆ ಕರ್ನಾಟಕ ರಾಜ್ಯದಲ್ಲಿ ಒಳ್ಳೆಯ ಹೆಸರನ್ನು ತೆಗೆಯತಕ್ಕ ಶಕ್ತಿ ನಿಮಗೆ ಬರಲಿ. ಅನೇಕ ಜನರಿಗೆ ಪಟೇಲರ ಆಡಳಿತ ಬಿಗಿ ಬರುತ್ತಿಲ್ಲ, ಸರಿಯಾಗಿ ಆಗುತ್ತಿಲ್ಲ ಎಂಬ ಭಾವನೆ ಇದೆ. ನಿಮಗೆ ಸುತ್ತ ಯಾರಾದರೂ ಕೆಲವರು ಹೊಗಳಬಹುದು "ಬಿಡಿ ಸ್ವಾಮಿ, ನೀವು ಅಂದರೆ ಏನು ಸ್ವಾಮಿ, ನಿಮ್ಮ ರಾಜ್ಯ ಎಂದರೆ ಏನು ಸ್ವಾಮಿ, ಅಲ್ಲಿ ಹಾಗಾಗಿದೆ ಎಂದು ಹೇಳಬಹುದು". ಅದಕ್ಕೆ ನೀವು ಕಿವಿ ಕೊಡಬೇಡಿ. ಸ್ಪಷ್ಟವಾಗಿ ನಿಲ್ಲಿ. ಈ ರಾಜ್ಯದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ನೀವು ಕೆಲಸ ಮಾಡಬೇಕಾಗಿದೆ. ಈ ಆಯವ್ಯಯ ಅಧಿವೇಶನದೊಳಗಾಗಿ ಉತ್ತಮವಾದ ಆಯವ್ಯಯವನ್ನು ಮಂಡಿಸಿ. ಸಾಮಾನ್ಯ ಜನರಿಗೆ, ಬಡವರಿಗೆ, ಹಿಂದುಳಿದ ವರ್ಗದವರಿಗೆ, ಈ ರಾಜ್ಯದ ಜನತೆಗೆ ಉತ್ತಮವಾದಂಥ ಆಡಳಿತವನ್ನು ಕೊಡತಕ್ಕಂಥ ಶಕ್ತಿ ನಿಮಗಿದೆ. ಆ ಕೆಲಸ ತಾವು ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿದೆ. ಸರಿಯಾಗಿ ಮೂರು ಗಂಟೆಗೆ ದಯಮಾಡಿ ಎಲ್ಲರೂ ಬಂದುಬಿಡಿ. ಸಮಯ ಬಹಳ ಕಡಿಮೆ ಇದೆ. ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ. ಸಭೆ ಪುನಃ 3-00 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸಭೆಯನ್ನು 2 ಗಂಟೆ 15 ನಿಮಿಷಕ್ಕೆ ಮುಂದೂಡಿ ಮತ್ತೆ 3-00 ಗಂಟೆಗೆ ಸೇರುವಂತೆ ತೀರ್ಮಾನಿಸಲಾಯಿತು.)

(ಸಭೆಯು ಪುನಃ 3-20ಕ್ಕೆ ಪ್ರಾರಂಭಗೊಂಡಿತು. ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

4 ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆ.

+ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರು ವಿಧಾನಮಂಡಳದಲ್ಲಿ ಮಾಡಿದಂಥ ಭಾಷಣದ ವಿಚಾರವಾಗಿ ಈ ಸದನದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಸಾಕಷ್ಟು ವಿಚಾರಗಳನ್ನು ಸರ್ಕಾರ ಹೇಳಿಸಿದೆ. ಆದರೆ ಸಾಮಾನ್ಯ ಜನತೆಯ ದೃಷ್ಟಿಯಲ್ಲಿ ಕರ್ನಾಟಕದಲ್ಲಿ ಸರ್ಕಾರ ಇದೆಯೇ ಎನ್ನುವ ಒಂದು ಅನುಮಾನ ಬರುವ ರೀತಿಯಲ್ಲಿ ಇವತ್ತು ಈ ರಾಜ್ಯದಲ್ಲಿ ವ್ಯವಹಾರ ನಡೆಯುತ್ತಿದೆ ಎಂದು ಅತ್ಯಂತ ಬೇಸರದಿಂದ ಹೇಳಬೇಕಾಗುತ್ತದೆ. ಮಹಾತ್ಮಾಗಾಂಧೀಜಿಯವರು ಅವರ ಎದುರಿನಲ್ಲಿ ಯಾವತ್ತೂ ಒಂದು ಪ್ರತಿಮೆಯನ್ನು ಇಟ್ಟುಕೊಳ್ಳುತ್ತಿದ್ದರಂತೆ. ಆ ಪ್ರತಿಮೆ ಕಣ್ಣು, ಬಾಯಿ, ಕಿವಿ ಮುಚ್ಚಿಕೊಂಡಿರುತ್ತಿತ್ತು. ಅದರ ಅರ್ಥವೇನೆಂದರೆ ಕೆಟ್ಟದ್ದನ್ನು ಹೇಳುವುದಿಲ್ಲ, ಕೆಟ್ಟದ್ದನ್ನು ನೋಡುವುದಿಲ್ಲ, ಕೆಟ್ಟದ್ದನ್ನು ಕೇಳುವುದಿಲ್ಲ ಎನ್ನುವ ಗುರುತಿಗೋಸ್ಕರ ಆ ಪ್ರತಿಮೆಯನ್ನು ಇಟ್ಟುಕೊಳ್ಳುತ್ತಿದ್ದರು ಎಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ನಮ್ಮ ಸರ್ಕಾರ ಕೂಡ ಅದೇ ರೀತಿ ಪ್ರತಿಮೆಯನ್ನು ಇಟ್ಟುಕೊಂಡಿದೆ. ಆದರೆ ಸ್ವಲ್ಪ ವ್ಯತ್ಯಾಸ ಮಾಡಿಕೊಂಡಿದೆ. ಅದೇನೆಂದರೆ, ಒಳ್ಳೆಯದನ್ನು ಮಾಡುವುದಿಲ್ಲ, ಒಳ್ಳೆಯದನ್ನು ನೋಡುವುದಿಲ್ಲ, ಒಳ್ಳೆಯದನ್ನು ಕೇಳುವುದಿಲ್ಲ. ಮಾತ್ರವಲ್ಲ, ಏನೂ ಮಾಡುವುದಿಲ್ಲ ಎಂದು ಹೇಳಿ ಕೈ ಕೂಡ ಕಟ್ಟಿಕುಳಿತಿರುವ ರೀತಿಯಲ್ಲಿ ಇವತ್ತು ನಮ್ಮ ರಾಜ್ಯದಲ್ಲಿ ಸರ್ಕಾರ ನಡೆಯುತ್ತಿದೆ ಎಂದು ಹೇಳಿದರೆ ಬಹುಶಃ ಅವರು ಕೂಡ ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಕೇಳುವುದಕ್ಕೆ ಕೇವಲ ಮಂತ್ರಿಗಳೇ ಇದ್ದಾರೆ, ಚಿಂತೆ ಇಲ್ಲ. ಇದನ್ನು ಕೇಳಬೇಕಾದವರು ಮಂತ್ರಿಗಳೇ. ಬೇರೆಯವರು ಕೇಳುವುದರಿಂದ ಏನೇನೂ ಪ್ರಯೋಜನವಾಗುವುದಿಲ್ಲ. ಸನ್ಮಾನ್ಯ ನಾಗೇಗೌಡರು ಮತ್ತು ನಾನು ವಿರೋಧ ಪಕ್ಷದಲ್ಲಿದ್ದು ಮೇಲ್ಮನೆಯಲ್ಲಿ ಬಹಳ ವರ್ಷ ಕೆಲಸ ಮಾಡಿದ್ದೇವೆ. ನಾಗೇಗೌಡರೇ ನನಗೆ ಹೆಚ್ಚು ಕಡಿಮೆ ಗುರುಗಳು ಎಂದು ಹೇಳಿದರೂ ತಪ್ಪಾಗಲಾರದು. ನನಗೆ ಮಾತು ಕಲಿಸಿದವರೇ ನಾಗೇಗೌಡರು. ಅಂದಮೇಲೆ ಈ ರೀತಿಯಲ್ಲಿ ಕೆಲಸ ಮಾಡುತ್ತಿರುವ ಈ ಸರ್ಕಾರ ಏನೊ ಒಂದು ರೀತಿಯಲ್ಲಿ ಪುಸ್ತಕವನ್ನು ಅಚ್ಚು ಮಾಡಿಸಿ ಜನತೆಯ ಮುಂದೆ ಹೋಗುವ ರೀತಿಯಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ಮುದ್ರಿಸಿ ಕೊಟ್ಟಿದ್ದಾರೆ. ಒಂದು ವಿಚಾರದ ಬಗ್ಗೆ ನಾವು ಇಲ್ಲಿ ಯೋಚನೆ ಮಾಡಬೇಕಾಗುತ್ತದೆ. ಸ್ವಲ್ಪ ಹಿಂದೆ ಹೋಗಿ ನಾವು ಯೋಚನೆ ಮಾಡುವುದಾದರೆ ಜನತಾ ಪಕ್ಷ ಎಂದು ಹೇಳಿ ಆಡಳಿತ ಮಾಡುತ್ತಿರುವಂಥ ಆ ಕಾಲದಲ್ಲಿ ಸುಮಾರು 134 ಸದಸ್ಯರನ್ನು ಹೊಂದಿತ್ತು. ಇವತ್ತು ವಿರೋಧ ಪಕ್ಷವಾಗಿ ಮಾನ್ಯತೆ ಪಡೆದಿರುವ ಪಕ್ಷ ಅವತ್ತು ಕೇವಲ 34ರ ಸಂಖ್ಯೆಯಲ್ಲಿ ಇಲ್ಲಿ ಕುಳಿತಿತ್ತು. ಆ ಸಂದರ್ಭದಲ್ಲಿ ಸನ್ಮಾನ್ಯ ವೀರೇಂದ್ರಪಾಟೀಲರು ಆ ಪಕ್ಷದ ನಾಯಕತ್ವವನ್ನು ವಹಿಸಿಕೊಂಡು ಜನತೆಯ ಮುಂಚೆ ಚುನಾವಣೆಗೆ ಹೋದಾಗ ಒಂದು ಮಾತನ್ನು ಹೇಳಿದರು. ನಾವು ಒಂದು ಬಾರಿ ತಪ್ಪು ಮಾಡಿದ್ದೇವೆ. ಅದಕ್ಕೆ ನೀವು ಎರಡು ಬಾರಿ ಶಿಕ್ಷೆ ಕೊಟ್ಟಿದ್ದೀರಿ, ಈ ಸಾರಿ ಹಾಗೆ ಮಾಡಬೇಡಿ ಎಂದು ಹೇಳಿದರು, ನಮ್ಮನ್ನು ಪುನಃ ನೀವು

ಆರಿಸಿ ಕಳುಹಿಸಿದ್ದೇ ಆದರೆ ಈ ರಾಜ್ಯದ ಅಭಿವೃದ್ಧಿ ಕಡೆ ಹೆಚ್ಚಿನ ಗಮನ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿ ಊರೂರಿನಲ್ಲಿ ಸುತ್ತಿ ಅತ್ಯಧಿಕ ಬಹುಮತದಲ್ಲಿ ಬಂದರು. ಬಹುಶಃ 180 ಕ್ಕೂ ಮಿಗಿಲಾಗಿರುವ ಸ್ಥಾನಗಳು ಬಹುಶಃ ಇನ್ನು ಮುಂದೆ ವಿಧಾನಸೌಧದಲ್ಲಿ ಬರುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅಷ್ಟೊಂದು ದೊಡ್ಡ ಬಹುಮತ ಬಂತು ಅದೇ ಸ್ಥಾನ ಇವರೇನು 24 ವಿರೋಧ ಪಕ್ಷ ಏನು ಮಾನ್ಯತೆ ಪಡೆದಿತ್ತು, ಅದು 135 ರಲ್ಲಿ ಇದ್ದ ಜಾಗದಲ್ಲಿ 34ಕ್ಕೆ ಬಂದು ಇಲ್ಲಿ ಕುಳಿತುಕೊಂಡರು. ನಂತರ ಇವರು ಚುನಾವಣೆಗೆ ಹೊರಟರು. ಇವರು ಚುನಾವಣೆಗೆ ಹೊರಟಾಗ ಒಂದು ಮಾತನ್ನು ಹೇಳಿದರು. ಏನು ಜನತಾ ಪಕ್ಷ ಆಡಳಿತ ಮಾಡುತ್ತಿದ್ದಂಥ ಸಂದರ್ಭದಲ್ಲಿ ಕಾಂಗ್ರೆಸ್‌ನವರು ಮಾಡುತ್ತಿದ್ದರು, ಅದನ್ನು ಕಂಡು ಬೇಸತ್ತಿದ್ದಂಥ ಜನ ಇವರು ಚುನಾವಣೆಗೆ ಹೋದಾಗ ಮೂರು ಜನ ನಾಯಕರು ಕೈಯಿಂದ ಕೈಯನ್ನು ಹಿಡಿದುಕೊಂಡು ಮತ್ತೆ ಜನರ ಹತ್ತಿರ ಹೋದರು. ನಾವೆಲ್ಲರೂ ಒಂದಾಗಿದ್ದೇವೆ, ನಾವು ಜಗಳ ಮಾಡುವುದಿಲ್ಲ, ಏನೊ ತಪ್ಪುಮಾಡಿಬಿಟ್ಟಿದ್ದೇವೆ, ಕ್ಷಮಿಸಿ, ಇನ್ನು ಇಂಥ ತಪ್ಪು ಮಾಡುವುದಿಲ್ಲ, ನಮಗೆ ಶಿಕ್ಷೆ ಕೊಟ್ಟಿದ್ದು ಸಾಕು, ಮತ್ತೆ ನಮ್ಮನ್ನು ಆರಿಸಿ, ನಾವೇನೋ ಮಾಡುತ್ತೇವೆ ಎಂದು ಹೇಳಿ ಜನರ ಹತ್ತಿರ ಹೋದಾಗ ಈ ರಾಜ್ಯದ ಜನರು ಮಾತಿಗೆ ಮರುಳಾಗಿ ಪುನಃ ಅಧಿಕಾರವನ್ನು ಕೊಟ್ಟರು ಕೊಡುವಾಗ ಬುದ್ಧಿವಂತಿಕೆಯಿಂದ ಕೊಟ್ಟರು. ಅತ್ಯಂತ ಅಧಿಕ ಬಹುಮತ ಕೊಟ್ಟರೂ ಕಷ್ಟ. ಭಾರಿ ಕಡಿಮೆ ಕೊಟ್ಟರೂ ಕಷ್ಟ. ಅಧಿಕಾರ ಇರಬೇಕು, ಹೋಗಬೇಕು. ಪ್ರತಿನಿತ್ಯ ಯೋಚನೆ ಮಾಡುವ ಪರಿಸ್ಥಿತಿಯಲ್ಲಿ ಅಧಿಕಾರವನ್ನು ತಂದುಕೊಟ್ಟು ಯಾವ ಪಕ್ಷಕ್ಕೆ ಅತ್ಯಂತ ಅಧಿಕ ಬಹುಮತವನ್ನು ಆರಿಸಿ ಕೊಟ್ಟು ಕಳುಹಿಸಿಕೊಟ್ಟರೋ ಅವರ ಒಳಜಗಳ ಮತ್ತು ಅವರ ವ್ಯವಹಾರಗಳನ್ನು ನೋಡಿ ಬೇಸತ್ತ ಜನ ಮತ್ತೆ 34 ಕ್ಕೆ ಇವರನ್ನು ವಾಪಸ್ ಕಳುಹಿಸಿದರು. ಇವತ್ತು ಪರಿಸ್ಥಿತಿ ಏನಾಗಿದೆ ಎಂದು ಹೇಳುವಾಗ ನನಗೊಂದು ವಿಚಾರ ಈ ಸಂದರ್ಭದಲ್ಲಿ ನೆನಪು ಬರುತ್ತದೆ. ನಮ್ಮೂರಿನಲ್ಲಿ ಒಬ್ಬರು ಯಜಮಾನರು ಇದ್ದರು. ಅವರಿಗೆ ಬೀಡಿ ಸೇದುವ ಚಟ. ಅವರು ಪಕ್ಕದ ಯಾವುದೋ ಒಂದು ಗ್ರಾಮಕ್ಕೆ ಅರ್ಜೆಂಟ್ ಆಗಿ ಹೋಗಬೇಕಿತ್ತು. ಹೋಗುತ್ತಿದ್ದರು. ಸುಮಾರು ಹತ್ತು ಕಿಲೋ ಮೀಟರ್ ಹೋಗಬೇಕು. 5 ಕಿಲೋ ಮೀಟರ್ ನಡೆದಿದ್ದಾರೆ. 5 ಕಿಲೋ ಮೀಟರ್ ನಡೆಯುವಾಗ ಅವರಿಗೆ ಬೀಡಿ ಯೋಚನೆ ಬಂತು. ಜೇಬಿನಿಂದ ಬೀಡಿ ತೆಗೆದು ಬಾಯಿಗಿಟ್ಟರು. ಈ ಕಡೆ ಬೆಂಕಿಪೆಟ್ಟಿಗೆ ತೆಗೆದು ಬೆಂಕಿ ಹಚ್ಚಿದರು. ಬೀಡಿ ಹತ್ತಲಿಲ್ಲ. ಏಕೆ ಹೀಗೆ ಆಗುತ್ತಿದೆ ಎಂದು ನೋಡಿದಾಗ ಎದುರುಗಡೆಯಿಂದ ಗಾಳಿ ಬರುತ್ತಿತ್ತು. ಅವರಿಗೆ ಅರ್ಥವಾಯಿತು, ಎದುರುಗಡೆ ಗಾಳಿ ಇದೆ, ಈ ಗಾಳಿ ಇರುವುದರಿಂದ ಬೆಂಕಿ ಆರಿಹೋಗುತ್ತದೆ. ನನ್ನ ಬೀಡಿ ಹತ್ತುವುದಿಲ್ಲ ಎಂದು ಹೇಳಿ ತಿರುಗಿ ನಿಂತುಕೊಂಡರು. ಮತ್ತೆ ಬೀಡಿಯನ್ನು ಹಚ್ಚಿದರು, ಬೀಡಿ ಹತ್ತಿಕೊಂಡಿತು. ಅವರಿಗೆ ಆ ಬೀಡಿ ಹತ್ತಿದ ಸಂತೋಷದಿಂದ ಸರಿಯಾದ ದಂ ಎಳೆದು ಮತ್ತೆ ಹೊರಟರು. ಹೋಗಿ ಹೋಗಿ ನೋಡುತ್ತಾರೆ ಮತ್ತೆ ಐದು ಕಿಲೊಮೀಟರ್ ಹೋಗಿ ನೋಡುವಾಗ ಪುನಃ ಹೊರಟ ಜಾಗಕ್ಕೆ ಬಂದು ನಿಂತಿದ್ದಾರೆ. ಇವತ್ತು ಇವರ ಪರಿಸ್ಥಿತಿ ಬಹುಶಃ ಹಾಗೆ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಪುನಃ 24ಕ್ಕೇ ಬಂದು ನಿಲ್ಲುವಂತಹ ರೀತಿಯಲ್ಲಿ ಇವರ ರಾಜ್ಯಭಾರದ ವೈಖರಿ ನೋಡಿದಾಗ ನನಗೆ ಅನಿಸುತ್ತದೆ. ಮಾನ್ಯ ಜೆ. ಹೆಚ್. ಪಟೇಲ್ ಅವರು ಈ ರಾಜ್ಯದ ಚುಕ್ಕಾಣಿಯನ್ನು ಹಿಡಿದಾಗ ನಾವು ಏನೇನೋ ಕನಸುಗಳನ್ನು ಕಂಡೆವು. ವಿರೋಧ ಪಕ್ಷದಲ್ಲಿದ್ದರೂ ಕೂಡ ನಮ್ಮ ಚಿಂತೆ ಒಂದೇ.

ರಾಜ್ಯದಲ್ಲಿ ಆಗಬೇಕಾದಂತಹ ಕೆಲಸ ಬಾಕಿ ಇದೆ. ಸಾಕಷ್ಟು ಕಾಲ, ಏಕೆಂದರೆ ದಕ್ಷಿಣ ಭಾರತ ಎಂದರೆ ಭಾರಿ ದಿವಸಗಳ ಕಾಲ, ದಕ್ಷಿಣ ಎಂದರೆ ಮದ್ರಾಸ್ ಎಂದು. ಕರ್ನಾಟಕವನ್ನು ಕೇಳುವವರೇ ಇಲ್ಲ, ಹಾಗಾಗಿ ಹಿಂದುಳಿಯುವಂತಹ ಈ ರಾಜ್ಯದಲ್ಲಿ ಅತ್ಯಂತ ಅಭಿವೃದ್ಧಿ ಮಾಡತಕ್ಕ ಕೆಲಸ ಆಗಬಹುದು. ಅದಕ್ಕೆ ತಕ್ಕಂತೆ ಈ ರಾಜ್ಯದವರೇ ಇವತ್ತು ರಾಷ್ಟ್ರದಲ್ಲಿ ಪ್ರಧಾನ ಮಂತ್ರಿಯಾಗಿದ್ದಾರೆ. ಇವೆಲ್ಲಾ ಅನುಕೂಲಗಳನ್ನು ಉಪಯೋಗಿಸಿ ಕೊಳ್ಳುತ್ತಾರೆ. ಚಿಂತೆ ಇಲ್ಲ, ಈ ರಾಜ್ಯಕ್ಕೆ ಹೊರೆ ಆದರೂ ಚಿಂತೆ ಇಲ್ಲ. 45 ಜನ ಮಂತ್ರಿಗಳನ್ನು ಮಾಡಿಕೊಂಡಿದ್ದಾರೆ. ಕೆಲಸ ಆಗಬಹುದು, ಕೆಲಸ ಆದರೆ ಪರವಾಗಿಲ್ಲ ಎನ್ನುವ ಭಾವನೆಯಲ್ಲಿ ಇದ್ದಾಗ 45 ಜನ ಮಂತ್ರಿಗಳಲ್ಲಿ ಕೂಡ ಒಗ್ಗಟ್ಟನ್ನು ಕಾಣದಂತಹ ಪರಿಸ್ಥಿತಿ ಇದೆ. 45 ಅಲ್ಲದಿದ್ದರೆ ಇನ್ನೂ 55 ಮಾಡಿಕೊಂಡರೂ ಚಿಂತೆ ಇಲ್ಲ. ನೀವು ಕೆಲಸ ಮಾಡುವುದಾದರೆ ಇನ್ನೂ 10 ಜನ ಮಂತ್ರಿಗಳನ್ನು ಮಾಡಿ, ಚಿಂತೆ ಇಲ್ಲ. ಈ ಮಟ್ಟಕ್ಕೆ ರಾಜ್ಯ ಪರಿಸ್ಥಿತಿಯನ್ನು ತಂದು ನಿಲ್ಲಿಸಿ ಇವತ್ತು ಪ್ರತಿಯೊಬ್ಬರ ಕಿಸೆಗೆ ಕೈ ಹಾಕುವಂತಹ ಪ್ರಯತ್ನ ಮಾಡುತ್ತಿದ್ದದೀರಿ. ಅದೂ ಇದೂ ಎಂದು ಇಲ್ಲ. ಪ್ರತಿಯೊಬ್ಬರ ಕಿಸೆಗೆ ಕೈ ಹಾಕುವಂತಹ ಒಂದು ವ್ಯವಸ್ಥೆಯನ್ನು ಮಾಡುತ್ತಿದ್ದೀರಿ. ಅದರ ಮಧ್ಯ ನನಗೆ ಇವತ್ತು ಅನುಮಾನ ಬರಲಿಕ್ಕೆ ಪ್ರಾರಂಭ ಆಗಿದೆ. ಈ ರಾಜ್ಯದಲ್ಲಿ ಅಧಿಕಾರ ಮಾಡುತ್ತಿರುವವರು ಯಾರು? ಇದು ಸ್ವಲ್ಪ ಯೋಚನೆ ಮಾಡಬೇಕಾದ ಪರಿಸ್ಥಿತಿ. ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಅಧಿಕಾರ ಮಾಡುತ್ತಿದ್ದಾರೋ? ಮಂತ್ರಿಗಳು ಅಧಿಕಾರ ಮಾಡುತ್ತಿದ್ದಾರೋ? ಈ ರಾಷ್ಟ್ರದ ಪ್ರಧಾನ ಮಂತ್ರಿಗಳು ಇಲ್ಲಿ ಅಧಿಕಾರ ಮಾಡುತ್ತಿದ್ದಾರೋ? ಇದು ಒಂದು ಸಮಸ್ಯೆ ಈ ಸಮಸ್ಯ ಕೇವಲ ಈ ಜನಕ್ಕೆ ಮಾತ್ರವಲ್ಲ, ಈ ರಾಜ್ಯದ ಜನತೆಗೆ ಮಾತ್ರವಲ್ಲ. ಈ ರಾಜ್ಯದಲ್ಲಿ ಕೆಲಸ ಮಾಡುತ್ತಿರುವಂತಹ ಪ್ರತಿಯೊಬ್ಬರಿಗೂ ಇದರ ಬಗ್ಗೆ ಚಿಂತೆ ಇದೆ. ಯಾರು ಇಲ್ಲಿ ಅಧಿಕಾರ ಮಾಡುತ್ತಿದ್ದಾರೆ ಎಂದು ಇವತ್ತು ಅವರ ಪಕ್ಷದ ರಾಜ್ಯದ ಅಧ್ಯಕ್ಷರಾಗಿದ್ದಾರೆ. ಅವರು ಹಿಂದೆ ಭಾಷಣ ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಒಂದು ಮಾತು ಹೇಳುತ್ತಿದ್ದರು. ಅನೇಕರು ಅದನ್ನು ಕೇಳಿರಬಹುದು. ನಾವು ಕೂಡ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಇವತ್ತು ಆ ಮಾತು ನನಗೆ ಯೋಚನೆ ಬರುತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಂತಹ ಕಾಲದಲ್ಲಿ ದೆಹಲಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಸೀರೆಯ ಸೆರಗು ಪರ್ ಎಂದರೆ ನಮ್ಮ ರಾಜ್ಯದ ಮುಖ್ಯಮಂತ್ರಿ ಶ್ರೀ ದೇವರಾಜ್ ಅರಸ್ ಅವರ ಜುಬ್ಬ ಪರ್ ಎನ್ನುತ್ತದೆ ಎನ್ನುತ್ತಿದ್ದರು. ಇವತ್ತು ನನ್ನ ಅಂದಾಜು ಅದೇ ಪರಿಸ್ಥಿತಿ ಇದೆ. ದೆಹಲಿಯಲ್ಲಿ ನಮ್ಮ ಗೌಡರ ಪಂಚೆ ಪಟ ಪಟ ಎಂದರೆ ಇಲ್ಲಿ ನಮ್ಮ ಮುಖ್ಯಮಂತ್ರಿ ಜೆ. ಹೆಚ್. ಪಟೇಲರ ಎದೆ ಢಬ ಢಬ ಎನ್ನುತ್ತದೆ. ಈ ಪರಿಸ್ಥಿತಿಯಲ್ಲಿ ಇವತ್ತು ರಾಜ್ಯದ ರಾಜ್ಯಭಾರ ಹೋಗುತ್ತಿದೆ. ಇದನ್ನು ಯಾವ ದಿಕ್ಕಿನಲ್ಲಿ ತಾವು ತೆಗೆದುಕೊಂಡು ಹೋಗಿ ನಿಲ್ಲಿಸುತ್ತೀರೋ ನನಗೆ ಗೊತ್ತಿಲ್ಲ. ತಮ್ಮ ರಾಜ್ಯಪಾಲರ ಭಾಷಣದಲ್ಲಿ ತೋರಿಸಿದ್ದೀರಿ. ಗ್ರಾಮೀಣ ರಸ್ತೆ, ಗೃಹ ನಿರ್ಮಾಣ, ಕುಡಿಯುವ ನೀರು ಇತ್ಯಾದಿ. ಒಂದು ಮಾತನ್ನು ನಾನು ಕೇಳಲಿಕ್ಕೆ ಇಚ್ಛಿಪಡುತ್ತೇನೆ. ಗ್ರಾಮೀಣ ರಸ್ತೆ, ಕುಡಿಯುವ ನೀರು, ಗೃಹ ನಿರ್ಮಾಣ, ಇದರ ಬಗ್ಗೆ ಸಾಕಷ್ಟು ಚರ್ಚೆ ನಾವು ನೋಡಿದ್ದೇವೆ. ನಾವೆಲ್ಲರೂ ನಮ್ಮ ಆತ್ಮ ಶೋಧನೆ ಮಾಡಿ ನೋಡಿಕೊಳ್ಳೋಣ. ಯಾವುದೇ ಒಂದು ಗ್ರಾಮಕ್ಕೆ ಹೋದಾಗ ನನಗೆ ರಸ್ತೆ ಆಗಿದೆ, ನನಗೆ ಕುಡಿಯುವ ನೀರಿನ ವ್ಯವಸ್ಥೆ ಆಗಿದೆ, ನಮ್ಮ ಊರು ಸಮೃದ್ಧಿಯಿಂದ ಇದೆ. ನಾವು ನೆಮ್ಮದಿಯಿಂದ ಇದ್ದೇವೆ; ನಾವು ನಮ್ಮ ನಮ್ಮ ಯೋಗ್ಯತಾನುಸಾರವಾಗಿ ಜೀವನ ನಡೆಸುತ್ತಿರಬಹುದು. ಆದರೆ

ನಮ್ಮ ಊರು ನೆಮ್ಮದಿಯಿಂದ ಇದೆ. ನಮಗೆ ಅವಶ್ಯಕತೆ ಇದೆ ಎಂದರೆ ನಡೆದುಕೊಂಡು ಹೋಗಲು ಒಳ್ಳೆಯ ರಸ್ತೆ ಇದೆ. ಬೇಕು ಎಂದರೆ ಕುಡಿಯುವುದಕ್ಕೆ ನೀರು ಇದೆ. ನಮ್ಮ ಊರಿಗೆ ಬಸ್ಸುಗಳು ಸರಿಯಾಗಿ ಬರುತ್ತಿವೆ, ಹೋಗುತ್ತೇವೆ - ಎನ್ನುವ ಒಂದೇ ಒಂದು ಗ್ರಾಮ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾರಾದರೂ ತೋರಿಸುವುದು ಇದ್ದರೆ ಅದು ಈ ಪ್ರಪಂಚದ ಒಂದು ಅದ್ಭುತವಾದ ಸಂಗತಿಯಲ್ಲಿ ಅದೊಂದು ಸಂಗತಿ ಆಗುತ್ತದೆ. ಬರೇ ಇವೆಲ್ಲಾ ದಾಖಲಾತಿಗಳಲ್ಲಿ ಉಳಿದು ಹೋಗಿವೆ. ಯಾವುದೂ ಕೂಡ ಆಗಲಿಲ್ಲ. ಬಹುಶಃ ಅತಿ ಅವಶ್ಯಕವಾಗಿರುವಂತಹ ಈ ಸಣ್ಣ ಕೆಲಸ ಸ್ವಾತಂತ್ರ್ಯ ಬಂದ 50 ವರ್ಷಗಳ ಈ ನಮ್ಮ ನಾಡಿನಲ್ಲಿ ಆಗಿಲ್ಲ. ಪ್ರತಿ ಊರಿಗೆ ಒಂದು ರಸ್ತೆ, ಆ ಊರಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಮನೆ ಇಲ್ಲದವರಿಗೆ ಒಂದು ಮನೆ ನಾವು ಕಟ್ಟಿಸಿಕೊಟ್ಟಿದ್ದೇ ಆಗಿದ್ದರೆ ಈ ದೇಶದ ಜನ ಯಾವುದೇ ಸಂದರ್ಭದಲ್ಲಿ ಪಕ್ಷದಿಂದ ಪಕ್ಷವನ್ನು ಬದಲಾಯಿಸತಕ್ಕ ಅಥವಾ ಅಧಿಕಾರವನ್ನು ಬದಲಾಯಿಸತಕ್ಕ ವ್ಯವಸ್ಥೆಗೆ ಕೈ ಹಾಕುತ್ತಲೇ ಇರಲಿಲ್ಲ. ಅಷ್ಟು ಮುಗ್ಧ ಜನರು ಇದ್ದಾರೆ. ನೀವು ಹೇಳಿದ್ದನ್ನೆಲ್ಲಾ ಕೇಳಿ ಓಟು ಕೊಡತಕ್ಕಂತಹ ಜನ ನೀವು ಉತ್ತಮವಾದಂತಹ ಕೆಲಸವನ್ನು ಮಾಡಿದ್ದರೆ ಖಂಡಿತವಾಗಿ ಬದಲಾಯಿಸುತ್ತಿರಲಿಲ್ಲ. ಚುನಾವಣೆ ಸಂದರ್ಭದಲ್ಲಿ ನೀವು ಏನೂ ಮಾಡಬೇಕಾಗಿರಲಿಲ್ಲ. ಬಹುಶಃ ದುಡ್ಡು ಹೆಂಡ ಕೊಟ್ಟು ಓಟು ತೆಗೆಯತಕ್ಕಂಥ ಮನೆ ಮನೆ ಸುತ್ತಬೇಕಾದಂತಹ ಅವಕಾಶ ಇರಲಿಲ್ಲ. ದುಡ್ಡು, ಹೆಂಡ ಎನ್ನುವಾಗ ನನಗೆ ಯೋಚನೆ ಬರುತ್ತದೆ. ಅದಕ್ಕೆ ಇತಿ ಮಿತಿ ಇಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರು ಮಾತನಾಡುತ್ತಾ ಹೇಳುತ್ತಿದ್ದರು, ಯಾರಿಗೆ ಎಷ್ಟು ಶಕ್ತಿ ಇದೆಯೋ ಅಷ್ಟು, ಅವರ ಶಕ್ತಾನುಸಾರವಾಗಿ ಎಂದು. ಇವತ್ತು ನಿಮಗೆ ಶಾಸಕರಾಗಲಿಕ್ಕೆ ಎಲ್ಲಾ ಯೋಗ್ಯತೆ ಇದೆ ಆದರೆ ದುಡ್ಡು ಇಲ್ಲ ಎಂದು ಹೇಳಿದರೆ ಅವನಪ್ಪನ ಆಣೆ ಇದರೊಳಗೆ ಬರಲು ಆಗುವುದಿಲ್ಲ. ದುಡ್ಡು ಇದೆ ಎಂದರೆ ಅವನು ಯಾರೇ ಇರಲಿ, ಅವನಿಗೆ ಯೋಗ್ಯತೆ ಇರಲಿ ಅಥವಾ ಇಲ್ಲದಿರಲಿ, ಈ ಸದನದೊಳಗೆ ಬರಬಹುದು ಎನ್ನುವಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡಿಬಿಟ್ಟಿರಿ. ನೀವು ಏನಾದರೂ ಹೇಳಿಕೊಳ್ಳಿ.

ಶ್ರೀ ಹೆಚ್. ಶಿವಪ್ಪ : ಇದು ಮತದಾರರಿಗೆ ಅಪಮಾನ ಮಾಡಿದ ಹಾಗೆ.

ಶ್ರೀ ಬಿ. ಬಿ. ಶಿವಪ್ಪ : ಮತದಾರರಿಗೆ ಅಪಮಾನ ಮಾಡಿದ ಹಾಗೆ ಎಂದು ಇವರು ಹೇಳುತ್ತಿದ್ದಾರೆ. ನಾನು ಮತದಾರರನ್ನು ಕೈ ಬಿಟ್ಟು ಬಿಡುತ್ತೇನೆ. ನಾನು ಒಂದೆರಡು ಮೂರು ಚುನಾವಣೆಗಳನ್ನು ನೋಡಿದ್ದೇನೆ. ಇತ್ತೀಚಿಗೆ ನಡೆದ ರಾಮನಗರ ಚುನಾವಣೆ ವಿಚಾರ ಹೇಳುತ್ತೇನೆ. ಚುನಾವಣೆಯಲ್ಲಿ ಗೆಲ್ಲುವುದು ಸೋಲುವುದು ಪ್ರಶ್ನೆ ಅಲ್ಲ, ಎಲ್ಲರೂ ಗೆಲ್ಲುವುದಿಲ್ಲ, ಆದರೆ ಚುನಾವಣೆಯಲ್ಲಿ ಒಬ್ಬರು ಮಹಿಳೆ ಹೇಳಿದ ಮಾತುಗಳನ್ನು ಕೇಳಿದರೆ ಬಹುಶಃ ಮಾನ್ಯ ಶಿವಪ್ಪನವರೂ ಸರೆಂಡರ್ ಆಗುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ಒಬ್ಬ ಮಹಿಳೆ ಹೇಳಿದಂತಹ ಮಾತನ್ನು ನಾನು ಈ ಸದನದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾವು ಈ ಸಾರಿ ಜನತಾ ದಳಕ್ಕೆ ಮತ ಕೊಡುವುದಿಲ್ಲ. ಏಕಮ್ಮಾ ಈ ರೀತಿ ಹೇಳುತ್ತಿದ್ದೀರಿ, ಇದು ಮಾನ್ಯ ಪ್ರಧಾನ ಮಂತ್ರಿಗಳು ಆರಿಸಿ ಹೋಗಿರತಕ್ಕಂಥ ಜಾಗ. ಇಲ್ಲಿ ಗೆದ್ದೇ ಗೆಲ್ಲುತ್ತೇವೆ ಎಂಬ ತಿರ್ಮಾನ ಇದೆ. ಅವರ ಪುತ್ರರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ನೀವು ಈ ಮಾತನ್ನು ಹೇಳಿದರೆ ನನಗೆ ಆಶ್ಚರ್ಯ ಆಗುತ್ತದೆ. ಏನೇ ಮಾಡಿ, ಗೆಲ್ಲುವುದಂತೂ ಶತಃಸಿದ್ಧ ಎಂದು ಹೇಳಿದಾಗ ಆ ಹೆಣ್ಣು ಮಗು

ಒಂದು ಮಾತು ಹೇಳಿತು. ದಯಮಾಡಿ ಎಲ್ಲರೂ ಅದರ ಬಗ್ಗೆ ಚಿಂತೆ ಮಾಡಬೇಕಾಗುತ್ತದೆ. ನೋಡಿರಿ, ನಮ್ಮ ಮನೆಯಲ್ಲಿ ಮಕ್ಕಳು ಮರಿಗೆಲ್ಲಾ ಕುಡಿಯುವುದಕ್ಕೆ ಕಲಿಸಿದ್ದಾರೆ. ಇವರ ಹತ್ತಿರ ದುಡ್ಡು ಇರಬಹುದು, ಆಸ್ತಿ ಇರಬಹುದು, ಅಧಿಕಾರ ಇರಬಹುದು. ಆದರೆ ನಮ್ಮ ಮನೆ ಮಂದಿಗೆಲ್ಲಾ ಕುಡಿಯುವುದನ್ನು ಕಲಿಸಿದರು. ಸಣ್ಣ ಸಣ್ಣ ಮಕ್ಕಳಿಗೂ ಇವತ್ತು ಕುಡಿಯುವುದನ್ನು ಕಲಿಸಿದ್ದಾರೆ. ಅಂತಹವರಿಗೆ ಓಟು ಕೊಡಬೇಕೇ, ಕೊಡುವುದಿಲ್ಲ ಎಂದು ತಿಳಿಸಿದಳು. ಇವತ್ತು ಲೆಕ್ಕ ಹಾಕಿಕೊಳ್ಳಿ. ಮಾನ್ಯ ಶಿವಪ್ಪನವರು ಏನು ಹೇಳುತ್ತಾರೋ ಗೊತ್ತಿಲ್ಲ. ಈ ರೀತಿ ಒಬ್ಬ ಹೆಣ್ಣು ಮಗಳು ಹೇಳಿದಳು. ಇವತ್ತು ನಾನು ಕಣ್ಣಾರೆ ಕಂಡಿದ್ದೇನೆ. ಮಾನ್ಯ ನಾಣಯ್ಯನವರು ನಗುತ್ತಿದ್ದಾರೆ. ಬರೀ ಮಕ್ಕಳು ಮರಿಗೆ ಕಲಿಸಲಿಲ್ಲ. ಮಾನ್ಯ ನಾಗಮಾರಪಲ್ಲಿಯವರು ನಗುತ್ತಾರೆ. ಅಲ್ಲಿದ್ದ ನಾಯಿನರಿಗಳೆಲ್ಲಾ ಕುಡಿಯುವುದಕ್ಕೆ ಕಲಿತು ಬಿಟ್ಟಿವೆ. ಚುನಾವಣೆ ಆದ ನಂತರ ಕುಡಿದೂ ಕುಡಿದೂ ವಾಂತಿ ಮಾಡಿದರಲ್ಲ, ಅದನ್ನು ಹಳ್ಳಿ ನಾಯಿಗಳು ತಿಂದವಲ್ಲ ಅವು ಒಂದು ವಾರ ನೆಟ್ಟಗೆ ನಡೆಯಲಿಲ್ಲ, ತೂರಾಡಿಕೊಂಡೇ ನಡೆಯುತ್ತಿದ್ದವು. ಕಾರಣ ಅಷ್ಟು ಲಿಮಿಟ್ ಇರಲಿಲ್ಲ. ಯಾರಿಗೆ ತಾವು ಕುಡಿಸುವುದು? ನಾನು ಒಬ್ಬ ಶಾಸಕನಾಗುವುದಕ್ಕೋಸ್ಕರ ನನ್ನ ಬಂಧು, ನನ್ನ ಮತಸ್ಥ, ನನ್ನ ಕುಲಸ್ಥ ಅವನಿಗೆ ಕುಡಿಯುವುದನ್ನು ಕಲಿಸಿ ಇವತ್ತು ನಾನು ಇಲ್ಲಿಗೆ ಶಾಸಕನಾಗಿ ಬರಬೇಕೇ? ಅವನನ್ನು ಇಲ್ಲದ ಕೆಟ್ಟ ವ್ಯವಹಾರವನ್ನು ಎಳೆದು ನಾನು ಇಲ್ಲಿಗೆ ಶಾಸಕನಾಗಿ ಬರಬೇಕೇನು? ಅದು ಏನು ಶಾಸಕತನ? ಕಷ್ಟಪಟ್ಟರೆ ಐದು ವರ್ಷ ಶಾಸಕನಾಗಿ ಅಥವಾ ದೇವರು ನಿಮ್ಮ ಹಣೆ ಮೇಲೆ ಬರೆದಿದ್ದರೆ ಮತ್ತೆ ಐದು ವರ್ಷ ಬರಬಹುದು. ಶಾಸಕನಾದ ಮಾರನೆಯ ದಿವಸದಿಂದ ಐದು ವರ್ಷದವರೆಗೆ ಒಂದು ನಿಗದಿತ ಸಮಯ. ಆ ಸಮಯದಲ್ಲಿ ಯಾವತ್ತಾದರೂ ನಾವು ಹೋಗುತ್ತೇವೆ.

ಶ್ರೀ ಎಂ. ಸಿ. ನಾಣಯ್ಯ : ಚುನಾವಣೆಯಲ್ಲಿ ಆಗುತ್ತಿರತಕ್ಕಂಥ ಪ್ರಕ್ರಿಯೆಗಳನ್ನು ನಾವು ನೋಡುತ್ತಾ ಬಂದಿದ್ದೇವೆ. ಅಂದರೆ ಇವರು ನೇರವಾಗಿ ರಾಮನಗರಕ್ಕೆ ಸಂಬಂಧಪಟ್ಟಹಾಗೆ ನಮ್ಮ ಮೇಲೆ ಅಪಾದನೆ ಮಾಡುತ್ತಾರೆ. ಅದರಲ್ಲಿಯೂ ನಮ್ಮ ಪಕ್ಷದ ಮೇಲೆ ಅಪಾದನೆ ಮಾಡುತ್ತಾರೆ. ಆ ಅಪಾದನೆಯನ್ನು ನಾವು ನಿರಾಕರಿಸುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ : ಚುನಾವಣೆಯ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ : ನೀವು ಎಂದರೆ ಯಾರು? ಹೆಂಡ ಕುಡಿಯುವುದನ್ನು ಕಲಿಸಿಕೊಟ್ಟಿರಿ, ಜನತಾ ದಳಕ್ಕೆ ಓಟು ಕೊಡುವುದಿಲ್ಲ. ಇದರ ಅರ್ಥ ಏನು? ಜನತಾದಳದವರು ಹೆಂಡ ಕೊಟ್ಟರು ಎಂದು ತಾನೇ ನಿಮ್ಮ ಆಪಾದನೆ ಆಯಿತು, ನೀವು ಆಪಾದನೆ ಮಾಡುತ್ತೀರಿ. ಅಂದರೆ ನೀವೆಲ್ಲಾ ಬಹಳ ಸಂಪನ್ನರೆ? ಹೇಳುತ್ತೇನೆ ಕೇಳಿ. ಈ ರಾಜ್ಯದ, ಈ ರಾಷ್ಟ್ರದ ಚುನಾವಣಾ ವ್ಯವಸ್ಥೆಯಲ್ಲಿ ಬಿಜೆಪಿಯವರು ಬಹಳ ಸಂಪನ್ನರಾ? ಇವರ ಚುನಾವಣೆಯಲ್ಲಿ ಹೆಂಡ, ಹಣ, ಧರ್ಮ, ದೇವರುಗಳನ್ನು ಬೀದಿಗೆ ತಂದಿರತಕ್ಕದ್ದು. ಇವೆಲ್ಲಾ ಚುನಾವಣೆಯ ವ್ಯವಸ್ಥೆಯೋ? ರಾಜ್ಯಾಂಗ ಬದ್ಧವಾಗಿ ಬಂದಿರತಕ್ಕದ್ದೆ? ಆದ್ದರಿಂದ ಚುನಾವಣಾ ವ್ಯವಸ್ಥೆಯಲ್ಲಿ ಆಗುತ್ತಿರತಕ್ಕಂಥ ಇಂತಹ ಕೆಲವು ಅನಿಷ್ಟಗಳು, ಚುನಾವಣಾ ಪದ್ಧತಿಯಲ್ಲಿ ಹಲವಾರು ವರ್ಷಗಳಿಂದ ಬಂದಿರತಕ್ಕಂಥ ವಿಚಾರಗಳು ಎಲ್ಲರೂ ಸೇರಿ ಈ ಚುನಾವಣಾ ವ್ಯವಸ್ಥೆಯನ್ನು ಹೇಗೆ ಮುಕ್ತ

ಮಾಡಬೇಕು ಎಂದು ಹೇಳುತ್ತಿರುವ ವಿಚಾರದ ಬಗ್ಗೆ ಮಾತನಾಡೋಣ. ನಾನು ನಿಮ್ಮ ಮೇಲೆ ಅಪಾದನೆ ಮಾಡಬಹುದು, ನೀವು ನಮ್ಮ ಮೇಲೆ ಅಪಾದನೆ ಮಾಡಬಹುದು. ಆದರೆ ಪರಿಹಾರ ಹುಡುಕುವುದಕ್ಕೆ ಆಗುವುದಿಲ್ಲ. ಜನ ಒಂದು ತೀರ್ಮಾನ ಕೊಟ್ಟಿದ್ದಾರೆ, ಆ ತೀರ್ಮಾನಕ್ಕೆ ತಲೆ ಬಾಗುವ. ನಿಮ್ಮ ಪರಿಸ್ಥಿತಿ ಕಳೆದ ಚುನಾವಣೆಗಿಂತ ಈ ಚುನಾವಣೆಯಲ್ಲಿ ಏನು ಆಯಿತು? ಕಳೆದ ಚುನಾವಣೆಯಲ್ಲಿ ನಿಮಗೆಷ್ಟು ಮತ ಬಂತು? ಈ ಚುನಾವಣೆಯಲ್ಲಿ ಎಷ್ಟು ಮತ ಬಂತು? ಏಕೆ ಜನ ಕೊಡಲಿಲ್ಲ? ಇದನ್ನು ವಿಚಾರ ಮಾಡಿ. ಅಂದರೆ ನೀವು ನಮ್ಮ ಮೇಲೆ ಅಪಾದನೆ ಹೊರಿಸಬೇಡಿ. ಒಂದು ರಾಮನಗರ ಚುನಾವಣೆಯಲ್ಲಿ ನಡೆದಿರತಕ್ಕದ್ದು. ನೀವು ಎಲ್ಲರಿಗೂ ಕಲಿಸಿಕೊಟ್ಟಿರಿ, ನೀವು ನಮ್ಮ ಮನೆ ಮಕ್ಕಳಿಗೆಲ್ಲಾ, ನಾಯಿ, ಹಂದಿಗಳಿಗೆಲ್ಲಾ ಕುಡಿಯುವುದನ್ನು ಕಲಿಸಿ ಕೊಟ್ಟಿರಿ ಎಂದು ಹೇಳಿದಿರಿ. ಸುಮಾರು 3 - 4 ವರ್ಷಗಳವರೆಗೆ ಇಡೀ ರಾಷ್ಟ್ರವನ್ನು ಬೆಂಕಿ ಜ್ವಾಲೆಯಲ್ಲಿ ಹಚ್ಚಿಬಿಚ್ಚರು. ಮಕ್ಕಳನ್ನೆಲ್ಲ ಬೀದಿಬೀದಿಯಲ್ಲಿ ತಂದುಬಿಟ್ಟರು.

ಶ್ರೀ ವೈ. ರಾಮಕೃಷ್ಣ : ಅಧ್ಯಕ್ಷರೇ, ಮಾತನ್ನು ಅವರು ವಾಪಸ್ ಪಡೆಯಬೇಕು.

ಶ್ರೀ ಎಂ. ಸಿ. ನಾಣಯ್ಯ : ನಾನು ಕಾನೂನು ಸಚಿವನಾಗಿ ಅಲ್ಲ, ಜನತಾದಳದ ಒಬ್ಬ ಕಾರ್ಯಕರ್ತನಾಗಿ ಈ ರಾಷ್ಟ್ರದ ಒಬ್ಬ ಪ್ರಜೆಯಾಗಿ ಮಾತನಾಡುತ್ತೇನೆ. ಇಡೀ ರಾಷ್ಟ್ರದಲ್ಲಿ ಜಾತಿ ವ್ಯವಸ್ಥೆಯನ್ನು ತಂದು ಇಡೀ ರಾಷ್ಟ್ರದ ಮೇಲೆ ಇಷ್ಟು ದೊಡ್ಡ ಜ್ವಾಲೆ ಹಬ್ಬಿಸಿ ಇಡೀ ರಾಷ್ಟ್ರವನ್ನು ಕಂದಕಗಳನ್ನಾಗಿ ನಿರ್ಮಾಣ ಮಾಡಿದವರು ನೀವೇ ಹೊರತು, ನಾನು ಹೇಳುತ್ತಿದ್ದೇನೆ, ಜನ ನಿಮಗೆ ಪಾಠ ಕಲಿಸಿಬಿಟ್ಟಿದ್ದಾರೆ.

ಶ್ರೀ ವೈ. ರಾಮಕೃಷ್ಣ : ಅವರು ಬಹಳ ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ. ಇದು ಅವರ ಹೇಡಿತನವನ್ನು ತೋರಿಸುತ್ತದೆ.

ಶ್ರೀ ಎಂ. ಸಿ. ನಾಣಯ್ಯ : ಸ್ವಾಮಿ ಮಾತನಾಡುವಾಗ ಉದ್ವೇಗ ಬೇಡ. ನೀವು ಹೇಳಿದ್ದನ್ನು ನಾವು ಕೇಳಿಕೊಂಡೆವು, ನಾವು ಕೊಡುವಾಗ ಅದನ್ನು ನೀವು ಕೇಳಿಕೊಳ್ಳಿ. ನೀವು ಹೇಳಿದ್ದನ್ನು ಕೇಳಿಕೊಂಡು ಕೂರಲಿಕ್ಕೆ ನಾವಲ್ಲ, ಹಿಂದಕ್ಕೆ ನಾವು ಕೊಡುವಾಗ ನೀವು ತೆಗೆದುಕೊಳ್ಳಿ. ನಾಣಯ್ಯ ಹೇಡಿಯಾಗುವುದಿಲ್ಲ, ಜನತಾದಳ ಹೇಡಿಯಾಗುವುದಿಲ್ಲ. ಯಾರು ಹೇಳುತ್ತಾರೋ ಅವರೇ ಹೇಡಿಗಳಾಗುತ್ತಾರೆ.

ಶ್ರೀ ಬಿ. ಬಿ. ಶಿವಪ್ಪ : ಕಾನೂನು ಸಚಿವರು ಹೇಳಿದ್ದನ್ನು ನಾನು ಅರ್ಥ ಮಾಡಿಕೊಂಡೆ. ಅವರು ಮಡಿಕೇರಿಯಂತಹ ಒಂದು ನಗರದಿಂದ ಬಂದಿದ್ದಾರೆ, ನಾನು ಕುಂಬರಹಳ್ಳಿ ಎಂಬ ಹಳ್ಳಿಯಿಂದ ಬಂದಿರುವವನು. ಆ ಹಳ್ಳಿಯಲ್ಲಿ ಒಂದು ಗಾದೆ ಮಾತು ಹೇಳುತ್ತಾರೆ: ಇದ್ದುದನ್ನು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆ ಮೇಲೆ ಒದ್ದರು ಎಂದು. ಇವತ್ತು ಕಾಲ ತುಂಬಾ ಕೆಟ್ಟಿದೆ. ಈ ಕಾಲದಲ್ಲಿ ಸತ್ಯ ಹೇಳುವುದು ಭಾರಿ ಕಷ್ಟ, ಸತ್ಯ ಹೇಳುವಂತಹವರು ಸಿಗುವುದಿಲ್ಲ. ಆದರೆ ಹೇಳುವುದು ಕೇಳುವುದು ಇನ್ನೂ ಕಷ್ಟ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಅವರಿಬ್ಬರೂ ಕೂರ್ಗ್‌ನವರು ಇದ್ದಾರೆ, ಯಾವಾಗ ಜಗಳ ಆಡುತ್ತಾರೋ ಯಾವಾಗ ಒಂದಾಗುತ್ತಾರೋ ಗೊತ್ತಿಲ್ಲ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್ : ಮಾನ್ಯ ಅಧ್ಯಕ್ಷರೇ, ನಾನು ಒಂದು ಪದ್ಯ ಓದುತ್ತೇನೆ ಅವರು ಅರಗಿಸಿಕೊಳ್ಳಲಿ. ಬಹಳ ಕಡಿಮೆ ಇದೆ. "ರಾಮ ಅರ್ಜಿ ಹಾಕಿದ್ದಾನೆ ನೆಲೆ ಇಲ್ಲ ಆತನಿಗೆ ವಾಸಕ್ಕೆ ಮನೆಯಿಲ್ಲ, ಕೊಡುವಿರಾ ಬಡ ಜನರೇ ಒಂದು ಇಟ್ಟಿಗೆಯನು ನೆನಪಿರಬಹುದು ನಿಮಗೆ ರಾಮಾಯಣ, ಹಿಂದೆ ವಾನರ ಸೇನೆ ಸ್ನೇಹಸೇತುವೆ ಕಟ್ಟಿ ನೊಂದವರ ಒಂದುಗೂಡಿಸಿತ್ತು ಇಂದು ರಾಮಭಂಟರ ರುದ್ರಕುಣಿತಕ್ಕೆ ಈ ನೆಲದ ಮಣ್ಣು ನೆತ್ತರಾಯಿತು. ಕಾವಿವೇಷವ ನಂಬಿ ಸೀತೆ ಕೆಟ್ಟಳು ಅಂದು, ದೇಶವನೆ ಸುಡುತಲಿದೆ ಆ ವೇಷ ಇಂದು. ರಾಮನಾಮದ ಹಿಂದೆ ರಾಜಭೋಗದ ಬಯಕೆ, ಜೊಲ್ಲ ತೊಟ್ಟಿಕುತಿದೆ ಕಣ್ತೆರೆದು ನೋಡಿ, ನಕಲಿಧರ್ಮದ ಅಮಲು, ಬಲಿಪೀಠ ನಿರ್ಮಿಸಿದೆ, ಎಷ್ಟು ಕೊರಳುಗಳು ಉರುಳಿವೆ ಎಂದು ಭ್ರಮಿಸಿದಿರಿ, ರಾಮರಾವಣರ ಕಥೆಯು ಇಂದೇ ಆರಂಭ.

ಶ್ರೀ ಬಿ.ಬಿ.ಶಿವಪ್ಪ : ಮಾನ್ಯ ಅಧ್ಯಕ್ಷರೇ ಅವರು ಪದ್ಯ ಹೇಳಿದ್ದಾರೆ, ಅದಕ್ಕೆ ಉತ್ತರ ಹೇಳಲು ನಾನು ಕವಿಯಲ್ಲ ಆದರೆ ಒಂದು ಮಾತ್ರ ಹೇಳುತ್ತೇನೆ. ಅವರು ಪ್ರಾರಂಭ ಮಾಡುವಾಗ ಹೇಳಿದರು ರಾಮನ ಹಿಂದೆ ವಾನರ ಸೈನ್ಯ ಇತ್ತು ಎಂದು ಅವತ್ತಿದ್ದುದು ವಾನರ ಸೈನ್ಯ, ಇವತ್ತಿರುವುದು ವಾನರಬುದ್ಧಿ ಇರುವವರ ಸೈನ್ಯ, ಹಾಗಾಗಿ ಪರಿಸ್ಥಿತಿ ಹೀಗಾಯ್ತು. ನಮಗೆ ದೇವರು ಎಲ್ಲ ಕೊಟ್ಟಿದ್ದರೂ ಕೂಡ ಆದರೆ ವಾನವರ ಬುದ್ಧಿ ಹೋಗಲಿಲ್ಲ. ಇವತ್ತು ಕೂಡ ತಿಳಿದಂಥವರು ನೀವು ಹೇಳುತ್ತಿದ್ದೀರಿ, ಅವರು ಮಾತನಾಡಿದ್ದಕ್ಕೆ ನಾನು ಮಾತನಾಡಬೇಕಾಗುತ್ತದೆ. ಬಾಬರಿ ಮಸೀದಿ ಎಂದು ಹೇಳುತ್ತಿದ್ದೀರಲ್ಲ ಎಲ್ಲಿದೆ ಬಾಬರಿ ಮಸೀದಿ? ಅದು ಒಂದು ವಿವಾದಾತ್ಮಕ ಕಟ್ಟಡ ಆದ್ದರಿಂದ ಚುನಾವಣೆ ಸಂದರ್ಭದಲ್ಲಿ ಹೇಳುವ ವಿಚಾರಗಳು ಇಲ್ಲಿ ಅನವಶ್ಯಕ. ಶ್ರೀರಾಮನಿಗೆ ನೆಲೆ ಕಾಣಿಸಿರುವವರು ನಾವು, ನೀವಲ್ಲ ಶ್ರೀರಾಮನ ನೆಲೆಯನ್ನು ತೆಗೆದುಹಾಳು ಮಾಡಿದವರು ನೀವು ಅದರ ಬಗ್ಗೆ ಪ್ರಸ್ತಾಪ ಬೇರೆ ಕಡೆ ಮಾಡೋಣ.

ಒಬ್ಬ ಸದಸ್ಯರು : ಅಧ್ಯಕ್ಷರೇ ನಾವು ಇವತ್ತು ನೆಲೆ ಕಾಣಿಸಲಿಲ್ಲ, ಆ ನೆಲೆ ಕಾಣಿಸುವ ತಾಖತ್ ಅಧಿಕಾರದಲ್ಲಿರುವ ನಿಮಗಿದೆಯಾ? ನಾವು ಬಂದರೆ ಮಾಡುತ್ತೇವೆ.

ಶ್ರೀ ವೈ.ರಾಮಕೃಷ್ಣ : ನಾವು 160 ಜನ, ಮೊನ್ನೆ ಗೆದ್ದಿರುವುದು ಎರಡು, ಇವರು ಎಷ್ಟು ಗೆದ್ದಿದ್ದಾರೆ? ಹೇಳುವುದಕ್ಕಾದರೂ ಸ್ವಲ್ಪ ನಾಲಿಗೆ ಇರಬೇಕಲ್ಲ.

ಶ್ರೀ ಎಂ.ಸಿ.ನಾಣಯ್ಯ : ಅರೆ ನೀವು ಗೆದ್ದು ಏನು ಮಾಡಿದಿರಿ? ನಿಮ್ಮ ಗೆಲುವಿನಿಂದ ಅನರ್ಥವಾಯಿತು. ನಾವು ಇವತ್ತು 44 ಜನ ಇದ್ದು ರಾಷ್ಟ್ರವನ್ನು ಆಳುತ್ತಿದ್ದೇವೆ. ನಿಮ್ಮನ್ನು ಜನ ತಿರಸ್ಕಾರ ಮಾಡಿದರು. ಇಡೀ ಪ್ರಪಂಚ 13 ದಿವಸದ ಆಡಳಿತದ ವಿಸ್ಮಯ ಎಂದು ಹೇಳುವುದನ್ನು ಇಡೀ ಪ್ರಪಂಚಕ್ಕೆ ತೋರಿಸಿಕೊಟ್ಟಿರಿ. ರಾಜಕೀಯ ವಿಸ್ಮಯ ತೋರಿಸಿಕೊಟ್ಟುಬಿಟ್ಟಿರಿ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೇ ಅವರು ಓದಿದ ಪದ್ಯ ಅಪೂರ್ಣ, ಉಳಿದ ಭಾಗ ನಾನು ಓದುತ್ತೇನೆ : ವಾನರ ಸೇನೆ ಡಾ: ಲಲಿತಾನಾಯಕರ ಜೊತೆಗಿತ್ತು ಆ ಸೇನೆ ಡಾ: ಅಂಬೇಡ್ಕರ್‌ರಿಗೆ ಮದ್ಯ ಸುರಿದಿತ್ತು, ಅದರ ಫಲವಾಗಿ ಲಲಿತಾನಾಯಕರು ಸೀತೆಯಂತೆ ಕಾಡಿಗೆ ಹೋಗಬೇಕಾಯಿತ್ತು. ಈ ಭಾಗ ಏಕೆ ಓದಲಿಲ್ಲ ಅವರು? ಓದಲು ಹೇಳಿ.

ಶ್ರೀ ಬಿ.ಬಿ.ಶಿವಪ್ಪ : ಹೋಗಲಿ ಬಿಡಿ. ಮಾನ್ಯ ಅಧ್ಯಕ್ಷರೇ, ಕಾರ್ಯಕ್ರಮದ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡುತ್ತ, ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಇವತ್ತು ಜಿಲ್ಲಾಪಂಚಾಯಿತಿ ತಾಲ್ಲೂಕು ಪಂಚಾಯಿತಿ ಗ್ರಾಮಪಂಚಾಯಿತಿ ಎನ್ನುವ ವ್ಯವಸ್ಥೆ ಏನಿದೆ ಅಧಿಕಾರ ವಿಕೇಂದ್ರೀಕರಣ ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ಅಧಿಕಾರ ಕೊಡುತ್ತೇವೆನ್ನುವ ಇವರ ತತ್ವಕ್ಕೆ ತದ್ವಿರುದ್ಧವಾಗಿ ನಡೆಯುತ್ತಿದೆ ಎಂದು ಬಹುಶಃ ನಾನು ಹೇಳಿದರೆ ನಾಗೇಗೌಡರು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ : ನನಗೆ ಶಿವಪ್ಪನವರು ಬಹಳ ಆತ್ಮೀಯರು, ಅತ್ಯಂತ ಗೌರವಾನ್ವಿತ ಸಂಸಾರದಿಂದ ಬಂದಿರತಕ್ಕಂಥವರು, ಒಳ್ಳೆಯ ಮಾನವೀಯ ಗುಣಗಳನ್ನು ಬೆಳೆಸಿಕೊಂಡಿರುವ ಒಬ್ಬ ಸಭ್ಯ ಮುಖಂಡರು, ಅದರಲ್ಲಿ ಎರಡನೇ ಮಾತೇ ಇಲ್ಲ. ಅವರು ರಾಮನಗರ ಚುನಾವಣೆ ಬಗ್ಗೆ ಮಾತನಾಡಿದ್ದರು. ನಮ್ಮ ಆತ್ಮಶೋಧನೆ ಮಾಡಿಕೊಳ್ಳೋಣ. ಇಲ್ಲಿರುವ ಎಲ್ಲ ಶಾಸಕರನ್ನು, ಇತರ ರಾಜ್ಯಗಳ ಶಾಸಕರನ್ನು, ರಾಷ್ಟ್ರದ ಅತ್ಯುಚ್ಛ ಪಾರ್ಲಿಮೆಂಟ್ ಸದಸ್ಯರನ್ನೂ ಸೇರಿಸಿಕೊಂಡು, ಚುನಾವಣಾ ನಿಯಮದ ಪ್ರಕಾರ ಹಣ ಖರ್ಚುಮಾಡಿ, ಭ್ರಷ್ಟಾಚಾರ ಮಾಡದೆ 1.40 ಲಕ್ಷ ಮಾತ್ರ ಅಕೌಂಟ್ ಕೊಡುತ್ತೀವಲ್ಲ ಅದರಂತೆ ನಾವು ನಡೆದುಕೊಂಡಿದ್ದೇವೆಂದು ನಮ್ಮ ಶಿವಪ್ಪಣ್ಣ ಇಲ್ಲಿ ಪ್ರಮಾಣವಾಗಿ ಹೇಳಿಬಿಟ್ಟರೆ ಅವರು ರಾಮನಗರಕ್ಕೆ ಮಾಡಿದ ಅಪಾದನೆ ಸರಿ, ಇಲ್ಲ ಅದು ಮಾಡಲಿಲ್ಲವೆಂದರೆ ಅತ್ಯಂತ ಸಭ್ಯರಾದ ಶಿವಪ್ಪನವರಿಂದ ಇಂತಹ ಅಪಾದನೆ ಬಂದರೆ ಮನಸಿಗೆ ಅನಿಸುತ್ತದೆ ಏನಪ್ಪ ವ್ಯವಸ್ಥೆ ಹೀಗಿದೆ, ಕೆಟ್ಟಿದೆ ಎಂದು ಹೇಳಲಿಲ್ಲವಲ್ಲ ಎಂದು ಅನ್ನಿಸುತ್ತದೆ.

ಶ್ರೀ ಬಿ.ಬಿ.ಶಿವಪ್ಪ : ಮಾನ್ಯ ಅಧ್ಯಕ್ಷರೇ, ಈ ಸದನ ಪ್ರವೇಶ ಮಾಡುವಾಗಲೇ ನಾನು ಪ್ರಮಾಣ ವಚನ ಸ್ವೀಕಾರ ಮಾಡಿದ್ದೇನೆ. ಇವತ್ತು ಕೂಡ ನಾಗೇಗೌಡರು ಹೇಳಿದ ಮಾತಿಗೆ ಈ ಸದನದಲ್ಲಿ ನಿಂತು ಪ್ರಮಾಣ ಮಾಡಿ ಹೇಳಬಲ್ಲೆ. ತತ್ವಕ್ಕೆ ಸರಿಯಾಗಿ ಚುನಾವಣೆಗೆ ಖರ್ಚು ಮಾಡಿದ ವ್ಯಕ್ತಿ ಯಾರಾದರೂ ಇದ್ದರೆ ಅದು ಬಿ.ಬಿ.ಶಿವಪ್ಪ. ಇವತ್ತು ಅವರ ಎದುರು ಚಾಲೆಂಜ್ ಮಾಡಿ ಹೇಳುತ್ತಿದ್ದೇನೆ.

ಗೊಂದಲ

ಶ್ರೀ ಎಂ.ಸಿ.ನಾಣಯ್ಯ : ಅವರು ಎಲ್ಲರ ಬಗ್ಗೆ ಹೇಳಲಿಲ್ಲ. ನನ್ನ ಪಕ್ಷದಲ್ಲಿ ನನ್ನಷ್ಟು ಸಜ್ಜನಿಕೆಯಿಂದ ಚುನಾವಣೆ ಗೆದ್ದುದು ನಾನೊಬ್ಬನೇ ಎಂದು ಬೇರೆ ಪಕ್ಷಕ್ಕೆ ಅವರು ಹೇಳಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರ ಪಕ್ಷದ ಬಗ್ಗೆ ಅವರು ಹೇಳಲಿಲ್ಲ, ಅತ್ಯಂತ ಕಡಿಮೆ ಹಣ ಖರ್ಚುಮಾಡಿ ಈ ಸದನಕ್ಕೆ ಬಂದಿರುವವರಲ್ಲಿ ನಾನೂ ಒಬ್ಬನಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ : ಅತ್ಯಂತ ಕಡಿಮೆ ಮಾಡಿದ್ದು, ಅತ್ಯಂತ ಕುಡಿಸಿದ್ದು, ಅತ್ಯಂತ ಕಳ್ಳವೋಟ್ ಮಾಡಿಸಿದ್ದು - ಈ ಪ್ರಶ್ನೆ ನಾನು ಹೇಳಲಿಲ್ಲ. ಏಕೆಂದರೆ, ಪಾರ್ಲಿಮೆಂಟಿನಲ್ಲಿ ಇನ್ನು ಸ್ವಲ್ಪ ದಿವಸದಲ್ಲೇ ರಿಫಾರ್ಮ್ಸ್ ಬಗ್ಗೆ ಬಿಲ್ ಬರುತ್ತಿದೆ. ಎಲ್ಲ ರಾಜಕೀಯ ಪಕ್ಷಗಳೂ, ಸೀನಿಯರ್ ಮೋಸ್ಟ್ ರೆಸ್ಪೆಕ್ಟೆಡ್ ಲೀಡರ್ ವಾಜಪೇಯಿಯವರೂ ಸಹ ಅದರಲ್ಲಿ ಭಾಗವಹಿಸುವ ಸಂದರ್ಭ

ಇದೆ ಇನ್ನು 10-15 ದಿವಸದಲ್ಲಿ, ಎಲ್ಲ ರಾಜಕೀಯ ಪಕ್ಷದವರನ್ನು ಪ್ರಧಾನಮಂತ್ರಿಗಳು ಕರೆಯುವ ಅವಕಾಶ ಇದೆ. ಶಿವಪ್ಪನವರು ಹೇಳಿದರು, ಬೇರೆ ಸದಸ್ಯರ ಪೈಕಿ ನಾನು ಅತ್ಯುತ್ತಮ ಎಂದು ನಾನು ಅದನ್ನು ಕೇಳಲಿಲ್ಲ, ಇರಬಹುದು, ಅವರು ಅತ್ಯುತ್ತಮರಾಗಿದ್ದರು, ನಾವೇ ಸರ್ಟಿಫಿಕೇಟ್ ಕೊಡುತ್ತೇವೆ. ಆದರೆ ಚುನಾವಣಾ ನಿಯಮಾವಳಿ ಇದೆಯಲ್ಲ ಅದರಂತೆಯೇ ನಡೆದುಕೊಂಡಿದ್ದಾರಾ? ಅವರು ನಡೆದುಕೊಂಡಿದ್ದೇನೆನ್ನುವುದಾದರೆ ಅವರ ಕ್ಷೇತ್ರದಲ್ಲಿ ಬೇಕಾದರೆ ಒಂದು ಸೆಮಿನಾರ್ ಮಾಡೋಣ. ಇವರು ಹೇಳಿದ್ದನ್ನು ಜನ ಸರಿ ಎಂದು ಹೇಳಿಬಿಟ್ಟರೆ ನಾನು ಈ ಸದನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತೇನೆ.

3.50 ಪಿ.ಎಂ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸದಸ್ಯರಾದ ಶಿವಪ್ಪನವರು ಹೇಳಿದಂಥ ಮಾತನ್ನು ನಾವು ಒಪ್ಪಿಕೊಳ್ಳಬಹುದಾಗಿತ್ತು. ಆದರೆ, ಹೇಳಬೇಕಾದರೆ 'ನಾಗೇಗೌಡರು ನಮ್ಮ ಗುರುಗಳು' ಎಂದು ಹೇಳಿದರಲ್ಲ, ಅದಕ್ಕೋಸ್ಕರ ಅನುಮಾನ ಬಂತು.

ಶ್ರೀ ಬಿ.ಬಿ.ಶಿವಪ್ಪ : ನಾನು ಪ್ರಥಮವಾಗಿ ಪ್ರವೇಶಿಸಿದಾಗ ಅವರು ಮಾರ್ಗದರ್ಶನ ಮಾಡಿದವರು, ಅದು ಒಂದೆಡೆ ಇರಲಿ. ನಾಗೇಗೌಡರು ಅವರ ವ್ಯವಸ್ಥೆ ಬಗ್ಗೆ ಏನು ಹೇಳಿದ್ದಾರೆ, ಅದನ್ನು ಸ್ವೀಕರಿಸುತ್ತೇನೆ, ಅದರಲ್ಲಿ ಹಿಂದು-ಮುಂದು ಏನಿಲ್ಲ. ನಾಗೇಗೌಡರಿಗೆ ಒಂದು ವಿಚಾರ ಹೇಳುತ್ತೇನೆ: ಅವರು ಪಾಠ ಹೇಳಿಕೊಟ್ಟಂಥ ಗುರು. ಆತನ ಶಿಷ್ಯ ಭಾರಿ ಮೇಲ್ಮಟ್ಟಕ್ಕೆ ಹೋದಾಗ ಆತನಿಗೆ ಅತ್ಯಂತ ಸಂತೋಷವಾಗುತ್ತದೆ. ಏನೆಂದರೆ, 'ಏನಪ್ಪಾ, ಗುರು ದಕ್ಷಿಣೆ ಇಷ್ಟರಮಟ್ಟಿಗೆ ಕೊಟ್ಟನಲ್ಲ, ನಾನು ಆತನಿಗೆ ಪಾರ್ಲಿಮೆಂಟರಿ ವಿಚಾರದಲ್ಲಿ ಪಾಠ ಕಲಿಸಿಕೊಟ್ಟಿದ್ದೆ, ಆದರೆ, ಇವೊತ್ತು ಶಿವಪ್ಪ ನನಗಿಂತಲೂ ಮೇಲಕ್ಕೆ ಹೋಗಿ ನನ್ನ ರಾಜೀನಾಮೆ ತೆಗೆದುಕೊಂಡು ಬಿಟ್ಟನಲ್ಲ' ಎಂದು ಅವರು ಅತ್ಯಂತ ಸಂತೋಷ ಪಡುವಂಥ ಕಾಲ ಬಹಳ ದೂರವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲರೂ ಸಂತೋಷ ಪಡುವಂಥ ಗುರುವಿಗೆ ತಕ್ಕವನೆಂದು ಒಂದು ಕಾಣಿಕೆ ಕೊಡುವಂಥ ಕಾಲದ ಅವಕಾಶವನ್ನು ನಾಗೇಗೌಡರಿಗೆ ಕಲ್ಪಿಸಿಕೊಟ್ಟಿದ್ದಾರೆ, ಇದನ್ನು ನಾನು ಸ್ವೀಕರಿಸಿದ್ದೇನೆ. ಇದರ ಬಗ್ಗೆ ಇಷ್ಟು ಮಾತನಾಡಿ ನಾನು ಈಗಾಗಲೇ ಪ್ರಸ್ತಾಪ ಮಾಡುತ್ತಿದ್ದ ವಿಚಾರಕ್ಕೆ ಬರುತ್ತೇನೆ. ಈ ಮೂರು ವ್ಯವಸ್ಥೆಗಳಲ್ಲಿ ಇವೊತ್ತು ಈ ಸರ್ಕಾರ ಮಾಡುತ್ತಿರುವಂಥ ಕೆಲಸ ಅತ್ಯಂತ ಕೀಳು ಮಟ್ಟದ್ದಾಗಿದೆ. ಬಹುಶಃ ಯಾರು ಇದರ ಮೇಲುಸ್ತುವಾರಿ ನೋಡಬೇಕು, ಯಾರಿಂದ ಈ ಕೆಲಸ ಮಾಡಿಸಬೇಕೆನ್ನುವದರ ಬಗ್ಗೆ ಅವರಲ್ಲೇ ಒಂದು ರೀತಿಯ ಜಿಜ್ಞಾಸೆಯಿರುವಂಥ ರೀತಿಯಲ್ಲಿದೆ, ತೀರಾ ಕಳಪೆ ಕೆಲಸ-ಕಾರ್ಯಗಳಾಗಿವೆ. ಇಂತಹ ಹಲವಾರು ಉದಾಹರಣೆಗಳನ್ನು ಕೊಡಬಲ್ಲೆ. ಅವರು ಕಾನೂನಿನ ಸುವ್ಯವಸ್ಥೆ ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ನಾನು ಪ್ರಸ್ತಾಪಿಸಲೇಬೇಕಾಗುತ್ತದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿನಿತ್ಯ ಕೊಲೆ, ದರೋಡೆಯಾಯಿತು. ಶಾಸಕರ ಮೇಲೆ ಹಲ್ಲೆಯಾಯಿತು, ಹಿಂದೆಂದೂ ಆಗಿರಲಿಲ್ಲ. ನಾನು ರಾಜಕೀಯ ಪ್ರವೇಶ ಮಾಡಿ ಸುಮಾರು 30-35 ವರ್ಷಗಳ ಮೇಲಾಯಿತು. ಸನ್ಮಾನ್ಯ ಸಚಿವರಾದ ನಾಗೇಗೌಡರು ಹೇಳಿದಂತೆ, ನಾನು ಯಾರಿಂದಲೂ ಕೆಟ್ಟ ಮಾತನ್ನು ತೆಗೆದುಕೊಂಡವನಲ್ಲ. ಆದರೆ, ನೀವು ಅಧಿಕಾರಕ್ಕೆ ಬಂದನಂತರ ನಾನು ಹೊಡೆಸಿಕೊಂಡೆ, ಅದು ಅಲ್ಲಿಗೆ ಮುಗಿದು

ಹೋಯಿತು. ನನ್ನ ಕುಟುಂಬದ ಸದಸ್ಯರು ಮೇಲೆ ಕೈ ಮಾಡಿದರು, ಏನೂ ಕ್ರಮ ಕೈಗೊಳ್ಳಲಿಲ್ಲ. ಇವೊತ್ತು ನಮ್ಮ ಮನೆಯಲ್ಲಿ ಪ್ರತಿನಿತ್ಯ ಕಳ್ಳತನಗಳಾಗುತ್ತಿವೆ, ಏನೂ ಕ್ರಮ ಕೈಗೊಳ್ಳಲಿಲ್ಲ, ಇದೇಕೇ ಆಗುತ್ತಿದೆ? 40-50 ವರ್ಷಗಳಿಂದ ಆಗದಿರುವಂಥ ಇಂತಹ ಪ್ರಕರಣಗಳು ಇವೊತ್ತು ಪ್ರಾರಂಭವಾಯಿತಲ್ಲ, ಕಾರಣವೇನು? ಈ ವಿಷಯವನ್ನು ಪೊಲೀಸಿನವರಿಗೆ ತಿಳಿಸಿದರೆ ಪೊಲೀಸರಿಂದ ಬರುವ ಉತ್ತರ ಅತ್ಯಂತ ಆಶ್ಚರ್ಯಕರವಾದುದು. ಮೊನ್ನೆ ದಿವಸ ಸುಮಾರು ಎರಡು ಲಕ್ಷ ರೂಪಾಯಿ ಬೆಲೆಬಾಳುವ ಸಾಮಾನು ಕಳ್ಳತನವಾಯಿತು, ಪೊಲೀಸರಿಗೆ ಪುಕಾರು ಆಯಿತು. ಇದು ನಡೆದು ಒಂದೂವರೆ ತಿಂಗಳಾಯಿತಲ್ಲ, ಏನು ಮಾಡುತ್ತಿದ್ದೀರೆಂದು ಕೇಳಿದರೆ 'ಸ್ವಾಮಿ, ನಮಗೆ ಸಿಬ್ಬಂದಿ ಕೊರತೆಯಿದೆ' ಎನ್ನುತ್ತಾರೆ. ಅಲ್ಲದೆ ಮುಖ್ಯಮಂತ್ರಿಗಳು, ಪ್ರಧಾನಮಂತ್ರಿಗಳು ಆಗಿಂದಾಗ್ಗೆ ರಾಜ್ಯದಲ್ಲಿ ಪ್ರವಾಸ ಮಾಡುತ್ತಿರುವುದರಿಂದ ನಮ್ಮಲ್ಲಿರುವ ಎಲ್ಲಾ ಸಿಬ್ಬಂದಿಗಳನ್ನೂ ಡೆಪ್ಯೂಟಿ ಮಾಡುತ್ತಾರೆ, ನಮಗಿರುವವರು ಸೆಂಟ್ರಿ ಒಬ್ಬರೇ. ಅವರೊಬ್ಬರನ್ನಿಟ್ಟುಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲ, ಸ್ವಲ್ಪ ಸಮಯಬೇಕು ಎಂದು ಕೇಳುತ್ತಿದ್ದಾರೆ. ಒಟ್ಟಿನಲ್ಲಿ ಸಿಬ್ಬಂದಿ ಕೊರತೆಯಿರುವುದು ಒಪ್ಪಿಕೊಳ್ಳತಕ್ಕ ಮಾತು. ಅಂದರೆ, ನೀವು ಆಡಳಿತ ಸರಿ ಇದೆಯೆಂದು ಹೇಳುತ್ತೀರಲ್ಲ, ಎಲ್ಲಿ ಸರಿ ಇದೆ? ಒಂದು ಉದಾಹರಣೆ ಕೊಡುವುದಾದರೆ ನನ್ನ ಕ್ಷೇತ್ರದಲ್ಲಿ ಒಂದು ಕೊಲೆಯಾಯಿತು. ಸಿನಿಮಾದವರಿದ್ದರೆ ಬಹುಶಃ ಅದನ್ನೊಂದು ಸಿನಿಮಾ ಕತೆ ಮಾಡಿಬಿಡುತ್ತಾರೆ. ಯಾವುದೋ ಕಾರಣಕ್ಕೆ ಒಬ್ಬನನ್ನು ಗುಂಡಿಟ್ಟು ಮೂರು ಜನರು ಕೊಂದರು, ಆತ ಸತ್ತ, ಮೂರು ಜನರು ತಲೆ ತಪ್ಪಿಸಿಕೊಂಡರು. ಸುಮಾರು ನಾಲ್ಕು ದಿವಸಗಳ ಕಾಲ ಅವರು ಕಾಡಿನಲ್ಲಿ ಅಡಗಿಕೊಂಡರು, ಸಿಗಲಿಲ್ಲ. ಪೊಲೀಸ್ ಅಧಿಕಾರಿಗಳು ಅವರುಗಳನ್ನು ಹುಡುಕಲು ಪ್ರಾರಂಭಿಸಿದರು. ಹುಡುಕಾಟ ನಡೆಸುತ್ತಿದ್ದ ಸಂದರ್ಭದಲ್ಲಿ ಕೊಲೆ ಪ್ರಕರಣದಲ್ಲಿ ಅತಿ ಮುಖ್ಯವಾಗಿ ಬೇಕಾಗಿರತಕ್ಕ ಮೂವರಲ್ಲಿ ನಾಯಕನಾಗಿದ್ದ ಒಬ್ಬ ಕಾಡಿನಲ್ಲಿ ಗುಂಡೇಟಿನಿಂದ ಸತ್ತುಹೋದ. ತಕ್ಷಣ ಎಸ್.ಪಿ.ಯವರು ಒಂದು ಸ್ಟೇಟ್‌ಮೆಂಟ್ ಮಾಡಿದರು. ಏನೆಂದರೆ, 'ಅವರು ನಮ್ಮ ಮೇಲೆ ಅಟ್ಯಾಕ್ ಮಾಡುವಂಥ ವಾತಾವರಣ ನಿರ್ಮಾಣವಾಯಿತು, ಈ ಸಂಶಯ ನಮಗೆ ಬಂದ ಕಾರಣ, ನಡೆದಂಥ ಘರ್ಷಣೆಯಲ್ಲಿ ಅಕಸ್ಮಾತ್ ಪೊಲೀಸರ ಗುಂಡು ಸೋಕಿ ಆತ ಸತ್ತ' ಎಂದು ಪತ್ರಿಕೆಗೆ ತಿಳಿಸಿದರು. ಇದಾದ ನಂತರ, 'ನಾನು ಗುಂಡು ಹೊಡಿಯಲಿಲ್ಲ' ವೆಂದು ಪೊಲೀಸಿನವರಲ್ಲೇ ಒಂದು ರೀತಿಯ ಗೊಂದಲ ಹುಟ್ಟಿಕೊಳ್ಳಲು ಪ್ರಾರಂಭವಾಯಿತು. ಹಾಗಾದರೆ, ಗುಂಡು ಹೊಡೆದವರಾರು? ಎಂಬ ಅನುಮಾನ ಬಂತು. ಈ ಅನುಮಾನ ಬಂದ ನಂತರ ಪೊಲೀಸಿನವರು ಯಾವಾಗ ರೈಡ್ ಮಾಡುವುದಕ್ಕಾಗಲೀ ಅಥವಾ ಇಂತಹ ಕಾರ್ಯಕ್ರಮಗಳಿಗೆ ಹೋಗುವಾಗ ಯಾರ್‍ಯಾರ ಹತ್ತಿರ ಎಷ್ಟೆಷ್ಟು ರೌಂಡ್ಸ್ ಇರುತ್ತದೆ, ಯಾರ ಜವಾಬ್ದಾರಿ ಎಷ್ಟು ಎಂಬುದು ಮೊದಲೇ ತೀರ್ಮಾನವಾಗಿರುತ್ತದೆ. ಇವೆಲ್ಲವನ್ನೂ ಲೆಕ್ಕ ಹಾಕುವಾಗ ಇವರ ಬಳಿ ಗುಂಡು ಸರಿಯಾಗಿತ್ತು. ಪೋಸ್ಟ್ ಮಾರ್ಟಂ ಆಯಿತು, ಇದರ ವರದಿ ಬಂದಾಗ, ಸತ್ತಂತ ವ್ಯಕ್ತಿಗೆ ತಗುಲಿದಂಥ ಗುಂಡು ಪೊಲೀಸ್ ಗುಂಡು ಅಲ್ಲ ' ವೆಂದು ವರದಿ ತಿಳಿಸುತ್ತದೆ. ಹಾಗಿದ್ದರೆ, ಬೇರೆ ಗುಂಡು ಬಿದ್ದಿರಬೇಕು. ತಕ್ಷಣ ಎಸ್.ಪಿ.ಯವರು ಮತ್ತೊಂದು ಸ್ಟೇಟ್‌ಮೆಂಟ್ ಮಾಡುತ್ತಾರೆ. ಏನೆಂದರೆ, 'ತಗುಲಿದಂಥ ಗುಂಡು ಪೊಲೀಸ್ ಗುಂಡಲ್ಲ, ಮೊನ್ನೆ ತಪ್ಪು ಕಲ್ಪನೆಯಿಂದ ಆ ಹೇಳಿಕೆ ಕೊಟ್ಟಿದ್ದು, ಯಾವ ವ್ಯಕ್ತಿಯನ್ನು ಇವರು ಕೊಲೆ ಮಾಡಿದರು,

ಆ ಕೋವಿ ಅವರಲ್ಲೇ ಇತ್ತು, ಅವರು ಒಬ್ಬರಿಗೊಬ್ಬರು ಪೊಲೀಸಿನವರ ಬಳಿ ಕಣ್ಣಾಮುಚ್ಚಾಲೆಯಾಟ ಆಡುವಾಗ ಅಕಸ್ಮಾತ್ ಗುಂಡು ಹಾರಿ ಆತ ಸತ್ತ' ಎಂದು. ಕೊನೆಗೆ ಉಳಿದ ಇಬ್ಬರನ್ನು ಹಿಡಿದುಕೊಂಡು ಬಂದರು. ಕೊಲೆಯಾದ ಜಾಗಕ್ಕೆ ಬಂದಾಗ ಅವರು ಎಲ್ಲಿ ಕೋವಿಯಿಂದ ಹೊಡೆದು ಬಿಸಾಡಿ ಹೋಗಿದ್ದರೋ ಅಲ್ಲಿಯೇ ಕೋವಿ ತೆಗೆದುಕೊಟ್ಟರು. ಆ ಕೋವಿಯಿಂದಲೂ ಆತ ಸಾಯಲಿಲ್ಲ. ಆತನ ಹೆಸರು 'ಕೆಂಗ' ಎಂದು. ಪ್ರಮುಖವಾಗಿರುವ ವ್ಯಕ್ತಿಯ ಕೊಲೆಯಾಯಿತಲ್ಲ, ಹುಡುಕುವಂಥ ಕಾಲದಲ್ಲಿ ಅದ್ಯಾವುದೋ ಬೇರೆ ಕೋವಿ, ಇವರು ಯಾರೋ ಬೇರೆ ಜನರು. ಪ್ರಕರಣ ಇವೊತ್ತಿಗೂ ಪತ್ತೆಯಾಗಲಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಇವೊತ್ತು ಪೊಲೀಸ್ ಇಲಾಖೆಗೆ ಸಂಪೂರ್ಣವಾಗಿ ಗೊತ್ತಿರುವ ವಿಚಾರವೇ ಪತ್ತೆಯಾಗಲಿಲ್ಲ, ಪತ್ತೆಯಾದರೂ ಅವರಿಂದ ಹುಡುಕುವುದಕ್ಕಾಗುವುದಿಲ್ಲ. ಪರಿಸ್ಥಿತಿ ಹೀಗಿರುವಾಗ 'ಇದು ಬಂದು ನಮ್ಮದು ಕಾನೂನು ಸುವ್ಯವಸ್ಥೆ' ಎಂದು ಹೇಳುವುದಾದರೆ ಇನ್ನು ನಿಮಗೆ ಇದಕ್ಕಿಂತಲೂ ಇನ್ನೇನು ಹೇಳಬೇಕೋ ನನಗಂತೂ ಅರ್ಥವಾಗುವುದಿಲ್ಲ. ಈ ವಿಚಾರದಲ್ಲಿ ಅಧಿಕಾರಿಗಳ ವಿಚಾರಣೆ ನಡೆಸಬೇಕು. ಸತ್ತುಹೋದ ವ್ಯಕ್ತಿಯ ತಮ್ಮ ನ್ಯಾಯಕ್ಕಾಗಿ ರಾಷ್ಟ್ರದ ಪ್ರಧಾನಮಂತ್ರಿಯಿಂದಿಡಿದು ಇಲ್ಲಿಯವರೆಗೆ ಯಾರ್‍ಯಾರಿಗೆ ಹೇಳಬೇಕೋ ಅವರಿಗೆಲ್ಲಾ ಹೇಳಿದ್ದಾಯಿತು, ಪತ್ರಿಕೆಗಳಿಗೂ ಸಹ ಹೇಳಿಕೆ ಕೊಟ್ಟಾಯಿತು. ಆದರೆ, ಏನೂ ಪ್ರಯೋಜನವಾಗಿಲ್ಲ. ನಾನೂ ಸಹ ಮುಖ್ಯಮಂತ್ರಿಗಳನ್ನು ಕಂಡು 'ಈ ಪ್ರಕರಣವನ್ನು ಸಿ.ಓ.ಡಿ.ಗೆ ತನಿಖೆಗಾಗಿ ವಹಿಸಿ, ಕೊನೇ ಪಕ್ಷ ಸತ್ಯಾಂಶ ಹೊರಗಡೆ ಬರಲಿ ಎಂದು ಹೇಳಿದೆ, ಕಾರಣ, ಇದರಿಂದ ಏನೇನೂ ಸಂಬಂಧವಿಲ್ಲದಿರುವಂಥ ಅಮಾಯಕ ಜನರಿಗೆ ಪೊಲೀಸರಿಂದ ಸಾಕಷ್ಟು ಹಿಂಸೆ, ತೊಂದರೆಯಾಗುತ್ತಿರುವುದರಿಂದ ನ್ಯಾಯ ಹೊರಗಡೆ ಬರಬೇಕೆಂದರೆ ವಿಚಾರಣೆಯಾಗಬೇಕು' ಎಂದರೆ ಇಲ್ಲಿಯವರೆಗೂ ಆಗಿಲ್ಲ. ಇದಾಗಿ ಆಗಲೇ 7-8 ತಿಂಗಳು ಕಳೆದುಹೋಯಿತು. ಅಂದ ಮೇಲೆ ಇದಕ್ಕೆ ಸುವ್ಯವಸ್ಥೆಯೆಂದು ಹೇಳಬೇಕೋ ಅವ್ಯವಸ್ಥೆಯೆಂದು ಹೇಳಬೇಕೋ ಗೊತ್ತಿಲ್ಲ. ಇದೇ ರೀತಿ ಹಾಸನದಲ್ಲೂ ಒಂದು ಕೊಲೆಯಾಯಿತು. ನಮ್ಮ ಜಿಲ್ಲೆಯಲ್ಲಿ ನಡೆಯುತ್ತಿರುವಂಥ ಎಲ್ಲಾ ಕೊಲೆಗಳು ಕದ್ದು ಮುಚ್ಚಿ ರಾತ್ರಿ ಹೊತ್ತು ಆಗುವುದೇ ಇಲ್ಲ, ಹಗಲು ಹೊತ್ತಿನಲ್ಲಿಯೇ ಕೊಲೆಗಳು ನಡೆಯುತ್ತಿವೆ. ಅಲ್ಲಿ ಒಂದು ಹೆಣ್ಣುಮಗಳ ಕೊಲೆಯಾಯಿತು. ಕೊಲೆಯಾಗಿ ಅದು ಪತ್ತೆಯಾಗುವಂಥ ಹಂತಕ್ಕೆ ಪ್ರಕರಣ ಬಂತು. ಪತ್ರಿಕೆಗಳಿಗೆ ಅಲ್ಲಿದ್ದಂಥ ಒಬ್ಬ ಪೊಲೀಸ್ ವರಿಷ್ಠಾಧಿಕಾರಿ ಇಂತಿಂಥವರ ಮೇಲೆ ಅನುಮಾನವಿದೆಯೆಂದು ಹೆಸರುಗಳನ್ನು ಬಿಡುಗಡೆ ಮಾಡಿದರು. ಆದರೆ, 24 ಗಂಟೆಯೊಳಗೆ ಅವರ ಎತ್ತಂಗಡಿಯಾಯಿತಲ್ಲ, ಹೇಳದೆ ಕೇಳದೆ ಆತನ ವರ್ಗವಾಯಿತು, ಆತ ಎಲ್ಲಿಗೆ ಹೋದನೆಂದು ಗೊತ್ತಿಲ್ಲ. ಹಾಸನದಲ್ಲಿನ ಪೊಲೀಸ್ ಅಧಿಕಾರಿಗಳ ಬಗ್ಗೆ ಬಹುಶಃ ಸದಸ್ಯರಾದ ಶಿವರಾಂರವರು ನಾಳೆ ಸವಿಸ್ತಾರವಾಗಿ ಪ್ರಸ್ತಾಪ ಮಾಡುವವರಿದ್ದಾರೆ. 24 ಗಂಟೆಯೊಳಗೆ ಒಬ್ಬ ಪೊಲೀಸ್ ಅಧಿಕಾರಿ ಎತ್ತಂಗಡಿಯಾಗಿ ಹೋದ, ಆ ಕೇಸ್ ಏನಾಯಿತೆಂದು ಗೊತ್ತಿಲ್ಲ. ಇದು ಪೊಲೀಸ್ ಸುವ್ಯವಸ್ಥೆ: ಪೊಲೀಸ್ ಇಲಾಖೆಯಲ್ಲಿ ಉತ್ತಮ ಅಧಿಕಾರಿಗಳಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಕರ್ನಾಟಕದಲ್ಲಿ ಪೊಲೀಸ್ ಇಲಾಖೆ ಒಂದು ಕಾಲದಲ್ಲಿ ಅತ್ಯಂತ ಪ್ರಖ್ಯಾತವಾದ, ಹೆಸರುವಾಸಿಯಾದಂಥ ಇಲಾಖೆಯಾಗಿತ್ತು. ಇವೊತ್ತು ಆ ಇಲಾಖೆಯವರು ನಿಸ್ಸಹಾಯಕರಾಗಿದ್ದಾರೆ. ಕಾರಣ, ನಿಷ್ಠೆಯಿಂದ ಕೆಲಸ ಮಾಡಿದವರಿಗೆ ಪುರಸ್ಕಾರವಿಲ್ಲ, ಯಾರಿಗೋ ಪುರಸ್ಕಾರವಿರುತ್ತದೆ. ಹೀಗಾಗಿ ಅವರಲ್ಲೂ ಕೂಡ ಒಂದು ರೀತಿಯ ಅಸಮಾಧಾನ ತಲೆಯೆತ್ತಿರುವುದು

ನಮ್ಮೆಲ್ಲರ ಗಮನಕ್ಕೆ ಬಂದಿರುವ ವಿಚಾರ. ಎರಡನೆಯದಾಗಿ, ನಮ್ಮ ಊರಿನಲ್ಲಿ ಗೋಲಿಬಾರ್ ಆಯಿತು. ಸಕಲೇಶಪುರದ ಚರಿತ್ರೆಯಲ್ಲಿ ಯಾವತ್ತೂ ಗೋಲಿಬಾರ್ ಆಗಿರಲಿಲ್ಲ, ಗೋಲಿಬಾರ್‌ಗೆ ಯಾವತ್ತೂ ಅವಕಾಶವಿಲ್ಲ. ಗೋಲಿಬಾರ್ ನಡೆಯಲು ಕಾರಣವೇನು? ಒಂದು ಬಸ್‌ಸ್ಟ್ಯಾಂಡ್ ಬಗ್ಗೆ. ಅಲ್ಲಿ ಬಸ್‌ಸ್ಟ್ಯಾಂಡ್ ಆಗಬೇಕೆನ್ನುವುದು ಸುಮಾರು 15-20 ವರ್ಷಗಳಿಂದಲೂ ಬೇಡಿಕೆ ಇದೆ. ನಾನು ಮೇಲ್ಮನೆ ಸದಸ್ಯನಾಗಿದ್ದಾಗಲೂ ಕೂಡ ಅನೇಕ ಮಂತ್ರಿಗಳಿಂದ ಈ ವಿಚಾರದಲ್ಲಿ ಆಶ್ವಾಸನೆಗಳನ್ನು ತೆಗೆದುಕೊಂಡಿದ್ದೇನೆ. 'ಈ ವಾರ ಆಗುತ್ತದೆ, ಬರುವ ವಾರ ಆಗುತ್ತದೆ, ಮುಂದಿನ ತಿಂಗಳು ಆಗುತ್ತದೆ' ಎನ್ನುವ ಸಾಕಷ್ಟು ಆಶ್ವಾಸನೆಗಳು ಸಿಕ್ಕಿದೆಯೇ ವಿನಾ ಬಸ್‌ಸ್ಟ್ಯಾಂಡ್ ಆಗಲಿಲ್ಲ. ಆ ಊರಿನ ಅನೇಕರಿಗೆ ಗೊತ್ತಿರುವುದೇ ಆಗಿದೆ. ಸುತ್ತಲೂ ನದಿ ಇದ್ದು, ಮಂಗಳೂರು-ಬೆಂಗಳೂರು ಹೈವೇ ಇದೆ. ಜಾಗ ಇಲ್ಲದಿರುವ ಊರೊಳಗೆ ಪ್ರತಿನಿತ್ಯ ಸಾವಿರಾರು ಬಸ್ಸುಗಳು ಓಡಾಡುತ್ತವೆ. ಅಲ್ಲೊಂದು ಬಸ್‌ಸ್ಟ್ಯಾಂಡಿನ ಅವಶ್ಯಕತೆಯಿದೆಯೆಂದು ಇಡೀ ಊರಿನ ಜನರು ಹತ್ತಾರು ವರ್ಷಗಳಿಂದ ಬೇಡಿಕೆಯಿಟ್ಟು ಕೇಳುತ್ತಿದ್ದರೂ ಬೇಡಿಕೆ ಈಡೇರಲಿಲ್ಲ. ಆ ಬಸ್‌ಸ್ಟ್ಯಾಂಡಿನಲ್ಲಿ ವರ್ಷಕ್ಕೆ ಒಂದೆರಡು ಅಪಘಾತಗಳು ನಡೆಯುತ್ತವೆ. ಕಳೆದ ವರ್ಷ ಗೌರಿ ಹಬ್ಬದ ಮಾರನೇ ದಿವಸ ಕೊಡಗಿನಿಂದ ಬಸ್ಸಿನಲ್ಲಿ ಸುಮಾರು ಎಪ್ಪತ್ತು ವರ್ಷಗಳಿಗೂ ಮೇಲ್ಪಟ್ಟ ವಯೋವೃದ್ಧ ತಂದೆ-ತಾಯಿ ಮಗಳ ಮನೆಗೆಂದು ಬಂದಿದ್ದಾರೆ. ಅವರು ಬಸ್ಸಿನಿಂದ ಇಳಿದು ಹೋಗುವಾಗ ಮತ್ತೊಂದು ಬಸ್ಸು ಅವರ ಮೇಲೆರಗಿದ ಪರಿಣಾಮ ಆತ ಸತ್ತು ಹೋದರು. ಅವೊತ್ತು ವಿಪರೀತ ಜನರು ಸೇರಿದಂಥ ಸಂದರ್ಭ, ದೊಡ್ಡ ಗೊಂದಲವಾಯಿತು. ಡಿವಿಜನಲ್ ಕಮೀಷನರ್, ಡೆಪ್ಯುಟಿ ಕಮೀಷನರ್ ಮತ್ತು ಎಲ್ಲಾ ವರಿಷ್ಠಾಧಿಕಾರಿಗಳು ಸಹ ಅಲ್ಲಿಯೇ ಇದ್ದಾರೆ. ಬಸ್ಸಿನ ಮೇಲೆ ಜನರಿಗೆ ಆಕ್ರೋಶ ಬಂತು. ಅಲ್ಲೊಂದು ಬಸ್‌ಸ್ಟ್ಯಾಂಡನ್ನು ತೆರೆಯಬೇಕೆಂದು ನಿರ್ಧಾರ ತೆಗೆದುಕೊಂಡರು, ಅದು ಬಿಟ್ಟರೆ ಬೇರೇನೂ ಅವರಲ್ಲಿ ಇಲ್ಲ. ಜನರು ಬಸ್‌ಸ್ಟ್ಯಾಂಡ್ನಲ್ಲಿದ್ದ ಸುಮಾರು 30-40 ಚಿಲ್ಲರೆ ಅಂಗಡಿಗಳಿಗೆ ಕೈ ಹಾಕಲಿಲ್ಲ, ಎಲ್ಲಾ ಅಂಗಡಿಗಳಿಗೂ ಅವರವರೇ ಬಾಗಿಲು ಹಾಕಿ ಜನರೊಂದಿಗೆ ಸೇರಿಕೊಂಡು, ಇಲ್ಲೊಂದು ಬಸ್‌ಸ್ಟ್ಯಾಂಡನ್ನು ತೆರೆಯಬೇಕೆಂದು ಅವರಿಂದ ಹಠಬಂತು. ಇದಕ್ಕೆ ಕೆಲವು ಪೊಲೀಸರು ಅಡ್ಡ ಬಂದರು, ಅವರಿಗೂ ಅವಕಾಶ ಕೊಡಲಿಲ್ಲ. ಇದೇ ಕಾರಣವಿಟ್ಟುಕೊಂಡು ಬಂದಂಥ ಎಸ್.ಪಿ. ಅಥವಾ ಅವರ ಮೇಲಧಿಕಾರಿಗಳು ಏಕಾಏಕಿ ಹೇಳಲಿಲ್ಲ, ಕೇಳಲಿಲ್ಲ, ಅಲ್ಲದೆ, ಎಲ್ಲಾ ಹಿರಿಯ ಅಧಿಕಾರಿಗಳು ನಗರದಲ್ಲಿದ್ದರೂ ಕೂಡ ಗೋಲಿಬಾರ್ ಆಯಿತು. ಗೋಲಿಬಾರ್ ಮಾಡಿದ ಕಾರಣದಿಂದಾಗಿ ಯಾರೋ ಒಬ್ಬ ಊಟ ಮಾಡಿ ಹೊರಗಡೆ ಬರುತ್ತಿದ್ದವನು ಸತ್ತು ಹೋದ. ಆದರೆ ಗೋಲೀಬಾರ್ ಆದ ನಂತರ ಅಲ್ಲಿ ಗಲಭೆಯಾಯಿತು, ಜನರು ಚದುರಿಹೋದರು, ಊರಿನ ಹೊರಗೆ ಬರುತ್ತಿದ್ದಂಥ ಲಾರಿ, ಬಸ್ಸುಗಳಿಗೆ ಬೆಂಕಿ ಇಟ್ಟರು. ಅಲ್ಲೀವರೆಗೆ ಗೊಂದಲವಾಗಿರಲಿಲ್ಲ. ಆದರೆ ಲೂಟಿ ಮಾಡಬೇಕು, ದರೋಡೆ ಮಾಡಬೇಕೆಂದು ಜನರ ಉದ್ದೇಶವಾಗಿದ್ದರೆ ಸಂಪೂರ್ಣವಾಗಿ ಸಕಲೇಶಪುರವನ್ನು ಲೂಟಿ ಮಾಡಬಹುದಾದ ಅವಕಾಶವಿತ್ತು, ಅಷ್ಟು ಜನರು ಸೇರಿದ್ದರು. ಆದರೆ ಒಂದೇ ಒಂದು ಸಣ್ಣ ಅಂಗಡಿಯನ್ನು ಸಹ ನಾಶಮಾಡದಿರತಕ್ಕ ಆ ಗಲಭೆಯಲ್ಲಿ, ಯಾರು ಕಾರ್ಯಕ್ರಮ ರೂಪಿಸಿದ್ದರು, ಯಾರು ಪೊಲೀಸ್‌ನವರ ಕಣ್ಣಿಗೆ ಗುರುತಿದೆ, ಕಣ್ಣಾರೆ ಕಂಡಿರುವ ಎಲ್ಲರನ್ನೂ ಬಿಟ್ಟು ಅಮಾಯಕ ಜನರಮೇಲೆ, ಬಿ.ಜೆ.ಪಿ. ಮತ್ತು

ಕಾಂಗ್ರೆಸ್ ಕಾರ್ಯಕರ್ತರು ಸುಮಾರು ಮುನ್ನೂರು ಜನರನ್ನು ಹಿಡಿದು ಕೇಸನ್ನು ಹಾಕಿದ್ದಾರೆ. ಇದು ನ್ಯಾಯವೇ? ಪ್ರಜಾಪ್ರಭುತ್ವದಲ್ಲಿ ಚುನಾವಣೆ ಅನಿವಾರ್ಯ. ಯಾವುದೋ ಪಕ್ಷ ಗೆಲ್ಲಬಹುದು, ಯಾವುದೋ ಪಕ್ಷ ಸೋಲಬಹುದು. ಅದು ಬೇರೆ ವಿಚಾರ. ಆದರೆ ಚುನಾವಣೆಯಾದ ಮೇಲೆ ನಾವೆಲ್ಲ ಈ ರಾಜ್ಯದ ಶಾಸಕರಾಗುತ್ತೇವೆ, ಮಂತ್ರಿಗಳಾಗುತ್ತೇವೆ. ನಾವು ಮಾಡತಕ್ಕ ಕಾರ್ಯಕ್ರಮ ಏಕರೂಪತೆಯಲ್ಲಿರಬೇಕಾಗುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾದ ಸ್ಥಿತಿಯನ್ನು ನನ್ನ ಬಹುತೇಕ ರಾಜಕೀಯ ಜೀವನದಲ್ಲಿ ಕಾಣಲಿಲ್ಲ. ಮಾನ್ಯ ಹನುಮಂತಯ್ಯನವರ ಕಾಲದಿಂದಲೂ ರಾಜಕೀಯವನ್ನು ನೋಡಿಕೊಂಡು ಬಂದಿರತಕ್ಕ ನಾನು ಇಂಥ ಪರಿಸ್ಥಿತಿಯನ್ನು ಎಂದೂ ನೋಡಿರಲಿಲ್ಲ. ಜನತಾದಳದ ಸಾಮಾನ್ಯ ಕಾರ್ಯಕರ್ತ ಕೂಡ ಇಂದು ಮಂತ್ರಿಯಾಗಿದ್ದಾನೆ. ಕಾಂಗ್ರೆಸ್‌ನವರ ಕಾಲದಲ್ಲೂ ಹಿಂಸೆ ಮಾಡುತ್ತಿದ್ದರು ಎಂಬುದನ್ನು ಕೇಳಿದ್ದೆವು, ಆದರೆ ಈ ಮಟ್ಟಕ್ಕೆ ಎಂದೂ ಇಳಿದಿರಲಿಲ್ಲ. ಪ್ರತಿಯೊಬ್ಬ ಅಧಿಕಾರಿ ಮೇಲೆ ಸವಾರಿ ಮಾಡತಕ್ಕ ವ್ಯವಸ್ಥೆ ನಡೆಯುತ್ತಿದೆ.

ತಾವು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ನನ್ನ ಪಕ್ಕದಲ್ಲಿ ಕುಳಿತಿರುವ ಮಾನ್ಯ ವೈ.ರಾಮಕೃಷ್ಣರವರು ಆ ವರ್ಗದ ನಾಯಕರು, ಮತ್ತು ತಜ್ಞರು ಸಹ. ನನ್ನದೇ ಮಾತಿನಲ್ಲಿ ಹೇಳುವುದಾದರೆ ಇದು ರಾಜಕಾರಣಿಗಳೆಲ್ಲರಿಗೆ ಹಸನಾದ ಹಸಿರು ಹುಲ್ಲುಗಾವಲು. ಈ ಇಲಾಖೆಯಲ್ಲಿ ಯಾರು ಎಲ್ಲಿ ಬೇಕಾದರು ಹೋಗಿ ಮೇಯಬಹುದು. ಅಲ್ಲೇ ಇಲ್ಲೇ ಮೇಯಬೇಕೆಂದಿಲ್ಲ. ಯಾರು ಎಲ್ಲಿಬೇಕಾದರು ಹೋಗಿ ಎಷ್ಟು ಬೇಕಾದರು ಲೂಟಿ ಮಾಡಬಹುದು. ನಿಮಗೆ ಹೇಳುವವರು ಕೇಳುವವರು ಇಲ್ಲ. ಆ ರೀತಿಯಾದ ಇಲಾಖೆಯನ್ನು ಮಾಡಿಕೊಂಡು ಆ ವರ್ಗದವರ ಹೆಸರಿನಲ್ಲಿ ಲೂಟಿಯಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ಆ ವರ್ಗದ ಮಕ್ಕಳ ಹಾಸ್ಟೆಲ್ ಕಟ್ಟಡದ ಕೆಲಸ ನಡೆಯುತ್ತಿತ್ತು. ನಾನು ಒಂದು ಸಂದರ್ಭದಲ್ಲಿ ಅಲ್ಲಿಗೆ ಹೋಗಿದ್ದಾಗ, ಅದನ್ನು ಪರಿಶೀಲನೆ ಮಾಡೋಣವೆಂದು ಮೇಲೆ ಹತ್ತಿದೆ. ಈ ಕಟ್ಟಡ ನಿಂತಿರಬೇಕಾದರೆ ಮುಖ್ಯವಾದ ಪಿಲ್ಲರ್‌ಗಳು ಮತ್ತು ಮೇಲೆ ಇರತಕ್ಕ ಬೀಮ್ಸ್. ಒಂದು ಬೀಮ್‌ನ್ನು ಹಾಕಬೇಕಾದರೆ ಇಂಜಿನಿಯರ್ ಕಬ್ಬಿಣದ ರಾಡ್ ಇಷ್ಟು ದಪ್ಪ ಇರಬೇಕು, ಇಷ್ಟು ಬೆಂಡ್ ಆಗಿರಬೇಕೆಂದು ಲೆಕ್ಕವನ್ನು ಕೊಟ್ಟಿರುತ್ತಾರೆ. ಕೇವಲ ಕ್ವಾರ್ಟರ್ ಇಂಚ್ ದಪ್ಪದ, ಬೆಂಡೇ ಮಾಡದಿರುವ ರಾಡಿನಲ್ಲಿ ಬಾಕ್ಸ್‌ನ್ನು ಮಾಡಿ ಬೀಮ್ ಹಾಕುತ್ತಿದ್ದಾರೆಂದರೆ ಆ ಹಾಸ್ಟೆಲ್‌ನಲ್ಲಿರತಕ್ಕ ಪರಿಶಿಷ್ಟ ಜಾತಿ ಮತ್ತು ವರ್ಗದ ಮಕ್ಕಳು ಎಷ್ಟು ದಿವಸ ಬದುಕಬೇಕೆಂದು ಇವರು ತೀರ್ಮಾನ ಮಾಡಿದ್ದಾರೆ? ಇಂಥ ಕಳಪೆ ಕೆಲಸವನ್ನು ಮಾಡುವುದೆ? ಹಣವನ್ನು ಲೂಟಿ ಮಾಡಲು ಒಂದು ಲೆಕ್ಕ ಬೇಕು. ಗುತ್ತಿಗೆ ಕೆಲಸವನ್ನು ಮಾಡುವುದು ಲಾಭ ಮಾಡುವುದಕೋಸ್ಕರ. ನಮ್ಮ ಜೀವನವೂ ನಡೆಯಬೇಕು. ಆದರೆ ಲೂಟಿ ಮಾಡುವುದೇ ದೊಡ್ಡ ಅಂಶವಾದರೆ ಮುಂದಿನ ಭವಿಷ್ಯದ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ಜಿಲ್ಲಾ ಪರಿಷತ್ ಮತ್ತು ತಾಲ್ಲೂಕು ಪಂಚಾಯಿತಿಯವರು ಕಟ್ಟುತ್ತಿರುವ ಶಾಲಾ ಕಟ್ಟಡವಿರಬಹುದು, ಹಾಸ್ಟೆಲ್‌ಗಳಿರಬಹುದು, ಇನ್ನಿತರೆ ಕಟ್ಟಡಗಳು ಇರಬಹುದು, ಅವುಗಳೆಲ್ಲವೂ ಸಂಪೂರ್ಣವಾಗಿ ಹಾಳಾಗಿದೆ. ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಾದ ಉದಾಸಿಯವರು ಇದ್ದಾರೆ. ಅವರಿಗೂ ಸಹ ಇದು ಸ್ವಲ್ಪ ಭಾಗ ಸೇರಿರುತ್ತದೆ. ತಮ್ಮ ಇಲಾಖೆಯಿಂದ ನಮ್ಮ ಕ್ಷೇತ್ರದಲ್ಲಿ

ನಾಲ್ಕೈದು ರಸ್ತೆಗಳು ಬರುತ್ತವೆ. ಬಹುತೇಕ ಕೆಲಸವು ಜಿಲ್ಲಾಪಂಚಾಯಿತಿಯಲ್ಲಿ ನಡೆಯುತ್ತಿದೆ. ಗುತ್ತಿಗೆಯನ್ನು ಜಿಲ್ಲಾಪಂಚಾಯಿತಿಯ, ಗ್ರಾಮ ಪಂಚಾಯಿತಿಯ ಸದಸ್ಯರಿಗೆ ಮಾತ್ರ ಕೊಡಬೇಡಿ ಎಂದು ಜಿಲ್ಲಾಪಂಚಾಯಿತಿಯ ಸಭೆಯಲ್ಲಿ ನಾನು ಹೇಳಿದ್ದೇನೆ. ಕಾರಣ ಕಳಪೆ ಕೆಲಸವನ್ನು ಅವರು ಮಾಡಿದರೆ ಅವರನ್ನು ಕೇಳುವ ಶಕ್ತಿ ಅಧಿಕಾರಿಗೆ ಇರುವುದಿಲ್ಲ. ಕೈ ಮುಗಿದು ಸ್ವಾಮಿ ಕೆಲಸ ಸ್ವಲ್ಪ ಕೆಟ್ಟು ಹೋಗಿದೆ, ಅದನ್ನು ಸರಿಮಾಡಿಕೊಳ್ಳಿ ಎಂದು ಮಾತ್ರ ಅಧಿಕಾರಿ ಹೇಳುತ್ತಾನೆ. ಆದರೆ ನೀವೇಕೆ ಆ ರೀತಿ ಕೆಲಸ ಮಾಡಿದ್ದೀರಿ ನಿಮ್ಮ ಗುತ್ತಿಗೆಯನ್ನು ರದ್ದು ಮಾಡುತ್ತೇನೆ ಎಂದು ಹೇಳತಕ್ಕ ಶಕ್ತಿ ಅಧಿಕಾರಿಗಳಿಗೆ ಬರುವುದಿಲ್ಲ. ನಾನು ಮೇಲೆ ತಿಳಿಸಿರುವ ಹಾಸ್ಟೆಲ್ ಕೆಲಸ ಅರ್ಧಕ್ಕೆ ನಿಂತಿದೆ, ಮತ್ತೆ ಅರ್ಧ ರಿಪೇರಿ ಮಾಡಿದ್ದಾರೆ. ಅದಕ್ಕೆ ಆಯಸ್ಸು ಸಹ ಬಹಳ ಕಡಿಮೆ ಇದೆ. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರು ಸಹ ಸಕಲೇಶಪುರದಲ್ಲಿ ಸರ್ಕಾರ ಒಂದೇ ಒಂದು ಕೆಲಸ ಮಾಡಲಿಲ್ಲ. ಒಂದೇ ಒಂದು ಹೊಸ ಕಟ್ಟಡ ಅಲ್ಲಿ ಕಟ್ಟಿಲ್ಲ. ಅಲ್ಲಿರುವ ಎಲ್ಲಾ ಕಟ್ಟಡಗಳು ದಿವಾನ್ ಪೂರ್ಣಯ್ಯನವರ, ಮಿರ್ಜಾ ಸಾಹೇಬರ ಕಾಲದ್ದವು. ಇವತ್ತಿಗೂ ನಾವು ಉಪಯೋಗ ಮಾಡುತ್ತಿದ್ದೇವೆ. ಅವು ಇನ್ನೂ ನೂರು ವರ್ಷ ಬಾಳತಕ್ಕ ಕಟ್ಟಡಗಳಾಗಿವೆ. ಮೊನ್ನೆ ನಾನು ಯಾವುದೋ ಒಂದು ಪಂಚಾಯಿತಿ ಕಟ್ಟಡಕ್ಕೆ ಹೋಗಿದ್ದೆ, ಅದರಲ್ಲಿ 1882 ಎಂದು ನಮೂದಿಸಿದ್ದರು. ನಾನು ಎಲ್ಲೋ ತಪ್ಪಾಗಿ ಹಾಕಿದ್ದಾರೆಂದು ಕೇಳಿದೆ, ಇಲ್ಲ ಅದು ಆಗಿನ ಕಾಲದ್ದೇ ಎಂದು ಹೇಳಿದರು. ಆಗಿನ ಕಟ್ಟಡಗಳು ಇನ್ನೂ ಅಷ್ಟೊಂದು ಚೆನ್ನಾಗಿವೆ ಮತ್ತು ಸುರಕ್ಷಿತವಾಗಿವೆ. ಆದರೆ ಇಂದಿನ ಕಟ್ಟಡಗಳು ಒಳಕ್ಕೆ ಹೋಗುವ ಮೊದಲೇ ಬಿದ್ದು ಹೋಗುತ್ತವೆ. ತಾವು ಎಷ್ಟೋ ಲಕ್ಷ ಶಾಲೆಗಳನ್ನು ಕಟ್ಟಿಸಿದ್ದೀರಿ, ಎಷ್ಟೋ ಲಕ್ಷ ಮನೆಗಳನ್ನು ಕಟ್ಟಿಸಿದ್ದೀರಿ, ಆದರೆ ಅದರಲ್ಲಿ ಎಷ್ಟು ಉಳಿದಿದೆ ಎಂಬ ಬಗ್ಗೆ ಲೆಕ್ಕ ಕೊಡುತ್ತೀರೋ? ಕಾರಣ ಅಲ್ಲಿ ಇರುವ ಎಲ್ಲಾ ಗುತ್ತಿಗೆದಾರರು ಅಲ್ಲಿನ ಅಧ್ಯಕ್ಷರು, ಸದಸ್ಯರು, ಅವರ ಸಂಬಂಧಿಕರೇ ಆಗಿದ್ದಾರೆ. ಗುತ್ತಿಗೆದಾರರಿಗಾಗಿಯೇ ಈ ಕಾರ್ಯಕ್ರಮ ರೂಪಿಸಿದ್ದಾರೆ ಎನ್ನುವ ಭಾವನೆ ಬರುವ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಇದು ಆಗಬಾರದು.

ಇನ್ನು ರೈತ ತುಂಬಾ ಕಷ್ಟ ಜೀವಿ, ಈ ದೇಶದ ಬೆನ್ನೆಲುಬು ಎಂದು ನಾವು ಭಾಷಣ ಮಾಡುವಾಗ ಪ್ರಾರಂಭದಲ್ಲೆಲ್ಲಾ ಆ ರೀತಿ ಹೇಳಿಕೊಂಡು ಬರುತ್ತೇವೆ. ನಮ್ಮ ಭಾಗದ ಪ್ಲಾಂಟೇಷನ್‌ನಲ್ಲಿ ಒಂದು ತೊಂದರೆ ಇದೆ. ನಮ್ಮ ಕಂದಾಯ ಮತ್ತು ಅರಣ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಅರಣ್ಯ ಇಲಾಖೆಯಲ್ಲಿ ಮರಗಳನ್ನು ಬೆಳೆಸುವುದಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಇಂದು ಖರ್ಚು ಮಾಡುತ್ತಿದ್ದಾರೆ. ಸಾಮಾಜಿಕ ಅರಣ್ಯದಲ್ಲಿ ಹಣ ಹೆಚ್ಚು ಖರ್ಚಾದರೂ ಸಹ ತಕ್ಕಮಟ್ಟಿಗೆ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಪ್ರತಿಯೊಂದು ಕಾಫಿ ಮತ್ತು ಏಲಕ್ಕಿ ತೋಟದಲ್ಲಿ ಇವರು ಖರ್ಚು ಮಾಡುವ ಮೂರು ಪಟ್ಟು ಹಣವನ್ನು ಖರ್ಚು ಮಾಡಿ ನಾವು ಮರಗಳನ್ನು ಬೆಳೆಯುತ್ತಿದ್ದೇವೆ. ಕಾಫಿ ಮತ್ತು ಏಲಕ್ಕಿಗೆ ಮರ ಅತ್ಯವಶ್ಯಕ. ಮರವನ್ನು ಬೆಳೆಯಲೇಬೇಕು, ಹಾಳು ಮಾಡುವುದಕ್ಕಾಗುವುದಿಲ್ಲ. ಆದರೆ ಇಷ್ಟು ಮರ ಇರಬೇಕು, ಇಷ್ಟು ಮರ ಹೋಗಬೇಕೆಂದು ಒಂದು ಲಿಮಿಟ್ ಇರುತ್ತದೆ. ಇವತ್ತು ಮರವನ್ನು ಹಾಕುವವರು, ಬೆಳೆಸುವವರು, ಸಾಕುವವರು ನಾವು, ಆದರೆ ಅದನ್ನು ಮುಟ್ಟಲು ನಮಗೆ ಅಧಿಕಾರವಿಲ್ಲ. ಆದರೆ ಅರಣ್ಯ ಇಲಾಖೆಯವರು ಮರವನ್ನು ಹಾಕುತ್ತಾರೆ, ಅದನ್ನು ಹಾಕಿ ಮೂರು ವರ್ಷ

ಮಾತ್ರ ನೋಡಿಕೊಳ್ಳುತ್ತಾರೆ, ಅನಂತರ ಅದು ಬೆಳೆಯಲಿ ಅಥವಾ ಬಿಡಲಿ ಬಿಟ್ಟುಬಿಡುತ್ತಾರೆ. ಆದರೆ ನಾವು ನೂರಾರು ವರ್ಷಗಳಿಂದ ಸಾಕಿರುವ ಮರವನ್ನು ಉಪಯೋಗ ಮಾಡಿಕೊಳ್ಳಬೇಕೆಂದರೆ ಅವಕಾಶವಿಲ್ಲ. ಆದ್ದರಿಂದ ಇದರ ಬಗ್ಗೆ ಒಂದು ಕಾನೂನನ್ನು ಮಾಡಬೇಕೆಂದು ಅರಣ್ಯ ಮತ್ತು ಕಂದಾಯ ಸಚಿವರುಗಳಲ್ಲಿ ಕೇಳಿಕೊಳ್ಳುತ್ತೇನೆ. ಉದಾಹರಣೆಗೆ, ಬೀಟೆ ಮರ, ಒಂದು ಬೀಟೆ ಮರವು ಸುಮಾರು ಒಂದೂವರೆ ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ನನ್ನ ತೋಟದಲ್ಲಿರುವ ಆ ಬೀಟೆ ಮರವನ್ನು ನಾನು ಮುಟ್ಟುವಂತಿಲ್ಲ. ನಮ್ಮ ಅಜ್ಜನ ಕಾಲದಿಂದಲೂ ಅದನ್ನು ಹಾಕಿ ಸಾಕಿಕೊಂಡು ಬಂದಿದ್ದೇವೆ. ಆದರೆ ಅದನ್ನು ಮುಟ್ಟಲು ನಮಗೆ ಅಧಿಕಾರವಿಲ್ಲ. ಮುಟ್ಟಲು ಅನುಮತಿ ಕೇಳಿದರೆ ಇದು ಸರ್ಕಾರದ ಸಾಮಗ್ರಿ ಎಂದು ಅನುಮತಿ ಕೊಡುವುದಿಲ್ಲ. ಹಿಂದೆ ಗಂಧದ ಮರಕ್ಕೆ ಈ ವ್ಯವಸ್ಥೆ ಇತ್ತು ಅದೇ ಬೀಟೆ ಮರದ ಬಗ್ಗೆ ಯಾರಾದರು ಕಣ್ಣಾಕಿದರೆ ಬೆಳಿಗ್ಗೆಯಾಗುವಷ್ಟರಲ್ಲಿ ಅದನ್ನು ತೆಗೆದುಕೊಂಡು ಹೋಗಿಬಿಡುತ್ತಾನೆ, ಆ ಮರ ಇದ್ದದ್ದೇ ಗೊತ್ತಾಗುವುದಿಲ್ಲ. ಅವನನ್ನು ಯಾರೂ ಕೇಳುವುದಿಲ್ಲ. ಅರಣ್ಯ ಇಲಾಖೆಯವರಾಗಲಿ, ಕಂದಾಯ ಇಲಾಖೆಯವರಾಗಲಿ ಅವನನ್ನು ಕೇಳುವುದಿಲ್ಲ. ಏಕೆಂದರೆ ಅವರ ಕೈಗೆ ಅವನು ಸಿಗುವುದಿಲ್ಲ. ಆದ್ದರಿಂದ ಈ ಮರಗಳನ್ನು ಕಾಪಾಡುವವನಿಗೂ ಲಾಭವಾಗಬೇಕು, ಸರ್ಕಾರಕ್ಕೂ ಲಾಭವಾಗಬೇಕು ಆ ನಿಟ್ಟಿನಲ್ಲಿ ಸರ್ಕಾರಕ್ಕೆ ಒಂದು ಒಳ್ಳೆಯ ಸಲಹೆಯನ್ನು ಕೊಡಬಯಸುತ್ತೇನೆ. ಹಿಂದೆ ಗಂಧದ ಮರವು ಸರ್ಕಾರದ ಸಾಮಗ್ರಿ, ಯಾರೂ ಅದನ್ನು ಮುಟ್ಟುವಂತಿಲ್ಲ ಎಂದು ಕಾನೂನು ಇತ್ತು. ಆದ್ದರಿಂದ ಗಂಧ ಬರುವುದೇ ಕಷ್ಟವಾಗಿತ್ತು. ಕೊನೆಗೆ ಸರ್ಕಾರ ಒಂದು ತೀರ್ಮಾನಕ್ಕೆ ಬಂತು, ಗಂಧದ ಮರಗಳೇನಿದೆ ಅದನ್ನು ಬೆಳೆದವರೇ ಕಿತ್ತುಕೊಂಡು ಬಂದು ಕೊಟ್ಟರೆ ಅರ್ಧ ಭಾಗ ಹಣವನ್ನು ಬೆಳೆದವನಿಗೆ, ಅರ್ಧ ಭಾಗ ಸರ್ಕಾರಕ್ಕೆ ಎಂದು ಮಾಡಿದರು. ಆಗ ಗಂಧದ ಮರಗಳನ್ನು ಪ್ರತಿಯೊಬ್ಬರೂ ಕಾಪಾಡಲು ಪ್ರಾರಂಭ ಮಾಡಿದರು. ಗಂಧವನ್ನು ಬೆಳೆದವರು ತಕ್ಷಣವೇ ಕಿತ್ತುಕೊಂಡು ಹೋಗಿ ಸರ್ಕಾರಕ್ಕೆ ಕೊಟ್ಟು ಹಣವನ್ನು ತೆಗೆದುಕೊಳ್ಳುತ್ತಾರೆ, ಮತ್ತು ಗಂಧದ ಮರಗಳನ್ನೂ ರಕ್ಷಿಸುತ್ತಾರೆ. ಇಲ್ಲದಿದ್ದರೆ ಗಂಧದ ಮರವನ್ನು ಸಾಕಿದ್ದಾಗ ಅದನ್ನು ಬೇರೆ ಯಾರೇ ಕಿತ್ತುಕೊಂಡು ಹೋಗಿದ್ದರೂ ಬೆಳೆಸಿದವನನ್ನೇ ಇಲ್ಲಿ ಗಂಧದ ಮರವಿತ್ತು, ಏನಾಯಿತು ಎಂದು ಕೇಳುತ್ತಿದ್ದರು. ಆದ್ದರಿಂದ ಈ ತೊಂದರೆಯೇ ಬೇಡ ಎಂದು ಗಂಧದ ಮರಗಳನ್ನು ಬೆಳೆಸಲು ಯಾರೂ ಮುಂದೆ ಬರುತ್ತಿರಲಿಲ್ಲ. ಅದನ್ನು ಕಿತ್ತುಹಾಕಿಬಿಡುತ್ತಿದ್ದರು.

ಶ್ರೀ **ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು)** : ಈಗ ಗಂಧದ ಮರವನ್ನು ಬೆಳೆದು ತಂದವನಿಗೆ 75 ಪರ್‌ಸೆಂಟ್ ಬೋನಸ್‌ನ್ನು ಕೊಡುತ್ತೇವೆ.

ಶ್ರೀ ಬಿ.ಬಿ.ಶಿವಪ್ಪ : ಈಗ ಅದನ್ನು ಜಾಸ್ತಿ ಮಾಡಬಹುದು. ಹಿಂದೆ ಗಂಧದ ಮರಗಳನ್ನು ಮಾಡುತ್ತಿದ್ದಂತೆ ಇಂದು ಬೀಟೆ ಸಸಿಗಳನ್ನು ತೆಗೆದುಬಿಡುತ್ತಿದ್ದಾರೆ. ಏಕೆಂದರೆ ಅದರಿಂದ ನಮಗೆ ಉತ್ಪತ್ತಿ ಇಲ್ಲ ಎಂದು.

ಶ್ರೀ **ಗುರುಪಾದಪ್ಪ ನಾಗಮಾರಪಲ್ಲಿ** : ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರವೂ ಇದೆ. ಗಂಧದ ಮರಕ್ಕೆ 90 ಪರ್‌ಸೆಂಟ್ ಬೋನಸ್ ಕೊಡಬೇಕು ಎಂಬ ಬಗ್ಗೆ ವಿಶೇಷವಾದ ಅಮೆಂಡ್‌ಮೆಂಟ್ ತರುತ್ತಿದ್ದೇವೆ. ಅದೇ ರೀತಿ ಬೀಟೆ ಮರಕ್ಕೂ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ವಿಚಾರ ಮಾಡಿದ್ದೇವೆ.

ಶ್ರೀ ಬಿ.ಬಿ.ಶಿವಪ್ಪ : ಮಾನ್ಯ ಉಪಾಧ್ಯಕ್ಷರೇ, ಕೆಲವು ಸಂದರ್ಭಗಳಲ್ಲಿ ಕಳ್ಳ ಮರವನ್ನು ಕದ್ದುಕೊಂಡು ಹೋಗಿರುತ್ತಾನೆ. ಆಗ ಆ ಭೂಮಿಯ ಮಾಲೀಕನ ಮೇಲೆ ಅಫೆನ್ಸ್ ಎಂದು ಹೇಳಿ ಕೇಸ್ ಬುಕ್ ಮಾಡುವ ಅವಕಾಶ ಇದೆಯೇ? ಉದಾಹರಣೆಗೆ ನಮ್ಮ ಹೊಲದಲ್ಲಿ ಬೀಟೆ ಮರ ಬೆಳೆದಿರುತ್ತೇವೆ. ನಾವು ಅದನ್ನು ಕಡಿಯುವುದಕ್ಕೆ ಹೋಗಿರುವುದಿಲ್ಲ, ಅದನ್ನು ಯಾರೋ ಕದ್ದುಕೊಂಡು ಹೋಗಿರುತ್ತಾರೆ. ಆಗ ನಿಮ್ಮ ಇಲಾಖೆಯವರು ಬಂದು ಇಲ್ಲಿ ಬೀಟೆ ಮರ ಇತ್ತು, ಅದನ್ನು ನೀವೇ ಕದ್ದುಕೊಂಡು ಹೋಗಿದ್ದೀರಿ ಎಂದು ಹೇಳಿ ಕೇಸ್ ಬುಕ್ ಮಾಡುವ ಅವಕಾಶ ಇದೆಯೇ? ಏಕೆಂದರೆ ವಿನಾಕಾರಣ ಇನ್ನೊಸೆಂಟ್ ಪೀಪಲ್‌ಗೆ ಇದರಿಂದ ತೊಂದರೆಯಾಗಬಾರದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅವಕಾಶವಿದೆ. ಆದರೆ ಇದರ ಬಗ್ಗೆ ವಿಚಾರಣೆ ಮಾಡುತ್ತಿದ್ದೇವೆ. ರೈತರಿಗೆ ತೊಂದರೆ ಆಗದ ರೀತಿಯಲ್ಲಿ ನಾವು ವಿಚಾರಣೆಯನ್ನು ಮಾಡುತ್ತೇವೆ.

ಉಪಾಧ್ಯಕ್ಷರು : ಸಗೀರ್ ಅಹಮದ್‌ರವರೇ, ನೀವು ಮಾತನಾಡಿ.

ಶ್ರೀ ಸಿ.ಆರ್.ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ನಾನು ಸರ್ಕಾರಕ್ಕೆ ಸಲಹೆಯ ರೂಪದಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ, ಸರ್ಕಾರದವರು ಇದನ್ನು ಸಲಹೆಯನ್ನಾಗಿ ತೆಗೆದುಕೊಳ್ಳಲಿ, ಇಲ್ಲದಿದ್ದರೆ ಸನ್ಮಾನ್ಯ ಶಿವಪ್ಪನವರು ಹೇಳಿದ ರೀತಿಯಲ್ಲಿ ತಿಳಿದುಕೊಳ್ಳಲಿ. ಹಿಂದಿನ ದಿನಗಳಲ್ಲಿ ಒಂದು ಸಾಲು ಮರ ಇರಲಿ, ಖಾಸಗಿ ಜಮೀನಿನಲ್ಲಿ ಬೀಟೆ ಮರ ಇರಲಿ, ನಂದಿ ಮರ ಇರಲಿ ಅಥವಾ ಬೇರೆ ಮರಗಳನ್ನು ಬೆಳೆಸಿರಲಿ, ಇಷ್ಟೇ ಮರಗಳನ್ನು ಇಂಥ ಜಮೀನಿನಲ್ಲಿ ಬೆಳೆಸಿದ್ದಾರೆ ಎಂಬುದನ್ನು ಗುರುತು ಹಚ್ಚುವ ಸಲುವಾಗಿ ಒಂದು ಕಾರ್ಯಕ್ರಮವಿತ್ತು. ಆದುದರಿಂದ ನಾನು ಹೇಳುತ್ತಿದ್ದೇನೆ ಇವೊತ್ತು ಅರಣ್ಯ ಇಲಾಖೆಯಲ್ಲಿಯೇ ಅವರು ಎಷ್ಟು ಮರಗಳನ್ನು ಬೆಳೆಸಿದ್ದಾರೆ ಎಂಬ ಬಗ್ಗೆ ಅವರ ಹತ್ತಿರ ಮಾಹಿತಿ ಇಲ್ಲ. ಎಷ್ಟು ಹೆಕ್ಟೇರ್‌ನಲ್ಲಿ ಯಾವ ಮರಗಳನ್ನು ಬೆಳೆಸಿದ್ದಾರೆ ಎಂಬ ಬಗ್ಗೆ ಇವರ ಹತ್ತಿರ ಮಾಹಿತಿ ಇಲ್ಲ. ಆದುದರಿಂದ ನಾನು ಇವೊತ್ತು ಕೇಳುತ್ತಿದ್ದೇನೆ, ಈ ಬಗ್ಗೆ ಸರ್ಕಾರದ ಹತ್ತಿರ ಏನಾದರು ಮಾಹಿತಿ ಇದೆಯೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾಹಿತಿ ಇದೆ. ನಮ್ಮಲ್ಲಿ 277 ಮಿಲಿಯನ್ ಟನ್ಸ್ ಸಂಪತ್ತು ಇದೆ, 13 ಲಕ್ಷ ಮಿಲಿಯನ್‌ನಷ್ಟು ಹಣದ ಸಂಪತ್ತು ಇದೆ ಎಂದು ಅಂದಾಜು ಇದೆ. ಅಂದಾಜು ಇಲ್ಲವೆಂದು ನೀವು ಹೇಳಬೇಡಿ. ಕೆಲವು ಕಡೆ ಕಳ್ಳತನವಾಗುತ್ತದೆ. ಆ ಬಗ್ಗೆ ಬೇಕಾದರೆ ತರಿಸಿಕೊಡಿ ಎಂದರೆ ನಾನು ವಿವರ ತರಿಸಿಕೊಡುತ್ತೇನೆ. ಕಳ್ಳತನವಾಗುವುದನ್ನು ಯಾವ ರೀತಿಯಲ್ಲಿ ಸರಿಪಡಿಸಬೇಕೋ ಅದನ್ನು ಸರಿಪಡಿಸುತ್ತೇವೆ.

ಶ್ರೀ ಸಿ.ಆರ್.ಸಗೀರ್ ಅಹಮದ್ : ನಾನು ಕೇಳುತ್ತಿರುವುದೇನೆಂದರೆ ಎಷ್ಟು ಮರಗಳನ್ನು ಅರಣ್ಯ ಇಲಾಖೆಯವರು ಬೆಳೆಸಿದ್ದಾರೆ ಎಂಬ ಬಗ್ಗೆ ಮಾಹಿತಿ ಇದೆಯೇ? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸಾಮಾಜಿಕ ಅರಣ್ಯ ಇಲಾಖೆಯವರು ತಯಾರು ಪಡಿಸಿದಂಥ ಒಂದು ಬಜೆಟ್‌ನಲ್ಲಿ ಹೇಳಿದ್ದಾರೆಂದರೆ ಹೆಕ್ಟೇರ್‌ಗಟ್ಟಲೆಯಲ್ಲಿ ಲೆಕ್ಕ ಕೊಡುತ್ತಾರೆ. ಒಂದು ಹೆಕ್ಟೇರ್‌ನಲ್ಲಿ ಇಷ್ಟು ಸಸಿಗಳನ್ನು ಬೆಳೆಸಲಾಗಿದೆ ಎಂದು ಹೇಳುತ್ತಾರೆ. ಆದರೆ ಈ ಸಸಿಗಳಿಂದ

ಸರ್ಕಾರಕ್ಕೆ ಏನು ಲಾಭ ಆಗುತ್ತದೆ ಎಂಬ ಬಗ್ಗೆ ಇವೊತ್ತಿನವರೆಗೂ ಸರ್ಕಾರದ ಹತ್ತಿರ ಮಾಹಿತಿ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿಮ್ಮ ತಲೆಯಲ್ಲಿ ಎಷ್ಟು ಕೂದಲುಗಳಿವೆ ಎಂದು ಕೇಳಿದರೆ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ನಾವು ಹೆಕ್ಟೇರ್‌ನಲ್ಲಿ ಲೆಕ್ಕ ಕೊಟ್ಟಿರುವುದು ನಿಜ.

ಉಪಾಧ್ಯಕ್ಷರು : ಆಯಿತು, ಆಯಿತು, ಬಿ.ಬಿ.ಶಿವಪ್ಪನವರೇ ನೀವು ಮಾತನಾಡಿ.

ಶ್ರೀ ಬಿ.ಬಿ.ಶಿವಪ್ಪ : ಇವರು ನಡುವೆ ನಡುವೆ ಮಾತನಾಡಿ ಸಮಯ ತೆಗೆದುಕೊಳ್ಳುತ್ತಿದ್ದಾರೆ. ಈಗಾಗಲೇ ನಾಣಯ್ಯನವರು ನನಗೆ ಕೊಟ್ಟಿರುವ ಸಮಯದಲ್ಲಿ ಬಹಳಷ್ಟು ಸಮಯವನ್ನು ತೆಗೆದುಕೊಂಡಿದ್ದಾರೆ. ಅವೆಲ್ಲವನ್ನೂ ನನಗೆ ವಾಪಸ್ ಕೊಡಿಸಬೇಕಾಗುತ್ತದೆ.

ಉಪಾಧ್ಯಕ್ಷರು : ಈಗ ಶಿವಪ್ಪನವರು ಮಾತನಾಡುವಾಗ ಯಾರೂ ನಡುವೆ ಬಾಯಿ ಹಾಕಬೇಡಿ.

ಶ್ರೀ ಬಿ.ಬಿ.ಶಿವಪ್ಪ : ಮಾನ್ಯ ಉಪಾಧ್ಯಕ್ಷರೇ, ನಾವು ಬೆಳೆದಂಥ ಮರವನ್ನು ನಮ್ಮ ಸ್ವಂತ ಉಪಯೋಗಕ್ಕಾಗಿ ತೆಗೆದುಕೊಳ್ಳುವುದಕ್ಕೆ ಸರ್ಕಾರದ ಅರಣ್ಯ ಇಲಾಖೆಯವರು ಸುಮಾರು 300 ಘನ ಅಡಿಯವರೆಗೆ ಅನುಮತಿ ಕೊಡುವ ಬಗ್ಗೆ ಕಾನೂನಿನ ರೀತಿಯಲ್ಲಿ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ನನ್ನ ಸ್ವಂತ ಅನುಭವವನ್ನು ಹೇಳುತ್ತೇನೆ. ನನ್ನ ತೋಟದಲ್ಲಿ ಬೀಟೆ ಮರವನ್ನು ಬೆಳೆದಿದ್ದೆ. ನನ್ನ ಸ್ವಂತ ಉಪಯೋಗಕ್ಕಾಗಿ ಕಡಿಯಬೇಕಾಗಿದೆಯೆಂದು ನಾನು ಹೇಳಿ ಅನುಮತಿಯನ್ನು ಪಡೆಯಲು ಅರಣ್ಯ ಇಲಾಖೆಯಲ್ಲಿ ವಿತ್ ಆಲ್ ಇನ್‌ಫ್ಲೂಯೆನ್ಸ್ ನನಗೆ 9 ತಿಂಗಳನಂತರ ಅನುಮತಿ ಸಿಕ್ಕಿತು. ಆದರೆ ನಾನು ಮನಸ್ಸು ಮಾಡಿದ್ದರೆ ರಾತ್ರಿ ಹೋಗಿ ಬೆಳಗಾಗುವುದರೊಳಗೆ ಮರವನ್ನು ಕಡಿದು ತರಬಹುದಾಗಿತ್ತು. ಏಕೆಂದರೆ ಯಾರು ಹೇಳುವವರಿಲ್ಲ, ಕೇಳುವವರಿಲ್ಲ. ಕಾನೂನು ರೀತಿಯಲ್ಲಿ ಅನುಮತಿ ಪಡೆಯಬೇಕು ಎಂದರೆ ಕೊನೇ ಪಕ್ಷ 9 ತಿಂಗಳಾಗುತ್ತದೆ. ನಮ್ಮ ಜಾಗದಲ್ಲಿ ಬೆಳೆದ ಮರವನ್ನು ಸ್ವಂತ ಉಪಯೋಗಕ್ಕಾಗಿ ಕಡಿಯಲು ಅನುಮತಿ ಪಡೆಯಲು ಇರತಕ್ಕಂಥ ಕಾಲದ ಮಿತಿಯ ಬಗ್ಗೆ ಕಾನೂನಿನಲ್ಲಿ ಸರಳಗೊಳಿಸಬೇಕಾದ ಅನಿವಾರ್ಯತೆ ಇದೆಯೆಂದು ತಿಳಿಸಬಯಸುತ್ತೇನೆ. ಇನ್ನು ಆಡಳಿತ ವೈಖರಿ ಬಗ್ಗೆ ನಾನು ಇಲ್ಲಿ ಹೇಳಲೇಬೇಕಾಗುತ್ತದೆ. ಪೌರಾಡಳಿತ ಮಂತ್ರಿಗಳಾದ ಮಿರಾಜುದ್ದೀನ್ ಪಟೇಲ್‌ರವರು ನನ್ನ ಎದುರಿಗೇ ಕುಳಿತಿದ್ದಾರೆ. ಒಂದು ಟ್ರಾನ್ಸ್‌ಫರ್ ವಿಚಾರದಲ್ಲಿ ನನಗೂ ಮತ್ತು ಅವರಿಗೂ ತುಂಬಾ ವ್ಯಾಜ್ಯವಾಗಿದೆ. ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ನಾನು ಟ್ರಾನ್ಸ್‌ಫರ್ ವಿಚಾರಗಳಿಗೆ ಕೈ ಹಾಕುವವನಲ್ಲ. ಆ ರೀತಿಯ ವ್ಯಕ್ತಿಯೂ ನಾನಲ್ಲ. ಯಾರೇ ಅಧಿಕಾರಿ ಬಂದರೂ ಶಾಸಕರಿಗೆ ಶಕ್ತಿಯಿದ್ದರೆ ಕೆಲಸ ಮಾಡಿಸಿಕೊಳ್ಳುತ್ತಾರೆ ಇಲ್ಲದಿದ್ದರೆ ಬಿಟ್ಟುಬಿಡುತ್ತಾರೆ. ಕ್ಷೇತ್ರದ ಕೆಲಸ ಆಗಬೇಕು ಅಥವಾ ಹೋಗಬೇಕು ಅಷ್ಟೆ. ಆದರೆ ನಮ್ಮ ಮುನಿಸಿಪಾಲಿಟಿಯಲ್ಲಿ ಒಬ್ಬ ಚೀಫ್ ಆಫೀಸರ್‌ನ ನಡತೆ ಸರಿಯಿಲ್ಲ, ತುಂಬಾ ಅನ್ಯಾಯ ಮಾಡುತ್ತಿದ್ದಾನೆ ಎಂಬ ಪುಕಾರು ಬಂದನಂತರ ಆಧಾರ ಸಹಿತ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ಅವರಿಗೆ ಈತನ ವಿಷಯಗಳನ್ನು ತಿಳಿಸಿ ಇವನನ್ನು ವರ್ಗ ಮಾಡಿಕೊಡಿ ಎಂದು ಕೇಳಿದೆ. ಇದಕ್ಕೆ ಬೇಕಾದಂಥ

ಎಲ್ಲಾ ನೈಜ ಕಾರಣಗಳನ್ನು ಕೊಟ್ಟೆ. ಇದನ್ನು ಹೇಳುವುದಕ್ಕೆ ಒಂದು ಕಾರಣವಿದೆ. ಆ ಮುನಿಸಿಪಾಲಿಟಿ ನಮ್ಮದು ಅಲ್ಲ, ಅಲ್ಲಿ ನಮ್ಮ ಸದಸ್ಯರು ಯಾರೂ ಇಲ್ಲ. ಕಾಂಗ್ರೆಸ್‌ನವರು ಮತ್ತು ಜನತಾದಳದವರು ಇದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಇರುವುದು ಅದೊಂದೇ ಮುನಿಸಿಪಾಲಿಟಿ. ಅದು ಚೆನ್ನಾಗಿ ನಡೆಯಬೇಕೆನ್ನುವುದು ನನ್ನ ಆಸೆ. ಇದರ ಜೊತೆಗೆ ತಮ್ಮ ಆಡಳಿತದಲ್ಲಿ ಬದಲಾದ ವ್ಯವಸ್ಥೆಯಲ್ಲಿ ಸಂಪೂರ್ಣ ಮಹಿಳೆಯರೇ ಅಲ್ಲಿ ಇದ್ದಾರೆ. ಅಲ್ಲಿಯ ಅಧ್ಯಕ್ಷರು ಮಹಿಳೆಯೇ ಆಗಿದ್ದಾರೆ. ಸುಮಾರು ಏಳೆಂಟು ಜನರು ಮಹಿಳಾ ಸದಸ್ಯಣೆಯರಿದ್ದಾರೆ. ಅದು ಮಹಿಳೆಯರೇ ನಡೆಸತಕ್ಕಂಥ ಮುನಿಸಿಪಾಲಿಟಿಯಾಗಿರುವುದರಿಂದ ಅದು ಚೆನ್ನಾಗಿ ನಡೆಯಲಿ ಎಂದು ನನ್ನ ಆಸೆ. ಮಂತ್ರಿಗಳಿಗೆ ಈತನ ಟ್ರಾನ್ಸ್‌ಫರ್ ಬಗ್ಗೆ ಹೇಳಿದ ಮೇಲೆ ಟ್ರಾನ್ಸ್‌ಫರ್ ಆಯಿತು. ಟ್ರಾನ್ಸ್‌ಫರ್ ಆದ ಒಂದು ತಿಂಗಳಿಗೇ ಮತ್ತೆ ಅವನು ಅಲ್ಲಿಗೇ ಬಂದ. ಮೊದಲಿದ್ದವನೂ ಅಲ್ಲೇ ಇದ್ದ. ಇವರಿಬ್ಬರಿಗೂ ವ್ಯಾಜ್ಯ ಪ್ರಾರಂಭವಾಯಿತು. ಪುನಃ ನಾನು ಮಂತ್ರಿಗಳ ಹತ್ತಿರ ಬಂದು ಕೇಳಿದೆ ಟ್ರಾನ್ಸ್‌ಫರ್ ಬಗ್ಗೆ ನೀವು ಬರೆದಿರಿ, ಮಾನ್ಯ ಮುಖ್ಯಮಂತ್ರಿಗಳೂ ಪತ್ರವನ್ನು ಟ್ರಾನ್ಸ್‌ಫರ್ ಬಗ್ಗೆ ಆದೇಶ ನೀಡಿದ್ದರೂ ಕೂಡ ಆ ವ್ಯಕ್ತಿ ಪುನಃ ಅಲ್ಲಿಯೇ ಬಂದಿದ್ದಾನೆ ಇದಕ್ಕೆ ಕಾರಣವೇನು ಎಂದು ಕೇಳಿದೆ. ತಕ್ಷಣ ಮಂತ್ರಿಗಳಿಗೆ ಕೋಪ ಬಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಅವರ ಜೊತೆ ಗಲಾಟೆ ಮಾಡುತ್ತ, ಮಾನ್ಯ ಮುಖ್ಯಮಂತ್ರಿಗಳ ಆರ್ಡ್‌ರ್ ಆಗಿದೆಯಲ್ಲದೇ ಜೊತೆಗೆ ನಾನೂ ಕೂಡ ಹೇಳಿದ್ದೇನೆಯಾದರೂ ಮತ್ತೆ ನನ್ನ ಗಮನಕ್ಕೆ ತರದೇ ಮತ್ತೆ ಆತನನ್ನೇ ಅಲ್ಲಿಗೆ ಟ್ರಾನ್ಸ್‌ಫರ್ ಮಾಡಿದ್ದೀರಿ, ಇದನ್ನು ಈ ಕೂಡಲೇ ತಡೆ ಹಿಡಿಯಿರಿ ಮತ್ತು ಮೊದಲಿದ್ದವನನ್ನೇ ಅಲ್ಲಿಯೇ ಇರಲು ಸೂಚನೆ ಕೊಟ್ಟರು. ಆಗ ನನ್ನ ಜೊತೆ ಸುಮಾರು ಏಳೆಂಟು ಜನರು ಮುನ್ಸಿಪಲ್ ಕೌನ್ಸಿಲರ್‌ಗಳು ಇದ್ದರು. ನನಗಂತೂ ಆಗ ಬಹಳ ಖುಷಿಯೇ ಆಯಿತು. ಏಕೆಂದರೆ ನಾನು ಹೇಳಿದ ತಕ್ಷಣ ಮಂತ್ರಿಗಳು ಎಷ್ಟರ ಮಟ್ಟಿಗೆ ಕ್ರಮವನ್ನು ತೆಗೆದುಕೊಂಡರು ಎಂದು ಖುಷಿ ಪಟ್ಟುಕೊಂಡು ನಂತರ ಊರಿಗೆ ಹೋದೆವು. ಊರಿಗೆ ಹೋಗುವಷ್ಟರಲ್ಲಿಯೇ ಈ ಬಗ್ಗೆ ಫ್ಯಾಕ್ಸ್ ಕೂಡ ಬಂದು ಈ ಆರ್ಡ್‌ರ್‌ನ್ನು ಸ್ಟೇ ಮಾಡಿ ಎಂದು ಹೇಳಲಾಗಿತ್ತು. ನನಗಂತೂ ಬಹಳ ಖುಷಿಯಾಯಿತು. ಇದಾದ ನಂತರ ಮತ್ತೆ ಇನ್ನೊಂದು ಫ್ಯಾಕ್ಸ್‌ನಲ್ಲಿ ಈ ಹಿಂದೆ ಸ್ಟೇ ಮಾಡಿ ಎಂದು ಕಳುಹಿಸಿದ್ದ ಆರ್ಡ್‌ರನ್ನು ಸ್ಟೇ ಮಾಡಿ ಎಂದು ಹೇಳಿದ್ದರು. ಮಂತ್ರಿಗಳು ಫ್ಯಾಕ್ಸ್ ಕಳುಹಿಸುವುದು ಅದರ ಹಿಂಬದಿಯಲ್ಲಿಯೇ ಅದನ್ನು ಸ್ಟೇ ಮಾಡಿ ಎಂದು ಇನ್ನೊಂದು ಫ್ಯಾಕ್ಸ್ ಕಳುಹಿಸುವುದು. ಈ ರೀತಿಯಾಗಿ ನಮ್ಮ ಪುಣ್ಯವೋ ಏನೋ, ನಮ್ಮ ಮುನಿಸಿಪಾಲಿಗೆ ಇಬ್ಬರು ಚೀಫ್ ಆಫೀಸರ್ಸ್. ಸುಮಾರು ಎರಡು ತಿಂಗಳು ಎಳೆದಾಡಿಕೊಂಡು ಇವರು ಮುನಿಸಿಪಾಲಿಟಿಯಲ್ಲಿ ಕುಳಿತು ಕೆಲಸ ಮಾಡುವಂಥ ಒಂದು ವ್ಯವಸ್ಥೆ. ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ನಾನು ಸವಿವರವಾಗಿ ಪತ್ರ ಬರೆದು ನಿಮ್ಮ ದರ್ಬಾರಿನಲ್ಲಿ ನೀವೇ ಕೊಟ್ಟಂಥ ಆರ್ಡ್‌ರ್ ಈ ರೀತಿಯಾಗಿದೆ ಎಂದು ಆ ಪತ್ರದಲ್ಲಿ ತಿಳಿಸಿದ್ದೆ. ಪತ್ರ ಬರೆದ ಸುಮಾರು 15 ದಿವಸಗಳ ನಂತರ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಪತ್ರ ಬಂತು. ಅದರಲ್ಲಿ ಈ ವಿಷಯವನ್ನು ವಿಚಾರಣೆಗಾಗಿ ಹಾಕಿದ್ದೇವೆಂದು ತಿಳಿಸಿದ್ದರು. ಎಲ್ಲಿ ಏನು ವಿಚಾರಣೆಯಾಗುತ್ತಿದೆಯೋ ಗೊತ್ತಿಲ್ಲ. ಈಗ ಹಾಸನದ ಡಿ.ಸಿ.ಯವರು ಅಲ್ಲಿ ಯಾವಾಗ ಕೆಲಸ ಸಂಪೂರ್ಣ ಸ್ಥಗಿತವಾಯಿತೋ ಅದನ್ನು ತಿಳಿದು ಇವರಿಬ್ಬರೂ ಬೇಡವೆಂದು ಹೇಳಿ ಈಗ ಮೂರನೆಯವರೊಬ್ಬರು ಬಂದು ಕೆಲಸ

ಮಾಡುತ್ತಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ ಇಲ್ಲಿ ಚೀಫ್ ಆಫೀಸರ್ ಇಂಟರ್‌ಸ್ಟೆಡ್ ಅಲ್ಲ. ಒಳ್ಳೆಯ ಕೆಲಸವಾಗಬೇಕು ಎಂಬುದು ಮುಖ್ಯ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತ ಇದೊಂದು ಅತ್ಯಂತ ಭಯಾನಕವಾದ ವಿಚಾರವೆಂದು ಹೇಳಿದರು. ಎಷ್ಟು ಜನ ಅದನ್ನು ಕೇಳಿಸಿಕೊಂಡರೋ ಗೊತ್ತಿಲ್ಲ. ನಾನು ಕೇಳಿಸಿಕೊಂಡೆ, ನಾಗರಾಜ್‌ರವರೂ ಇದ್ದರು ಅವರು ಕೇಳಿಸಿಕೊಂಡರು. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಯಾವುದೋ ಒಂದು ಸಂದರ್ಭದಲ್ಲಿ ನನ್ನ ಸಹಿ ಕೂಡ ಫೋರ್ಜರಿಯಾಗುತ್ತಿದೆಯೆಂದು ಹೇಳಿದರು. ಇದೇನಿದು ಆಶ್ಚರ್ಯ; ಮಾನ್ಯ ಮುಖ್ಯಮಂತ್ರಿಗಳ ಸಹಿ ಕೂಡ ಫೋರ್ಜರಿಯಾಗುತ್ತಿದೆಯೆಂದು ಹೇಳಿದರೆ ಅಧಿಕಾರ ಹೇಗಿದೆ? ಯಾವ ಯಾವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಸಹಿ ಫೋರ್ಜರಿಯಾಗುತ್ತಿದೆಯೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್.) : ಸಹಿ ಮಾತ್ರ ಫೋರ್ಜರಿ ಆಗಿಲ್ಲ. ಮನುಷ್ಯನನ್ನೂ ಕೂಡ ಫೋರ್ಜರಿ ಮಾಡಿ ರಿಟೈರ್ಡ್ ಮಾಡಿಬಿಟ್ಟಿದ್ದಾರೆ ನಮ್ಮ ಮುನಿಪಾಲಿಟಿಯಲ್ಲಿ.

ಶ್ರೀ ಬಿ.ಬಿ.ಶಿವಪ್ಪ : ಇದೊಂದು ಅತ್ಯಂತ ಗಂಭೀರವಾದ ಅಪಾದನೆ. ಇದರ ಬಗ್ಗೆ ತಾವು ಬಹಳ ಯೋಚನೆ ಮಾಡಬೇಕಾಗುತ್ತದೆ. ಈ ದರ್ಬಾರಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಹಿ ಬದಲಾಗುತ್ತದೆಂದು ಹೇಳಿದರೆ ತುಂಬಾ ಆಶ್ಚರ್ಯ ಮತ್ತು ಗಾಬರಿ ಪಡತಕ್ಕಂಥ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಸಹಿ ಹಾಕಿಬಿಟ್ಟರೆ ಅದು ಸರ್ಕಾರಿ ಆಜ್ಞೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ಮತ್ತೆ ಯೋಚನೆ ಮಾಡುವ ಅಗತ್ಯವೇ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಹೀಗಿರುವಾಗ ಸರ್ಕಾರೀ ಆಜ್ಞೆಗಳು ಮಾನ್ಯ ಮುಖ್ಯಮಂತ್ರಿಗಳ ಸಹಿಯನ್ನು ಫೋರ್ಜರಿ ಹಾಕಿ ಬರುವುದಾದರೆ ಎಷ್ಟು ಸರ್ಕಾರಿ ಆದೇಶಗಳು ಫೋರ್ಜರಿ ಸಹಿಯೊಂದಿಗೆ ಬಂದಿದೆ ಅಥವಾ ಬಂದಿರಬಹುದು. ಇವರೇನು ಸುಭಿಕ್ಷ ಆಡಳಿತವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಇವರೇನು ನಮ್ಮಲ್ಲಿ ಆಡಳಿತ ಎಂದರೆ ಯಾವುದೇ ಭಿನ್ನಭೇದವಿಲ್ಲ, ಆಡಳಿತ ಎಂದು ಹೇಳಿದರೆ ನಮ್ಮಲ್ಲಿ ಯಾವುದೇ ಮಂತ್ರಿಗಳಾಗಲೀ, ಮುಖ್ಯಮಂತ್ರಿಗಳಾಗಲೀ ಯಾರು ಯಾರ ಸಹಿ ಬೇಕಾದರೂ ಸಹ ಹಾಕಬಹುದು. ನಿಮಗೆ ಹಾಕುವುದಕ್ಕೆ ಸಮಯ ಇಲ್ಲದಿದ್ದರೆ ನಮ್ಮ ಒಬ್ಬ ಕಾರ್ಯಕರ್ತ ಬೇಕಾದರೂ ಒಂದು ಸಹಿ ಹಾಕಿಬಿಡಬಹುದು. ಮಾನ್ಯ ಜಿಗಜಿಣಗಿಯವರ ಸಹಿ ಹಾಕಿಬಿಡಬಹುದು. ಜಿಗಜಿಣಗಿ ಎಂದು ಬರೆಯುವುದಕ್ಕೆ ಜಿಗ್‌ಜಿಗ್‌ಜಿಗ್ ಎಂದು ಬರೆದುಬಿಟ್ಟರೆ ಏನಾಯಿತು.

ಶ್ರೀ ರಮೇಶ್ ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಹಿರಿಯ ಸದಸ್ಯರು ನನ್ನ ಹೆಸರನ್ನು ಸರಿಯಾಗಿ ಹೇಳಬೇಕು. ಜಿಗ್‌ಜಿಗ್ ಎನ್ನಬಾರದು, ಜಿಗಜಿಣಗಿ ಎಂದು ಹೇಳಬೇಕು.

ಶ್ರೀ ಬಿ.ಬಿ.ಶಿವಪ್ಪ : ಸಹಿಯನ್ನು ಜಿಗ್‌ಜಿಗ್ ಎಂದು ಹಾಕಿಬಿಡಬಹುದು ಎಂದು ಹೇಳಿದೆ. ಇದು ತುಂಬಾ ಗಂಭೀರವಾಗಿ ಚಿಂತನೆ ಮಾಡತಕ್ಕ ವಿಚಾರ. ಇನ್ನು ಕೃಷಿ ಇಲಾಖೆ, ಕೃಷಿ ಇಲಾಖೆಯಲ್ಲಿ ಬೇರೆ ಕಡೆ ಏನು ಆಗಿದೆಯೋ ನಮಗೆ ಗೊತ್ತಿಲ್ಲ, ನಮ್ಮಲ್ಲಿ ಕೃಷಿ ಹೊಂಡ ಎಂದು ತೆಗೆಯುತ್ತಿದ್ದಾರೆ. ಇದರ ಉದ್ದೇಶ ಏನು ಗೊತ್ತಿಲ್ಲ. ಮಳೆಗಾಲದ ನೀರನ್ನು ಅಲ್ಲಿ

ನಿಲ್ಲಿಸಿ, ಕೆಳಕ್ಕೆ ಹೋಗಿರತಕ್ಕಂತಹ ನೀರನ್ನು ಮೇಲಕ್ಕೆ ಎತ್ತುವ ಪ್ರಯತ್ನ. ಇದಕ್ಕೆ ಕೃಷಿ ಹೊಂಡ ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಎಲ್ಲಿ ಅವಶ್ಯಕತೆ ಇದೆ, ಅಲ್ಲಿ ತೆಗೆಯಿರಿ. ಅವಶ್ಯಕತೆ ಇಲ್ಲದೆ ಇರುವ ಜಾಗದಲ್ಲಿ ಕೃಷಿ ಹೊಂಡ ಮಾಡುವುದು ಅನಾವಶ್ಯಕ. ಮಾಡಬೇಕೆಂದು ಸರ್ಕಾರದ ಕಾರ್ಯಕ್ರಮ ಇದೆ, ಕೇಂದ್ರ ಸರ್ಕಾರದ ಕಾರ್ಯಕ್ರಮ ಇದೆ ಎಂದು ಮಾಡುವುದಲ್ಲ, ಅದರಿಂದ ಅವನಿಗೆ ಉಪಯೋಗವಾಗಬೇಕು. ಅದಕ್ಕೆ ಖರ್ಚಾಗಿರುವ ಹಣಕ್ಕೆ ಗೌರವ ಸಿಗಬೇಕು. ಕೃಷಿ ಹೊಂಡ ತೆಗೆಯುವ ಬದಲು ನಾನು ಒಂದು ಸಲಹೆ ಕೊಡುತ್ತೇನೆ, ನಮ್ಮ ಮಲೆನಾಡು ಏರಿಯಾದಲ್ಲಿ ಅಥವಾ ಇಡೀ ರಾಜ್ಯದಲ್ಲಿ ಕೆರೆಗಳನ್ನು ಮಾಡಿದ್ದಾರೆ. ಆಯಕಟ್ಟಿನ ಜಾಗದಲ್ಲಿ ಕೆರೆಗಳನ್ನು ಮಾಡಿದ್ದಾರೆ. ಈಗ ಕೆರೆಗಳೆಲ್ಲ ಮುಚ್ಚಿ ಹೋಗಿವೆ ಎಂದು ಅವೆಲ್ಲಾ ಎನ್‌ಕ್ರೋಚ್‌ಮೆಂಟ್ ಮಾಡಿ ಅಲ್ಲೂ ಕೂಡ ಬೆಳೆ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆ ಕೆರೆಗಳ ಹೂಳು ತೆಗೆಯುವ ಪ್ರಾಮಾಣಿಕ ಪ್ರಯತ್ನವಾಗಿದೆ. ಸರ್ಕಾರ ಏನಾದರೂ ಅಲ್ಲಿ ಹಣ ಖರ್ಚು ಮಾಡುವುದಾದರೆ ಈ ಉದ್ದೇಶ ಏನು ಇದೆ, ಈ ವಾಟರ್ ಬೆಲ್ಟ್ ಮೇಲಕ್ಕೆ ತರತಕ್ಕಂಥದ್ದು ಸಫಲವಾಗಬಹುದು, ಎಂದು ತಮ್ಮ ಗಮನಕ್ಕೆ ತರುತ್ತೇನೆ. ಇನ್ನೊಂದು ಬಹಳ ಗಂಭೀರವಾದ ವಿಚಾರ. ನಮ್ಮ ರಾಜ್ಯದಲ್ಲಿ ಬಹಳ ಹಿಂದೆ ಜನತಾ ಸರ್ಕಾರ ರಾಜ್ಯಭಾರ ಮಾಡತಕ್ಕಂಥ ಸಂದರ್ಭದಲ್ಲಿ ಖೋಡೇಸ್‌ನವರಿಗೆ ಎರಡು ಸಕ್ಕರೆ ಕಾರ್ಖಾನೆಗಳನ್ನು ಮಾರಾಟ ಮಾಡಿದರು. ಯಾವ ಕಂಡಿಷನ್‌ನಲ್ಲಿ ನೀವು ಮಾರಾಟ ಮಾಡಿದರೋ ಗೊತ್ತಿಲ್ಲ. ಅದರಲ್ಲಿ ಹಲವಾರು ಕೋಟಿ ರೂಪಾಯಿಗಳು ಇವತ್ತು ಸರ್ಕಾರಕ್ಕೆ ನಷ್ಟವಾಗಿದೆ. ಬೆಲೆ ಬಾಳತಕ್ಕಂತಹ ಜಾಗವನ್ನು ಕೇವಲ ಐದೂವರೆ ಕೋಟಿ ರೂಪಾಯಿಗೆ ಮಾಡಿದರು ಅವತ್ತಿನ ಅಂದಾಜು ಹದಿನಾಲ್ಕುವರೆ ಕೋಟಿ ರೂಪಾಯಿಗಳು. ಅವರು ಐದೂವರೆ ಕೋಟಿ ರೂಪಾಯಿಗೆ ಮಾರಿ ಪ್ರತಿಯೊಬ್ಬರ ಜೇಬಿಗೆ ಕೈ ಹಾಕುತ್ತಿದ್ದಾರೆ. ಬಸ್ಸಿನ ದರ, ಹಾಲಿನ ದರ, ನೀರಿನ ದರ, ವಿದ್ಯುಚ್ಛಕ್ತಿ ಹೀಗೆ ಪ್ರತಿಯೊಂದು ವಿಚಾರದಲ್ಲಿ ಕೈ ಹಾಕತಕ್ಕಂತಹ ಪದ್ಧತಿಯನ್ನು ಕೈ ಬಿಟ್ಟು ಸರ್ಕಾರ ಮಾಡಿರತಕ್ಕಂತಹ ಈ ತಪ್ಪು ಏನಿದೆ, ಅಕಸ್ಮಾತ್ ಅಚಾತುರ್ಯವಾಗಿ ತಪ್ಪಾಗಿದ್ದರೂಕೂಡ, ಉದ್ದೇಶಪೂರ್ವವಾಗಿ ತಪ್ಪಾಗಿದ್ದರೂ ಕೂಡ ಅದನ್ನು ಸರಿಪಡಿಸತಕ್ಕಂತಹ ಪ್ರಾಮಾಣಿಕ ಪ್ರಯತ್ನ ಮಾಡುವುದಾದರೆ ಇದು ಯಾವುದೂ ಮಾಡದೆ, ತಾವು ವ್ಯವಹಾರ ನಡೆಸುವುದಕ್ಕೆ ಅವಕಾಶ ಇದೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಇದೆ, ಈ ಸರ್ಕಾರದಲ್ಲಿ ಭಾರಿ ಒಳ್ಳೆಯ ವಿಷಯಗಳು ಬರುತ್ತವೆ. ಬೆಂಗಳೂರಿಗೆ ಕಾವೇರಿ ನೀರು ತರುತ್ತೇವೆ, ಎಂದು ಹೇಳಿ ಮೊದಲನೇ ಸ್ಟೇಜ್, ಎರಡನೇ ಸ್ಟೇಜ್, ಮೂರನೇ ಸ್ಟೇಜ್ ಈಗ ನಾಲ್ಕನೇ ಸ್ಟೇಜ್‌ಗೆ ಕಾವೇರಿ ನೀರುವ ತರುವ ಕಾರ್ಯಕ್ರಮ ಆಗುತ್ತಿದೆ. ಒಂದು, ಎರಡು, ಮೂರು ಈ ಮೂರು ಸ್ಟೇಜ್‌ಗಳಿಗೆ ಸರ್ಕಾರ ತನ್ನದೇ ಆದ ಅಧಿಕಾರಿಗಳನ್ನು ಉಪಯೋಗಿಸಿ ಕೆಲಸ ಮಾಡಿದೆ. ಇವತ್ತು ನಾಲ್ಕನೇ ಸ್ಟೇಜ್‌ನ್ನು ಕಮಿಷನ್ ಆಧಾರದ ಮೇಲೆ, ಏಜೆನ್ಸಿ ಫಿಕ್ಸ್ ಮಾಡುತ್ತಿದೆ. ಒಂದು, ಎರಡು ಮತ್ತು ಮೂರು ಸ್ಟೇಜ್ ಮಾಡಿದಂಥ ಅದಿಕಾರಿಗಳು ನಿವೃತ್ತರಾಗಿದ್ದರೂ ಕೂಡ ನೀವು ಅವರನ್ನು ಇಟ್ಟುಕೊಂಡು ಕೆಲಸ ಮಾಡಬಹುದು. ಕಮಿಷನ್ ಆಧಾರದ ಮೇಲೆ, ಕಮಿಷನ್ ಕೊಟ್ಟು ಒಂದು ಏಜೆನ್ಸಿ ಫಿಕ್ಸ್ ಮಾಡಿ ನಾಲ್ಕನೇ ಹಂತದಲ್ಲಿ ನೀರು ತರತಕ್ಕಂತಹ ಅವಶ್ಯಕತೆ ಏನೆಂದರೆ, ಉದ್ದೇಶ ಒಳ್ಳೆಯದಿರಬಹುದು, ಆದರೆ ಜನಗಳಿಗೆ ಅನುಮಾನ ಬರುವುದಕ್ಕೆ ಅವಕಾಶ ಇದೆ. ಆದ್ದರಿಂದ ಅಲ್ಲಿ ಆಗಿರತಕ್ಕಂತಹ ನ್ಯೂನ್ಯತೆ ಏನಿದೆ

ಅದನ್ನು ಸರಿಪಡಿಸಿಕೊಂಡು ನಾಲ್ಕನೇ ಸ್ಟೇಜ್‌ನಲ್ಲಿ ಉತ್ತಮವಾದ ವ್ಯವಸ್ಥೆ ಮಾಡುವುದಕ್ಕೆ ಅವಕಾಶ ಇರುವಾಗ ಈ ಏಜೆನ್ಸಿಯ ಅವಶ್ಯಕತೆ ಇತ್ತೇ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಉತರ ಕನ್ನಡದ ಬಗ್ಗೆ ಒಂದು ಮಾತು ಆಡಲೇಬೇಕಾಗುತ್ತದೆ. ಕಾರಣ ನಾನು ಇರಿಗೇಷನ್ ಕಮಿಟಿ ಅಧ್ಯಕ್ಷತೆ ನನಗೆ ಕೊಟ್ಟಿರುವುದರಿಂದ ಒಂದು ವಿಚಾರ ನಾನು ಹೇಳಬೇಕಾಗುತ್ತದೆ. ಖರ್ಗೆಯವರಿಗೆ ಆಪಾದನೆ ಮಾಡಿ ಈ ಮಾತನ್ನು ಹೇಳಬೇಕಾಗುತ್ತದೆ. ಉತ್ತರ ಕರ್ನಾಟಕದಿಂದ ಇದುವರೆಗೆ ಆರಿಸಿ ಬಂದಿರತಕ್ಕಂತಹ ಶಾಸಕರಾಗಲಿ, ಮಂತ್ರಿಗಳಾಗಲಿ, ಅಷ್ಟಾಗಿ ಗಮನ ಹರಿಸಲಿಲ್ಲ ಎಂದು ನಾನು ಬೇಸರದಿಂದ ಹೇಳಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಯಾವುದೇ ಕೆಲಸ ಹೇಳಿಕೊಳ್ಳುವಷ್ಟು ಆಗಿಲ್ಲ. ಬಹುಶಃ ನಾನು ಬೇರೆ ರೀತಿಯಲ್ಲಿ ಮಾತನಾಡಿದರೆ ತಪ್ಪು ಕಲ್ಪನೆಗೆ ಅವಕಾಶವಾಗುಬಹುದು. ಆದರೆ ಅಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ ಎಂದು ನಾವು ಏನು ಹೇಳುತ್ತಿದ್ದೇವೆ, ಇವತ್ತು ನಾಗೇಗೌಡರು ಬೆಳಿಗ್ಗೆ ರಾತ್ರಿ ಸ್ವಪ್ನದಲ್ಲಿಯೂ ಕೂಡ ಹೇಳುತ್ತಿದ್ದಾರೆ, ಎರಡು ಸಾವಿರ ಇಸವಿಯೊಳಗೆ ಬಚಾವತ್ ಆಯೋಗದ ಎಲ್ಲಾ ಯೋಜನೆಗಳನ್ನು ನಾವು ಮಾಡಿಕೊಡುತ್ತೇವೆಂದು ಹೇಳುತ್ತಿದ್ದಾರೆ ಆದರೆ ನಾನು ಪ್ರಮಾಣಮಾಡಿ ಹೇಳುತ್ತೇನೆ. ಇವರ ಕೈಯಲ್ಲಿ ಅದು ಆಗುವುದಿಲ್ಲ, ಸಾಧ್ಯವಿಲ್ಲ. ಎರಡು ಸಾವಿರ ಇಸವಿಯೊಳಗೆ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಉತ್ತರ ಕರ್ನಾಟಕಕ್ಕೆ ನೀರು ಒದಗಿಸುತ್ತೇವೆಂದು ಹೇಳಿದರೆ, ಐದು ಏನೋ ಒಂದು ರೀತಿ ಮಿರಾಕೆಸ್ ಮೋಡಿ ಮಾಡಿದ ಹಾಗೆ ಆಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಎರಡು ಸಾವಿರ ಇಸವಿ ಒಳಗೆ ಉತ್ತರ ಕರ್ನಾಟಕಕ್ಕೆ ನೀರು ಒದಗಿಸುತ್ತೇವೆಂದು ಹೇಳಿಲ್ಲ, ಎರಡು ಸಾವಿರ ಇಸವಿಯೊಳಗೆ ಕೃಷ್ಣಾ ನದಿಯಲ್ಲಿರತಕ್ಕಂತಹ ನಮ್ಮ ಭಾಗದ ನೀರನ್ನು ಹಿಡಿದು ಇಡುತ್ತೇವೆಂದು ಅಷ್ಟೇ ಹೇಳಿರುವುದು.

ಶ್ರೀ ಬಿ.ಬಿ.ಶಿವಪ್ಪ : ನೀರನ್ನು ಹಿಡಿದು ಇಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಹಿಡಿದು ಇಡುವ ವ್ಯವಸ್ಥೆಯನ್ನು ಮಾಡುವುದಿಲ್ಲ. ಒಂದು ಪಕ್ಷ ನೀರನ್ನು ಹಿಡಿದು ಇಟ್ಟರು ಎಂದು ಇಟ್ಟುಕೊಳ್ಳಿ, ಉತ್ತರ ಕರ್ನಾಟಕದ ಜನ ನಮ್ಮ ನೀರನ್ನು ಹಿಡಿದು ಬಿಟ್ಟಿದ್ದಾರೆ ಎಂದು ನೋಡುತ್ತಾ ಕುಳಿತುಕೊಂಡರೆ ಈ ನೀರು ಮತ್ತೆ ಅವರಿಗೆ ಬರಬೇಕು, ಅವರಿಗೆ ಬರಬೇಕಾದರೆ ಇನ್ನು ಎಷ್ಟು ವರ್ಷ ಮುಂದೆ ಹೋಗುತ್ತದೋ ಗೊತ್ತಿಲ್ಲ. ಏಕೆಂದರೆ 100 ಕೋಟಿ ರೂಪಾಯಿಗಳಲ್ಲಿ ಪ್ರಾರಂಭ ಮಾಡಿದ ಕೆಲಸ ಸಾವಿರ ಕೋಟಿಯಾದರೂ ಮುಗಿಯುವ ಪರಿಸ್ಥಿತಿ ಇಲ್ಲದೇ ಇರುವಾಗ ಇನ್ನು ಮುಂದೆ 100 ವರ್ಷ ಹೋದಾಗ ಪರಿಸ್ಥಿತಿ ಏನಾಗುತ್ತದೊ ಗೊತ್ತಿಲ್ಲ. ಅದರಿಂದ ಉತ್ತರ ಕರ್ನಾಟಕದಿಂದ ಬಂದಿರತಕ್ಕಂತಹ ಶಾಸಕರು ಒಗ್ಗಟ್ಟಾಗಿ ದುಡಿಯಬೇಕು, Irrespective of party ಪಾರ್ಟಿ ಪಂಗಡ ಇದೆಲ್ಲಾ ಮರೆತು ಈ ವಿಚಾರ ಬಂದಾಗ ಒಂದಾಗಿ ದುಡಿದರೆ ಏನಾದರೂ ಅಲ್ಪ ಕೆಲಸ ಮಾಡುವುದಕ್ಕೆ ಸಾಧ್ಯವೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ. ನಾಗೇಗೌಡರು ಹೇಳುತ್ತಾರೆ, ಅವರ ಮಾತನ್ನು ಸಂಪೂರ್ಣವಾಗಿ ನಂಬಿದರೆ ಖರ್ಗೆಯವರು ನಂಬುವುದಿಲ್ಲ, ಅಂತೂ ನಂಬಬೇಡಿ ಎಂದು ಒಂದು ಮಾತು ನಾನು ಅವರಿಗೆ ಹೇಳಿದ್ದೇನೆ. ಅನೇಕ ಬೋರ್ಡ್‌ಗಳನ್ನು ತಾವು ಮಾಡಿದ್ದೀರಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಈ ಎರಡು ವರ್ಷಗಳ ಸ್ವಲ್ಪ ಕೆಲಸ ಆಗಿದಯೋ

ಇಲ್ಲವೋ ಎನ್ನುವುದನ್ನು ಹೇಳಿಬಿಡಿ.

ಶ್ರೀ ಬಿ.ಬಿ.ಶಿವಪ್ಪ : ಆದರೂ ಆಗುವುದಿಲ್ಲ. ಮಾಡುತ್ತಿದ್ದೀರಿ, ಆದರೂ ಆಗುವುದಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ನಾನು ಆಲಮಟ್ಟಿಗೆ ಭೇಟಿ ಕೊಡುವುದಕ್ಕೆ ಹೋಗಿದ್ದೆ, 504 ಮೀಟರ್‌ಗೆ ಡ್ಯಾಮ್ ಎತ್ತರ ಆಗಿದೆ ಉಳಿದ ಎರಡು ಮೀಟರ್ ಈಗ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಅದಕ್ಕಾಗಿ ಆಗಿದೆ ಅಥವಾ ಇಲ್ಲ ಎಂದು ಎನ್ನುವುದು ಅದರಿಂದ ಗೊತ್ತಾಗುತ್ತದೆ, ಹೈಟ್ ಯಾವ ಮಟ್ಟಕ್ಕೆ ಹೋಗುತ್ತಿದೆ, ಎಷ್ಟು ಹಣ ಖರ್ಚಾಗುತ್ತಿದೆ, ಎಷ್ಟು ಇವರು ಪ್ರಾಮಿಸ್ ಮಾಡಿದ್ದರು ಎನ್ನತಕ್ಕಂತದ್ದರ ಬಗ್ಗೆ ನಮಗೆ ಸ್ಪಷ್ಟವಾದ ಮಾಹಿತಿ ಇದೆ. ಅದಕ್ಕೆ ಮತ್ತೆ, ಏಕೆ ಕನ್ನಡಿಬೇಕು?

ಶ್ರೀ ಬಿ.ಬಿ.ಶಿವಪ್ಪ : ಆಗಿದೆ, ಆಗಿಲ್ಲವೆಂದು ಹೇಳುತ್ತಿಲ್ಲ, ನಿಮ್ಮ ಕಾಲದಲ್ಲಿ ಪ್ರಾರಂಭ ಮಾಡಿದ್ದೀರಿ, ಎರಡು ಸಾವಿರ ಇಸವಿ ವೇಳೆಗೆ ಆಗುವುದಿಲ್ಲ ಎಂದು ನಾನು ಹೇಳುತ್ತಿದ್ದೇನೆ, ನೀವು ಒಪ್ಪಿಕೊಳ್ಳುವುದಾದರೆ ಇಲ್ಲೇ ಆಗುವುದಿಲ್ಲವೆಂದು ಒಪ್ಪಿಕೊಂಡು ಬಿಡಿ.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಖರ್ಗೆಯವರು ಮಂತ್ರಿಯಾಗಿದ್ದಾಗ, ಆ ಮಂತ್ರಿಮಂಡಲದಲ್ಲಿ ನಾನೂ ಮಂತ್ರಿಯಾಗಿದ್ದೆ, ಅವರ ಜೊತೆಯಲ್ಲೇ ಇದ್ದೆ. ಅವರು ಮಾತನಾಡುತ್ತಾರೆ ಮಧ್ಯೆ ಡಿಸ್ಟರ್ಬ್ ಮಾಡಬಾರದು ಎಂದು ಇದ್ದೆ, ಅವರು ಹೇಳಿದ್ದಕ್ಕೆ ಕೇಳಿದೆ. ಅವರು ಬಹಳ ವರ್ಷಗಳ ಕಾಲ 1977 ರಿಂದ ನಮ್ಮ ಜೊತೆ ರಾಜಕಾರಣ ಮಾಡಿಕೊಂಡು, ಅನೇಕ ಸಾರಿ ಮಂತ್ರಿಗಳಾಗಿ ಒಳ್ಳೆಯ ಖಾತೆಗಳನ್ನು ಹೊಂದಿ ಕೆಲಸ ಮಾಡಿದವರು. ಅವರಿಗೆ ಕಳಕಳಿ ಇದೆ. ಅವರು ಪ್ರಾಮಾಣಿಕವಾಗಿ ಹೇಳಲಿ, ಜೇವರ್ಗಿ ಬ್ರ್ಯಾಂಜ್‌ನ್ನು ಇವರು ಎಲ್ಲಿಗೆ ನಿಲ್ಲಿಸಿದ್ದರು? ನಾನೂ ಅವರೂ ಮೊಯಿಲಿಯವರ ಮಂತ್ರಿ ಮಂಡಲದಲ್ಲಿದ್ದೇವು ಜಿಲ್ಲೆಯದೇ ಜೇವರ್ಗಿ ಬ್ರ್ಯಾಂಜ್ ಈಗ ಎಷ್ಟು ಹೆಚ್ಚಾಗಿದೆ ಎನ್ನತಕ್ಕಂಥದ್ದನ್ನು ಅವರು ಹೇಳಬೇಕು, ಎರಡನೆಯದು, ಇಂಡಿ ಬ್ರ್ಯಾಂಜ್ ಎಲ್ಲಿಗೆ ನಿಲ್ಲಿಸಿದ್ದೇವೆ, ನಾರಾಯಣಪುರ ರೈಟ್ ಬ್ಯಾಂಕ್ ಇವತ್ತು, 75-85 ಕಿ.ಮಿ. ಗೆ ಹೋಗಿದ್ದೇವೆ. 1994 ರ ನವೆಂಬರ್‌ನಲ್ಲಿ ಎಲ್ಲಿಗೆ ನಿಂತಿತ್ತು, ಇನ್‌ಕ್ಲೂಡಿಂಗ್ ಆಲಮಟ್ಟಿ, ಬೆಣ್ಣೆತೊರ, ಅವರ ಜಿಲ್ಲೆಯಲ್ಲಿ ಎಲ್ಲಿಗೆ ನಿಂತಿತ್ತು, ಇವತ್ತು ಎಲ್ಲಿಗೆ ಬಂದಿದೆ, ಈ ಮೂರು ಪ್ರಾಜೆಕ್ಟ್ ಬಗ್ಗೆ ತಮಗೆ ಗೊತ್ತಿದೆ, ತಾವು ತಮ್ಮ ಬೆಳಗಾಮ್ ಜಿಲ್ಲೆಯಲ್ಲಿ ಮಾರುಕಟ್ಟೆ ಮಳಿಗೆ ಪೂಜೆ ಮಾಡಿದಾಗ ಲೊಯರ್ ಅಮರ್ಜ, ಅಪ್ಪರ್ ಅಮರ್ಜ್, ಚುಲ್ಕಿ, ಬೆಣ್ಣೆತೊರ, ಇನ್‌ಕ್ಲೂಡಿಂಗ್ ಗಂಡೋಜಿ ನಾಲ, ಎಲ್ಲಾ ಬ್ರ್ಯಾಂಜ್‌ಗಳಿಗೂ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇವತ್ತು ನಾವು ಅದಕ್ಕೆ ದೊಡ್ಡ ಚಾಲನೆ ಕೊಟ್ಟಿರುವುದರಿಂದ ಜನರಿಗೆ ನಂಬಿಕೆ ಬಂದಿದೆ. ಆಲಮಟ್ಟಿಯಲ್ಲಿ ಅಪ್ಪರ್ ಕೃಷ್ಣ ನೀರನ್ನು ಈ ಸರ್ಕಾರ ಕೂಡಿಡುತ್ತದೆ ಎಂದು ಹೇಳುವುದಕ್ಕೆ ಏನಾಗುತ್ತದೆ. 1994 ರಲ್ಲಿ ಅವರು ಏನು ಮಾಡಿದ್ದಾರೆ ಎಂದು ಹೇಳಿ, ನಾನು ಬೇಡ ಎಂದು ಹೇಳುವುದಿಲ್ಲ 94 ರಿಂದ ಈಚೆಗೆ ಆಗಿರತಕ್ಕ ಫಿಸಿಕಲ್ ವೆರಿಫಿಕೇಷನ್ ಮಾಡಿನೋಡಿ ಇದೇ ಪ್ರಮಾಣದಲ್ಲಿ ನಾವು ಹೋದರೆ ಇನ್ನು ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ 734 ಟಿಎಮ್‌ಸಿ ನೀರನ್ನು ನಾವು ಕೂಡಿಟ್ಟುಕೊಳ್ಳಬಹುದು. ಸುಮಾರು 75 ಭಾಗ ಸಿಸ್ಟಮ್ ಇಂಪ್ರೂವ್ ಮಾಡಬಹುದು. ಇನ್ನು

30 ಭಾಗ ಸಿಸ್ಟಮ್ ಡೆವಲಪ್ ಮಾಡುವುದಕ್ಕೆ We may need another two years or one year for the Channel works. ಇವತ್ತು ನಮ್ಮ 40 ವರ್ಷಗಳ 50 ವರ್ಷಗಳ ಕೆನಾಲ್ ಅನ್ನು ಇನ್ನೂ ರಿಪೇರಿ ಮಾಡುತ್ತಿದ್ದೇವೆ. 100 ವರ್ಷಗಳ ಕೆನಾಲ್ ಅನ್ನು ಇನ್ನೂ ರಿಪೇರಿ ಮಾಡುತ್ತಿದ್ದೇವೆ. For 7 districts in two years, we have spent 1700 crores. ಅವರು ಮಾಡಿದ್ದು ಎಲ್ಲಾ 1968 ರಿಂದ 70 ರಿಂದ ಈಚೆಗೆ ಎಷ್ಟು ಖರ್ಚಾಗಿದೆ, ಮಾನ್ಯ ಖರ್ಗೆಯವರ ಹತ್ತಿರ ಫಿಗರ್ಸ್ ಇದೆ, ಎಲ್ಲಾ ಅದು ಅವರ ಪಾಡಿಗೆ ಅವರ ನೋಟಿಸ್‌ಗೆ ಹೋಗುತ್ತದೆ, ತರಿಸಿ ನೋಡಲಿ, ಅದು ಅಷ್ಟೂ ಕಂಪೇರ್ ಮಾಡಿ, ಅವರು ಕೊಟ್ಟರೆ ಒಳ್ಳೆಯದು ಇಲ್ಲದಿದ್ದರೆ ನಾನೇ ಬೇಕಾದರೆ ಸ್ಟೇಟ್ ವೈಸ್ ಸ್ಟೇಟ್‌ಮೆಂಟ್ ಮಾಡುತ್ತೇನೆ. ಅವರು ಒಪ್ಪಿಕೊಂಡರೆ Before 94 and after 1994, each Major Project, medium project, Nabard Project, World Bank Project, State Projects, Krishna Bhagya Nigam Projects, can be comparted and let him give a Certificate later on.

ಶ್ರೀ ಬಿ.ಬಿ.ಶಿವಪ್ಪ : ಸನ್ಮಾನ್ಯ ಸಭಾಧ್ಯಕ್ಷರೆ, ಅವರು ಹೇಳಿದ್ದುದು ನಾನು ಒಪ್ಪಿಕೊಂಡೆ, ಇವರು ಹೇಳಿದ ಹಾಗೆ ಹಣ ಖರ್ಚಾಗಿದೆ, ಇನ್ನೂ ಹಣ ಖರ್ಚಾಗುತ್ತದೆ, ಕಟ್ಟೆ ಆಗುತ್ತಾ, ಇದರ ಬಗ್ಗೆ ನಾವು ಚಿಂತನೆ ಮಾಡಬೇಕು. ನಮ್ಮ ಕಡೆ ನಾವು ಇವತ್ತು ನೋಡುತ್ತಿದ್ದೇವೆ, ಸುಮಾರು ಹಣ ಖರ್ಚು ಮಾಡುತ್ತಿದ್ದಾರೆ. ನಮ್ಮಲ್ಲಿ ವಾಟೆಹೊಳೆ ಮುಂತಾದ ಅಣೆಕಟ್ಟುಗಳ ಕೆಲಸ ಆಗುತ್ತಿದೆ. ಇದೀಗ ಅವರು ನೂರು ವರ್ಷದ ಚಾನಲ್ ನಾವು ರಿಪೇರಿ ಮಾಡುತ್ತಿದ್ದೇವೆ ಎಂದು ಹೇಳಿದರು. ಆದರೆ ನೀವು ಈಗ ಕಟ್ಟುತ್ತಾ ಇರತಕ್ಕಂಥ ಚಾನಲ್‌ಗಳು ಮೂರೇ ವರ್ಷಕ್ಕೆ ರಿಪೇರಿಗೆ ಬರುತ್ತವೆ. ಮೂರು ವರ್ಷಕ್ಕೇ ಬೇರೆ ಚಾನಲ್ ಮಾಡಬೇಕಾಗುತ್ತದೆ. ಅಷ್ಟು ಕಳಪೆ ಕೆಲಸ ಅಲ್ಲಿದೆ. ನೀವು ಯಾವ ಜಾಗಕ್ಕೆ ಹೋಗಿ ನೋಡಿದರೂ ಕಳಪೆ ಕೆಲಸ. ಈಗ ಮಾನ್ಯ ನಾಗೇಗೌಡರು ಸ್ವಲ್ಪ ಬಿಗಿ ಮಾಡುತ್ತಿದ್ದಾರೆ. ಸ್ವಲ್ಪ ಬುದ್ಧಿ ಕಲಿಸುತ್ತಿದ್ದಾರೆ. ಆದರೂ ಕೂಡ ಇನ್ನು ಸ್ವಲ್ಪ ಜನಗಳ ಬುದ್ಧಿ ಕಲಿಸುವಂಥವರು ಇದ್ದಾರೆ ಅವರಿಗೂ ಕೂಡ ಸ್ವಲ್ಪ ಬಿಗಿಗೊಳಿಸಿದರೆ ಸರಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕೆಲವು ಬೋರ್ಡ್‌ಗಳು ಇವೆ. ಮಲೆನಾಡ್ ಡೆವಲಪ್‌ಮೆಂಟ್ ಬೋರ್ಡ್ ಮಾಡುವುದಕ್ಕೆ ಒಂದು ಮಲೆನಾಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದ್ದರು. ಆಮೇಲೆ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಮಾಡಿದರು, ಹೀಗೆ ಬೋರ್ಡ್‌ಗಳು ಮಾಡಿಕೊಂಡು ಅದ್ವಾನ ಆಗಿ ಹೋಗಿದೆ. ಅದರ ಬಗ್ಗೆ ಪ್ರಸ್ತಾಪ ಮಾಡುತ್ತ ಹೋದರೆ ಇನ್ನೂ ಒಂದು ಗಂಟೆ ಬೇಕಾಗುತ್ತದೆ. ಆದಕಾರಣ ಅದನ್ನು ಬಿಡಿ. ಅದಕ್ಕೆ ಬಹಳ ಸೂಕ್ತವಾದ ಸಲಹೆಯನ್ನು ಕೊಡುತ್ತಿದ್ದೇನೆ. ಮಾನ್ಯ ನಾಗೇಗೌಡರು ಗಮನಿಸಬೇಕು. ಪಾರ್ಲಿಮೆಂಟ್‌ನಲ್ಲಿ ಒಬ್ಬ ಸದಸ್ಯರಿಗೆ ಒಂದು ವರ್ಷಕ್ಕೆ ತನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಲು ಒಂದು ಕೋಟಿ ರೂಪಾಯಿ ಕೊಡುತ್ತಾರೆ. ಆದರೆ ನಮ್ಮಲ್ಲಿ ಎಲ್ಲಾ ಕ್ಷೇತ್ರಗಳ ಕೆಲಸಗಳು ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಮುಖಾಂತರ ಆಗುತ್ತಿವೆ. ಇವೊತ್ತು

ಶಾಸಕರು ಒಂದು ಜನತಾ ಮನೆಯನ್ನು ಕೊಡಿಸಬೇಕಾದರೂ ಕೂಡ ತಾಲ್ಲೂಕು ಅಧ್ಯಕ್ಷರ ಅಥವಾ ಇನ್ನೊಬ್ಬರ ಮರ್ಜಿಯಲ್ಲಿ ಹೋಗಬೇಕಾದಂಥ ವ್ಯವಸ್ಥೆಯನ್ನು ತಂದಿಟ್ಟಿದ್ದಾರೆ. ಚಿಂತೆ ಇಲ್ಲ, ಅವರು ಕೂಡ ಚುನಾಯಿತ ಪ್ರತಿನಿಧಿಗಳು, ಕೆಲಸ ಮಾಡಲಿ, ಒಳ್ಳೆಯ ಕೆಲಸ ಮಾಡಿದರೇ ಸಂತೋಷ. ಮೇಲ್ಮನೆ ಮತ್ತು ಕೆಳಮನೆ ಸೇರಿ ಮುನ್ನೂರು ಕೋಟಿ ರೂಪಾಯಿ ತೆಗೆದು ಇಟ್ಟು ಒಬ್ಬ ಶಾಸಕರಿಗೆ ಒಂದು ಕ್ಷೇತ್ರದಲ್ಲಿ ಎರಡು ಕೋಟಿ ರೂಪಾಯಿಯನ್ನು ಕೊಟ್ಟಿದ್ದೇ ಆದರೆ ನಿಜಕ್ಕೂ ಈ ರಾಜ್ಯವನ್ನು ಅಭಿವೃದ್ಧಿ ಮಾಡಬೇಕು ಎಂದು ಅಭಿಲಾಷೆ ನಿಮಗೆ ಇದ್ದರೆ, ಕಳಕಳಿ ಇದ್ದರೆ ಈ ವ್ಯವಸ್ಥೆಯನ್ನು ನೀವು ಮಾಡಿದರೆ ಖಂಡಿತ ನಿಮ್ಮ ದರ್ಬಾರ್‌ನಲ್ಲಿ ಈ ರಾಜ್ಯದ ಅಭಿವೃದ್ಧಿ ಆಗುವುದರಲ್ಲಿ ಅನುಮಾನವಿಲ್ಲ. ಪಕ್ಷಬೇದವಿಲ್ಲದೆ, ಅವರು ವಿರೋಧ ಪಕ್ಷದವರೇ ಇರಲಿ, ಅವರು ಆಡಳಿತ ಪಕ್ಷದವರೇ ಇರಲಿ, ಯಾರೇ ಇರಲಿ ಅವರ ಒಂದು ಕ್ಷೇತ್ರಕ್ಕೆ ಎರಡು ಕೋಟಿ ರೂಪಾಯಿ ಶಾಸಕರು ಕೆಲಸ ಮಾಡತಕ್ಕಂಥದ್ದಕೆ ನೀವು ಕೊಟ್ಟರೆ ಉತ್ತಮವಾದ ಕೆಲಸ ಶಾಸಕರು ಮಾಡುತ್ತಾರೆ ಎನ್ನುವ ಒಂದು ನಂಬಿಕೆ ಇದೆ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು ಎಂದು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಕೊನೆಯದಾಗಿ ಕೆ.ಎಸ್.ಆರ್.ಟಿ.ಸಿ. ಬಗ್ಗೆ. ಮಾನ್ಯ ಸಿಂಧ್ಯರವರು ಕೆ.ಎಸ್.ಆರ್.ಟಿ.ಸಿ. ಯನ್ನು ಭಾರಿ ಸುಧಾರಿಸಬೇಕು. ಗ್ರಾಮಾಂತರ ಪ್ರದೇಶದಲ್ಲಿ ನಷ್ಟ ಆಗುವುದಕ್ಕೆ ಸಾಧ್ಯವೇ ಇಲ್ಲ. ಹಿಂದೆ ಹತ್ತು ಹದಿನೈದು ಕಿ.ಮೀ. ನಡೆಯುತ್ತಿದ್ದ ವ್ಯಕ್ತಿ ಇವೊತ್ತು ಒಂದು ಕಿ.ಮೀ. ಗೂ ಬಸ್ಸಿಗಾಗಿ ಕಾಯುತ್ತಾನೆ. ಆದರೆ ಬಸ್ಸು ಯಾವ ಸಮಯಕ್ಕೆ ಬರುತ್ತದೆ. ಯಾವ ಸಮಯಕ್ಕೆ ಹೋಗುತ್ತದೆ ಎಂದು ನಿಗದಿ ಇಲ್ಲ. ಇವೊತ್ತು ಬಸ್ಸು ಬರುತ್ತದೆ ಇಲ್ಲವೋ ಗೊತ್ತಿಲ್ಲ, ನಿಂತೇ ಹೋಗಿ ಮಾರನೆ ದಿವಸ ಬರುತ್ತದೆ. ಈ ರೀತಿಯ ಅವ್ಯವಸ್ಥೆಗಳು. ನನ್ನ ಕ್ಷೇತ್ರದ ಒಂದು ಹಳ್ಳಿಯ 20-30 ವರ್ಷಗಳ ಬರತಕ್ಕಂಥ ಒಂದು ಬಸ್ಸನ್ನು ನಿಲ್ಲಿಸಿದ್ದಾರೆ. ಏತಕ್ಕೆ ನಿಲ್ಲಿಸಿದ್ದಾರೊ ಗೊತ್ತಿಲ್ಲ. ಹೀಗೆ 20-30 ವರ್ಷಗಳಿಂದ ಲಾಭದಾಯಕವಾಗಿ ಓಡಾಡುವಂಥ ಆ ಬಸ್ಸನ್ನು ನಿಲ್ಲಿಸಿದ್ದಾರೆ. ಎಲ್ಲಾ ಕ್ಷೇತ್ರದಲ್ಲೂ ಹೀಗೆ ನಿಲ್ಲಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ನಮ್ಮಲ್ಲಂತೂ ನಿಲ್ಲಿಸಿದ್ದಾರೆ. ಅದರ ಬಗ್ಗೆ ಅನೇಕ ಪತ್ರಗಳನ್ನು ನಾನು ಮಂತ್ರಿಗಳಿಗೆ ಬರೆದಿದ್ದೇನೆ. ಒಂದು ರೀತಿ ಅನಾಯಕತ್ವ ಉಂಟಾಗಿದೆ. ಇದರಿಂದಾಗಿ ನಮ್ಮಲ್ಲಿ ಕೆ.ಎಸ್.ಆರ್.ಟಿ.ಸಿ. ಯ ಹೆಸರನ್ನೇ ಬದಲಾಯಿಸಿ ಬಿಟ್ಟಿದ್ದಾರೆ. ಅದಕ್ಕೆ ಕಚಡಾ ಸರ್ವಿಸ್ ರನ್ ಬೈ ತರಲಿ ಆ್ಯಂಡ್ ಕಂಪನಿ ಎಂದು ಹೆಸರಿಟ್ಟಿದ್ದಾರೆ. ಈ ಮಟ್ಟಕ್ಕೆ ಕೆ.ಎಸ್.ಆರ್.ಟಿ.ಸಿ. ಹೋಗಿಬಿಟ್ಟಿದೆ. ಅದನ್ನು ಸರಿ ಮಾಡಬೇಕೆಂದು ಮಾನ್ಯ ಸಿಂಧ್ಯರವರು ಭಾರಿ ಕುಸ್ತಿ ಮಾಡುತ್ತಿದ್ದಾರೆ. ಆದರೆ ಕೆಲವೊಂದು ಸಾರಿ ನನಗೆ ಪ್ರಾಣ ಭಯ ಎನ್ನುತ್ತಾರೆ. ಅದ್ದರಿಂದ ಅವರು ಪ್ರಾಣಭಯ ಎಂದು ಹೆದರಿಕೊಂಡು ಹೋಗುತ್ತಾರೋ ಅಥವಾ ಅದನ್ನು ಏನಾದರೂ ಸರಿ ಮಾಡುತ್ತಾರೋ, ಕಾಯಕಲ್ಪ ಮಾಡುತ್ತಾರೋ ಗೊತ್ತಿಲ್ಲ. ಅದನ್ನು ನಾವು ಕಾದು ನೋಡಬೇಕಾಗಿದೆ. ಕೆ.ಎಸ್.ಆರ್.ಟಿ.ಸಿ. ಯನ್ನು ನೋಡಿದರೆ ಇವೊತ್ತು ಇದು ನಷ್ಟ ಇಲ್ಲದಿರುವ ಒಂದು ಕಸುಬು. ಬಸ್ಸಿನ ಮೇಲೆ 60 ಜನ ಇರುತ್ತಾರೆ. ಆದರೂ ಕೂಡ ನಷ್ಟ ಆಗುತ್ತದೆ, ಏಕೆ? ಮೊನ್ನೆ ಸಕಲೀಶಪುರ ಡಿಪೋದಲ್ಲಿ ಒಂದು ಮಾತನ್ನು ಹೇಳಿದರು. ಅಲ್ಲಿಯ ಡಿಪೋದಲ್ಲಿ 86 ಬಸ್ಸುಗಳು ಇವೆ, ಆದರೆ ಅಲ್ಲಿ ಒಟ್ಟು 92 ಬಸ್ಸುಗಳು ಬೇಕು. ಆದರೆ ಅಲ್ಲಿ 93 ಜನ ಮೆಕ್ಯಾನಿಕ್ಸ್ ಇದ್ದಾರೆ. ಇನ್ನೂ ಮೂರು ಮೆಕ್ಯಾನಿಕ್ ಪೋಸ್ಟ್ ಖಾಲಿ ಇದೆ

ಅವರನ್ನು ಅಪಾಯಿಂಟ್ ಮಾಡಬೇಕೆಂದು ಹೇಳಿ ಅವರು ಅಂಕಿ ಅಂಶವನ್ನು ಕೊಟ್ಟಿದ್ದಾರೆ. ಏನು ಸ್ವಾಮಿ ಇದು? ಈ ರೀತಿ ಆದರೆ ಕೆ.ಎಸ್.ಆರ್.ಟಿ.ಸಿ. ಲಾಭ ಬರುತ್ತದೆಯೇ? ಮೊನ್ನೆ 62 ಸಾವಿರ ಸಿಬ್ಬಂದಿ ಇದ್ದಾರೆ ಎಂದು ಕೂಡ ಹೇಳಿದ್ದಾರೆ. ಅಂದರೆ ಬಂದಂಥ ಉತ್ಪತ್ತಿ ಎಲ್ಲಾ ಸಿಬ್ಬಂದಿಗೆ ಆಗಿಹೋಯಿತು. ಇನ್ನು ಲಾಭ ಬರುವುದು ಹೇಗೆ? ಓಡುವಂಥ ಬಸ್ಸು ಸರಿಯಾಗಿ ಓಡುವುದಿಲ್ಲ. ಈ ಎಲ್ಲಾ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಸಕಲೇಶಪುರದಲ್ಲಿ ನನ್ನ ಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳಿಗೆ ಅವೆರಡನ್ನು ಸ್ವಾತಂತ್ರ್ಯ ಬಂದಂದಿನಿಂದ ಇಂದಿನವರೆಗೆ ಸಂಪೂರ್ಣವಾಗಿ ಕಡೆಗಾಣಿಸಿದ್ದಾರೆ, ಆಡಳಿತ ಮಾಡಿದಂಥ ಎಲ್ಲಾ ಪಕ್ಷಗಳು ಸಹಿತ. ಆ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಇದುವರೆಗೆ ಆಗಿಲ್ಲ. ಮೊನ್ನೆ ನಾಣಯ್ಯನವರು ಮಾತನಾಡುವಾಗ ನಮ್ಮಲ್ಲಿ 45 ಜನ ಮಂತ್ರಿಗಳಿದ್ದಾರೆ ನಾವು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿಕೊಂಡಿದ್ದಾರೆ. ತಮ್ಮ ಕಾಲದಲ್ಲಾದರೂ ಸಕಲೇಶಪುರದ ಕಡೆ ಅವಶ್ಯಕವಾಗಿ ಗಮನಹರಿಸಿ ಅತ್ಯವಶ್ಯಕವಾದ ಕೆಲಸವನ್ನು ಮಾಡಿ. ಅಲ್ಲಿ ಒಂದು ಕಟ್ಟಡ ಕೂಡ ಹೊಸದಾಗಿ ಕಟ್ಟಿಲ್ಲ. ಇವೊತ್ತು ನಮ್ಮ ತಾಲ್ಲೂಕು ಆಫೀಸ್, ಪೊಲೀಸ್ ಸ್ಟೇಶನ್, ನಡೆಯುತ್ತಿರತಕ್ಕಂಥದ್ದು ನಮ್ಮ 150 ವರ್ಷಗಳ ಕಟ್ಟಡದಲ್ಲಿ. ಒಂದೇ ಕಟ್ಟಡದಲ್ಲಿ ಜೈಲು, ಪೊಲೀಸ್ ಸ್ಟೇಶನ್, ಸರ್ಕಲ್ ಇನ್‌ಸ್ಪೆಕ್ಟರ್ ಆಫೀಸ್, ತಹಸೀಲ್ದಾರರ ಕಛೇರಿ, ಟ್ರೆಜರಿ ಇವೆಲ್ಲವನ್ನೂ ಒಂದು ಗುಂಪು ಕಟ್ಟಿ ಎಲ್ಲಾ ಒಂದೇ ಜಾಗದಲ್ಲಿಟ್ಟಿದ್ದಾರೆ. ಒಂದು ಸರಿಯಾದ ವ್ಯವಸ್ಥೆಯನ್ನು ಆ ಕ್ಷೇತ್ರದಲ್ಲಿ ಮಾಡಬೇಕು ಎಂದು ಕೇಳುತ್ತೇನೆ. ತಮ್ಮ ಸಮಯವನ್ನು ನಾನು ಭಾರೀ ಜಾಸ್ತಿ ತೆಗೆದುಕೊಂಡಿದ್ದೇನೆ. ಇನ್ನೂ ತುಂಬಾ ಮಾತನಾಡುವುದಿತ್ತು. ಆದರೆ ಕೇವಲ ಇನ್ನೂ 10-15 ದಿವಸಗಳಲ್ಲಿ ತಾವು ಮತ್ತೊಂದು ಸದನವನ್ನು ಕರೆಯುತ್ತೀರಿ ಎಂದು ಹೇಳಿರುವುದರಿಂದ ನನ್ನ ಮಾತನ್ನು ಇಲ್ಲಿಗೆ ಕಡಿತಗೊಳಿಸಿ ನನಗೆ ಅವಕಾಶ ಕೊಟ್ಟ ತಮಗೆ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಸಗೀರ್ ಅಹ್ಮದ್‌ರವರೇ ನೀವು ಬೇಗ ಮುಗಿಸಬೇಕು. ನೀವು ಮಾತನಾಡುವಾಗ ಆ ಕಡೆ ಈ ಕಡೆ ನೋಡಬೇಡಿ. ನನ್ನ ಕಡೆ ನೋಡಿ ಮಾತನಾಡಿ ಬೇಗ ಮುಗಿಯುತ್ತದೆ.

+ ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೆ ನಾನಿನ್ನು ಶುರುನೇ ಮಾಡಿಲ್ಲ ಆಗಲೇ ತಾವು ಬೇಗ ಮುಗಿಸಿ ಎಂದರೆ ಯಾರಿಗೆ ಮುಗಿಸಲಿ?

ಶ್ರೀ ಎನ್.ರಾಜಣ್ಣ : ನನ್ನದೊಂದು ಪಾಯಿಂಟ್ ಆಫ್ ಆರ್ಡರ್,

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ನೋಡಿ ಅಲ್ಲಿ, ನಾನು ಇನ್ನೂ ನಿಲ್ಲಲೇ ಇಲ್ಲ ಅಷ್ಟರಲ್ಲಿ ಏನು ಪಾಯಿಂಟ್ ಬಂತು ಎಂದು ಕೇಳಿ ಅವರಿಗೆ ಯಾವುದೋ ಒಂದು ಪಾಯಿಂಟಿನ ರೋಗ ಇರಬೇಕು.

SRI N.RAJANNA : I am on a point of order. Rule 24 says:

"The Speaker may, if he thinks fit, prescribe a time limit for speeches after taking the sense of the House."

I want to know what is the time limit to Mr.Sagir Ahmed?

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮಾನ್ಯ ಉಪಾಧ್ಯಕ್ಷರೆ, ಅವರು ಬ್ರಿಟೀಷರ ಕಾಲದಲ್ಲಿ ಇದ್ದಂಥ ಜನ. ಅವರ ಇಂಗ್ಲೀಷ್ ಕತೆ ನೋಡಿ ಏನಾಗಿದೆ ಎಂದು. ನನ್ನ ಭಾಷಣ ಪ್ರಾರಂಭ ಮಾಡುವುದಕ್ಕೆ ಮುಂಚೆ ತಮ್ಮಲ್ಲಿ ನನ್ನ ವಿನಂತಿ ಏನೆಂದರೆ ಸರ್ಕಾರ ನಡೆಸುವಂಥ ಮಂತ್ರಿಗಳಾಗಲಿ, ಶಾಸಕರಾಗಲಿ ಟೀಕೆ ಮಾಡುವುಂಥದ್ದು ಸಹಜ. ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವಂಥ ಈ ಸಂದರ್ಭದಲ್ಲಿ ನಿಮ್ಮ ಕಾಲದಲ್ಲಿ ಆಗಿಲ್ಲವೇನೋ ಎನ್ನುವಂಥ ಪ್ರಶ್ನೆ ಉದ್ಭವವಾಗುತ್ತದೆ. ನಮ್ಮ ಕಾಲದಲ್ಲಿ ಆಗಿರತಕ್ಕಂಥ ಎಲ್ಲಾ ವಿಚಾರಗಳನ್ನು ಕರ್ನಾಟಕದ ಜನರು ಅರ್ಥ ಮಾಡಿಕೊಂಡು ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. ಅದೇ ರೀತಿ ನೀವು ಮಾಡಬೇಕು ಎನ್ನುವ ಆಸೆ ನಿಮಗೆ ಇದ್ದರೆ ನೀವು ಇಲ್ಲಿಗೆ ಬನ್ನಿ ನಾವು ಅಲ್ಲಿಗೆ ಹೋಗುತ್ತೇವೆ, ಅದರಲ್ಲೇನೂ ಅನುಮಾನ ಇಲ್ಲ. ಸನ್ಮಾನ್ಯ ಉಪಾಧ್ಯಕ್ಷರೆ, ತಮಗೆ ತಿಳಿದ ಹಾಗೆ ಅನೇಕ ಭಕ್ತಾದಿಗಳು ದೇವಾಲಯಗಳ ದರ್ಶನಕ್ಕೆ ಹೋಗುತ್ತಾರೆ. ಅವರು ದರ್ಶನಕ್ಕೆ ಹೋಗುವಂಥ ಸಂದರ್ಭದಲ್ಲಿ ಮನಸ್ಸಿನಲ್ಲಿ ಒಂದು ಆಸೆ ಇರುತ್ತದೆ. ಅದು ಏನೆಂದರೆ ನನ್ನ ಕುಟುಂಬದಲ್ಲಾಗಲಿ, ನನ್ನ ಜೀವನದಲ್ಲಾಗಲಿ ಇರುವಂಥ ಕಷ್ಟ ಸುಖಗಳಿಗೆ ಪರಿಹಾರ ಸಿಗಬಹುದು ಎನ್ನುವ ಉದ್ದೇಶದಿಂದ ಜನ ದೇವಾಲಯಗಳಿಗೆ ಹೋಗುತ್ತಾರೆ. ಪ್ರಾಯಶಃ ಆ ಭಾವನೆಯಿಂದ ದೇವರು ಅವರು ಕೇಳುವಂಥ ವಿಚಾರದಲ್ಲಿ ಅವರಿಗೆ ಆಶೀರ್ವಾದ ಒದಗಿಸಿಕೊಡುತ್ತಾನೆ ಎಂದು ನಾನು ನಂಬಿದ್ದೇನೆ.

(ಈ ಸಂದರ್ಭದಲ್ಲಿ ಶ್ರೀ ಜಿ.ಎಸ್. ಶಿವನಂಜಪ್ಪರವರು ಅಧ್ಯಕ್ಷ ಪೀಠವನ್ನಲಂಕರಿಸಿದರು) ಇವರು ಅಧಿಕಾರಕ್ಕೆ ಬರುವಂಥ ಸಂದರ್ಭದಲ್ಲಿ ಇವರ ವಿಚಾರಗಳನ್ನು ನಾವು ಇವೊತ್ತು ಕಾಂಗ್ರೆಸ್‌ನವರು ಬಿ.ಜೆ.ಪಿ. ಯವರ ಜೊತೆ, ಬಿ.ಜೆ.ಪಿ. ಯವರು ಕಾಂಗ್ರೆಸ್ಸಿನವರ ಜೊತೆ ಸೇರುತ್ತಾರೆಂದು ಇವರು ಹೇಳುತ್ತಾರೆ. ಇವರು ಆಡಳಿತ ಮಾಡಿರುವಂಥ ಸಂದರ್ಭದಲ್ಲಿ ಇವರು ಒಟ್ಟಾಗಿರುವ ದಾಖಲೆಗಳು ಈ ದೇಶದಲ್ಲಿ ಇಲ್ಲವೇ ಎನ್ನುವಂಥಾದ್ದು ಒಂದು ಪ್ರಶ್ನೆ. ಜೊತೆಗೆ ಇಲ್ಲಿ ಕುಳಿತಿರುವಂಥ ಶಾಸಕ ಮಿತ್ರರು, ಆಳುವ ಪಕ್ಷದ ಸದಸ್ಯರು, ಮಂತ್ರಿಗಳು ಅಧಿಕಾರಕ್ಕೆ ಬರುವಂಥ ಸಂದರ್ಭದಲ್ಲಿ ಎರಡು ರಾಜಕೀಯ ಪಕ್ಷಗಳ ಹೆಸರನ್ನು ತೆಗೆದುಕೊಂಡಿದ್ದಾರೆ. ಒಂದು ಕಾಂಗ್ರೆಸ್, ಇನ್ನೊಂದು ಬಿ.ಜೆ.ಪಿ. ಇದು ಬಹಿರಂಗವಾಗಿ ಹೇಳುವ ವಿಚಾರ, ಅದರಲ್ಲಿ ಮುಚ್ಚು-ಮರೆ ಏನೂ ಇಲ್ಲ. ಬಾಬರಿ ಮಸೀದಿ ಹೊಡೆದವರು ಒಬ್ಬರು, ಹೊಡಿಸಿದವರು ಒಬ್ಬರು ಎಂದು ಹೇಳಿ ಇವರು ಅಧಿಕಾರಕ್ಕೆ ಬಂದರು. ವಿ.ಪಿ. ಸಿಂಗ್ ರವರು ಸರ್ಕಾರ ನಡೆಸಲಿಕ್ಕೆ ಕಾಂಗ್ರೆಸ್‌ನವರು ಸಹಕಾರ ಕೊಟ್ಟಿದ್ದರೇ? ಭಾರತದಲ್ಲಿ "ರತಿ" ಯಾತ್ರೆಯನ್ನು ತೆಗೆಯಲಿಕ್ಕೆ ಕಾಂಗ್ರೆಸ್‌ನವರು ಅನುಮತಿ ಕೊಟ್ಟಿದ್ದರೇ? ಇದು ಮರೆತು ಹೋಗಿದೆ ಎಂದು ಕಾಣುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಅದರ ರತಿ ಯಾತ್ರೆಯಲ್ಲ, ರಥ ಯಾತ್ರೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಈಗ ಮಾನ್ಯ ನಾಗೇಗೌಡರು ಬಹಳ ಪ್ರೀತಿ ವಿಶ್ವಾಸದಿಂದ ಹೇಳಿದರು. ಜೇವರ್ಗಿಯಲ್ಲಿ ಭಾರಿ ನೀರಾವರಿ ಸಚಿವರಾಗಿ ನಾವು ಮಾಡಿದ್ದೇವೆ ಎಂದು ಹೇಳಿದರು. ಈಗಲೂ ಕೂಡ ಅವರಿಗೆ ಕಾಂಗ್ರೆಸ್‌ನವರ ಮೇಲೆ ಬಹಳ ಪ್ರೀತಿ ಇದೆ. ಆದುದರಿಂದ ಆ ಭಾಗದಲ್ಲಿ ಸ್ವಲ್ಪ ದಬಾಯಿಸಿ ಕೆಲಸ ಮಾಡುತ್ತಿದ್ದಾರೆ. ಆದುದರಿಂದ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ.

(ಈ ಸಂದರ್ಭದಲ್ಲಿ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಕೆ.ಎನ್.ನಾಗೇಗೌಡ : ಈಗ ಮಾನ್ಯ ಅಧ್ಯಕ್ಷರು ಬಂದಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಅಧ್ಯಕ್ಷರು ಬರಲಿ, ಅವರು ನನ್ನ ಮೇಲೆ ಇಟ್ಟಿರುವಂಥ ಪ್ರೀತಿ ವಿಶ್ವಾಸಕ್ಕೆ ನಾನು ಯಾವಾಗಲೂ ಅವರಿಗೆ ಚಿರಋಣಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಗೀರ್ ಅಹಮದ್‌ರವರು ಮಾತನಾಡುವಾಗ ದಯವಿಟ್ಟು ತಾವು ವಿಶೇಷವಾಗಿ ಅವರ ಭಾಷಣವನ್ನು ಗಮನಿಸಬೇಕು. ಇಲ್ಲದಿದ್ದರೆ ಅಪಾರ್ಥಗಳು ಆಗಿಬಿಡುತ್ತವೆ. ಏಕೆಂದರೆ ರಥಯಾತ್ರೆ ಎನ್ನುವ ಬದಲು ರತಿಯಾತ್ರೆ ಎಂದಿದ್ದಾರೆ.

ಅಧ್ಯಕ್ಷರು : ನಾನು ಅದಕ್ಕೇ ಓಡಿಬಂದೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ನಾನು ರಥಯಾತ್ರೆ ಎಂದೇ ಹೇಳಿದ್ದುದು. ನಾನು ಅವರಿಂದ ಕಲಿಯಬೇಕಾಗಿಲ್ಲ, ಅವರೆಲ್ಲ ಬಂದು ಎರಡೆರಡು ವರ್ಷಗಳಾಗಿವೆ, ನಾನು ಬಂದು ಏಳು ವರ್ಷಗಳಾಯಿತು. ಕನ್ನಡದ ಬಗ್ಗೆ ಏನು ಮಹತ್ವವಿದೆ ಎನ್ನುವುದು ನನಗೆ ಗೊತ್ತಿದೆ. ನಾನು ಅವರಿಗೆ ಕಲಿಯಬೇಕೇ? ನಮ್ಮ ಅಧ್ಯಕ್ಷರೇ ಹೇಳಿದ್ದಾರೆ, ನೀವು ರಾಜ್ಯದ ಮಂತ್ರಿಯಾಗಿ ಸೇವೆ ಸಲ್ಲಿಸಿ ಹೆಚ್ಚು ಅನುಭವವನ್ನು ಪಡೆದಿದ್ದೀರಿ ಎಂದು ಹೇಳುತ್ತಾರೆ. ಇದಕ್ಕಿಂತ ಜಾಸ್ತಿ ಗೌರವ ನನಗೆ ಬೇಕೆ; ಏನ್ರಿ ಹೇಳುತ್ತೀರಿ; ಈ ಮಾತನ್ನು ಸುಮಾರು ಹತ್ತು ಬಾರಿ ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಇವೊತ್ತು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವಂಥ ಈ ಸಂದರ್ಭದಲ್ಲಿ ಈ ಸರ್ಕಾರ ಇಡೀ ರಾಜ್ಯದ ಜನರಿಗೆ ಒಂದು ಆಶ್ವಾಸನೆ ಕೊಟ್ಟಿದೆ. ನಾನು ಹೇಳುತ್ತಿದ್ದೆ, ದೇವರ ದರ್ಶನ ಮಾಡುವಂಥ ಸಂದರ್ಭದಲ್ಲಿ ಭಕ್ತಾದಿಗಳು ಮನಃಪೂರ್ವಕವಾಗಿ ದರ್ಶನ ಮಾಡುವಾಗ ಅದರ ಪ್ರತಿಫಲ ಆ ದೇವರು ಒದಗಿಸಿಕೊಡುತ್ತಾನೆಂದು ಜನತಾ ದರ್ಶನ ಕಾರ್ಯಕ್ರಮವನ್ನು ಇಡೀ ರಾಜ್ಯದಲ್ಲಿ ಹಾಕಿಕೊಂಡು ಸುತ್ತಾಡಿ ಲಕ್ಷಾಂತರ ಅರ್ಜಿಗಳನ್ನು ಅರ್ಜಿಗಳನ್ನು ರಾಜ್ಯದ ಜನರಿಂದ ಸ್ವೀಕಾರ ಮಾಡಿದಿರಲ್ಲ, ಆ ಅರ್ಜಿಗಳ ಗತಿ ಏನಾಯಿತು ಸ್ವಾಮಿ? ನೀವು ಎರಡು-ಮೂರು ಕಡೆ ಏನು ಹೇಳಿದಿ ಎಂದರೆ, ಅನುಕಂಪದ ಆಧಾರದ ಮೇಲೆ ನಾಲ್ಕು ವರ್ಷಗಳ ಕಾಲ ವಿದಾನ ಸೌಧದ ಮೆಟ್ಟಿಲನ್ನು ಸುತ್ತಿ ಬಳಸಿದರೂ ಇಲ್ಲಿಯವರೆವಿಗೂ ಕೆಲಸ ಸಿಕ್ಕದೇ ಇದ್ದಂಥ ಕನ್ನಡಿಗನ ಕಷ್ಟಸುಖಗಳ ತಿಳಿವಳಿಕೆಗಾಗಿ ನಾನು ಈ ಜನತಾ ದರ್ಶನವನ್ನು ನಡೆಸುತ್ತಿದ್ದೇನೆ ಎಂದು ತಾವು ಹೇಳಿದಿರಿ. ಆ ಅರ್ಜಿಗಳೆಲ್ಲ ಏನಾದವು ಎಂದು ಸರ್ಕಾರದವರು ಹೇಳಲಿ. ಜನತಾ ದರ್ಶನ ಮೂಲಕ ಸ್ವೀಕಾರ ಮಾಡಿರುವಂಥ

ಅರ್ಜಿಗಳಲ್ಲಿ ಎಷ್ಟು ಅರ್ಜಿಗಳಿಗೆ ಪರಿಹಾರ ದೊರಕಿದೆ. ಈ ಜನತಾ ದರ್ಶನದ ಕಾರ್ಯಕ್ರಮಕ್ಕೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದಿರಿ. ಆದರೆ ಸ್ವೀಕಾರ ಮಾಡಿದ ಅರ್ಜಿಗಳು ಎಲ್ಲಿಗೆ ಹೋಯಿತು? ಸನ್ಮಾನ್ಯ ರಾಜ್ಯಪಾಲರು ಭಾಷಣ ಮಾಡುತ್ತಾ ಏನು ಹೇಳಿದ್ದಾರೆಂದರೆ:

> "We have tried to tune up the administration and gear up the machinery for redressal of the public grievances. The Janatha Darshan Programme organised in the Districts took the Government Virtually to the doorsteps of the people and evoked very good response."

ರಾಜ್ಯಪಾಲರು ದಿನಾಂಕ 19-2-96 ರ ಫೆಬ್ರವರಿಯಂದು ಮಾಡಿರುವಂಥ ಭಾಷಣದ ಪ್ರತಿಯಲ್ಲಿ ಈ ವಿಚಾರ ಇದೆ. ಆದುದರಿಂದ ನಾನು ಕೇಳುತ್ತಿದ್ದೇನೆ, ಸ್ವೀಕಾರ ಮಾಡಿದಂಥ ಈ ಅರ್ಜಿಗಳ ಸಂಖ್ಯೆಯ ಪ್ರಕಾರ ಈ ರಾಜ್ಯದ ಜನರು ಏನು ಬೇಡಿಕೆಗಳನ್ನು ಅರ್ಜಿಗಳಲ್ಲಿ ಕೇಳಿದ್ದರೋ ಆ ಬೇಡಿಕೆಗಳನ್ನು ಈಡೇರಿಸುವುದರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ. ರಾಜ್ಯಪಾಲರು ಅಂದು ತಮ್ಮ ಭಾಷಣದಲ್ಲಿ ಇದಕ್ಕೆ ಬೇಕಾದಂಥ ಒಂದು ವಿಶೇಷವಾದ 'ಸೆಲ್' ನ್ನು ಪ್ರಾರಂಭ ಮಾಡುತ್ತೇವೆಂದು ಸರ್ಕಾರದ ಪರವಾಗಿ ಹೇಳಿದ್ದಾರೆ. ಆ ಸೆಲ್ ಮಾಡುವ ಬಗ್ಗೆ It had now been brought under the direct corntrol of the Chief Minister. ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಈ ಅರ್ಜಿಗಳನ್ನು ಪರಿಶೀಲನೆ ಮಾಡುವಂಥ ವಾಗ್ದಾನ ಮಾಡಿದಂಥ ಈ ಸರ್ಕಾರದಲ್ಲಿ ಜನತಾ ದರ್ಶನದ ಮೂಲಕ ಸ್ವೀಕಾರ ಮಾಡಿದ ಅರ್ಜಿಗಳು ಎಲ್ಲಿಗೆ ಹೋದವು ಎಂದು ನಾನು ಕೇಳುತ್ತೇನೆ. ಇದಕ್ಕೆ ಪ್ರಾಯಶಃ ಜನರೇ ಉತ್ತರ ನೀಡುತ್ತಾರೆಂದು ನಾನು ಭಾವಿಸುತ್ತೇನೆ. ಕೇವಲ ಒಂದು ಆಶ್ವಾಸನೆಯನ್ನು ಕೊಟ್ಟು ಲಕ್ಷಾಂತರ ಅರ್ಜಿಗಳನ್ನು ಸಂಗ್ರಹಿಸಿ ಅದರಲ್ಲಿ ಶೇಕಡ 10 ಕ್ಕಾದರೂ ಪರಿಹಾರ ಕಂಡುಹಿಡಿಯದಿರುವ ಬಗ್ಗೆ ಈ ಸದನಕ್ಕೆ ನೀವು ತಿಳಿಸದೇ ಹೋದರೂ ಸಹ ರಾಜ್ಯದ ಸಾರ್ವಜನಿಕರಿಗೆ ತಿಳಿಸುವಂಥ ಪ್ರಯತ್ನವನ್ನು ಈ ಸರ್ಕಾರ ಮಾಡಬೇಕು. ಆದರೆ ತಮ್ಮ ಆಯಸ್ಸು ಹೆಚ್ಚು ಕಡಿಮೆ ಈಗ $2^1/_4$ ವರ್ಷ ಕಳೆದಿದೆ. ಇನ್ನು ಉಳಿದಿರುವಂಥದ್ದು ಕೇವಲ $2^3/_4$ ವರ್ಷ. ಈಗಾಗಲೇ ನಿಮಗೆ ಯಾವ ರೀತಿಯಲ್ಲಿ ಕಾಯಿಲೆ ಹಿಡಿದಿದೆ ಎಂದರೆ ಪ್ರಾಯಶಃ ಹಂತ ಹಂತವಾಗಿ 'ಕುಷ್ಠರೋಗ' ಎಂದು ಏನು ಹೇಳುತ್ತೇವೆ ಆ ರೀತಿಯ ಕಾಯಿಲೆ ಈ ಸರ್ಕಾರಕ್ಕೆ ಹಿಡಿದಿದೆ. ಈಗಾಗಲೇ ತಮ್ಮ ಬೆರಳುಗಳು ಹೋಗುವಂಥದ್ದನ್ನು ನಾವು ನೋಡುತ್ತಿದ್ದೇವೆ. ಈ ರಾಜ್ಯದ ಕನ್ನಡಿಗರು ನೋಡುತ್ತಿದ್ದಾರೆ. ಆ ನಂತರ ಕೈ ಹೋಗುವಂಥ ಸಂದರ್ಭ ಕಂಡುಬರುತ್ತಿವೆ. ಬೆನ್ನು, ಕಾಲು ಹೋಗುವಂಥ ಸಂದರ್ಭಗಳು ಕಾಣಬರುತ್ತಿದೆ.

ಶ್ರೀ ಎನ್. ರಾಜಣ್ಣ (ಭಾರತಿನಗರ) : ನಮ್ಮ ಕೈ ಹೋಗುವುದಿರಲಿ ಇವರ ಕೈ ಯಾವಾಗಲೋ ಹೋಗಿಬಿಟ್ಟಿದೆ. ನಿಮ್ಮ ಕೈ ಮೋಸ ಮಾಡಿ ಈಗ ಔಟ್ ಆಫ್ ಆರ್ಡ್‌ರ್

ಆಗಿದೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಕಾಂಗ್ರೆಸ್ ಅಂಗವಿಕಲವಾಗಿದೆ ಎಂದೇ ನಾವು ಈ ಕಡೆ ಕುಳಿತಿದ್ದೇವೆ. ಇವರೂ ಕೂಡ ಹಾಗೇ ಆಗಬೇಕೆನ್ನುವ ಆಸೆಯನ್ನು ಇಟ್ಟುಕೊಂಡಿದ್ದಾರೆಯೇ ಎಂದು ಅವರನ್ನು ಕೇಳಿ.

ಶ್ರೀ ಎನ್. ರಾಜಣ್ಣ : ನಮ್ಮ ಕೈಗೆ ಬರಬಾರದ್ದು ಏನೂ ಬಂದಿಲ್ಲ. ನಿಮ್ಮ ಕೈ ಪಿಕ್ ಪಾಕೆಟ್ ಮಾಡುವ, ಲೂಟಿ ಮಾಡುವ, ಚೈನ್ ಹೊಡೆಯುವ ಕೈ. ಆದರೆ ನಮ್ಮ ಕೈ ಶುದ್ಧವಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೆ, For Your information, we are physically handicapped people. ನಾವು ಎಂದು ಹೇಳಿದ್ದೇನೆ, ನೀವು ಹೇಳಲಿಲ್ಲ. We will try our level best to set right things Mr.Rajanna.

(Interruprions)

Yes, people have given a very good government for which we are giving a prize now. Wait and see. ಇಷ್ಟು ಬೇಗ ಏಕೆ ತಲೆ ಕೆಡೆಸಿಕೊಳ್ಳುವುದಕ್ಕೆ ಹೋಗುತ್ತೀರಿ. ನಾಳೆಗೆ ಜನತಾ ದರ್ಶನಕ್ಕೆ ಈ ಕಥೆಯಾದರೆ ಮುಗಿಯಿತಲ್ಲಾ ನಿಮ್ಮದು.

ಅಧ್ಯಕ್ಷರು : ಏನು ವಾಟಾಳ್ ನಾಗರಾಜ್‌ರವರೇ, ಇಂಗ್ಲೀಷ್ ಇಲ್ಲಿ ಹರಿದು ಹೋಗುತ್ತಿದೆ. ಆದರೆ ನೀವು ಸುಮ್ಮನೇ ಶ್ರೀರಾಮರೆಡ್ಡಿಯವರ ಜೊತೆಯಲ್ಲಿ ಮಗ್ನರಾಗಿಬಿಟ್ಟಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದ್ದಕ್ಕಿದ್ದ ಹಾಗೆ ರಾಜಣ್ಣನವರು 'ಹೋ' ಎಂದು ಬಿಟ್ಟರು. ನಮಗೆ ಹೆದರಿಕೆಯಾಗಿ ಗಪ್‌ಚಿಪ್ ಎಂದು ಸುಮ್ಮನೇ ಕುಳಿತುಬಿಟ್ಟೆವು.

ಶ್ರೀ **ವಾಟಾಳ್ ನಾಗರಾಜ್** : ನಿಜವಾಗಿಯೂ ಹಾಗೇ ಆಯಿತು. ನಾವು ಏನೋ ಮಾತನಾಡಬೇಕು ಎನ್ನುವಷ್ಟರಲ್ಲಿ ಭಯಂಕರವಾದ ಶಬ್ದ ಕೇಳಿದ ಹಾಗಾಯಿತು. ನಮ್ಮ ಸಗೀರ್ ಅಹಮದ್‌ರವರು ಬಹಳ ಚೆನ್ನಾಗಿ ಕನ್ನಡದಲ್ಲಿ ಮಾತನಾಡುತ್ತಾರೆ. ಏಕೆ ಅವರಿಗೆ ಇಂದು ಈ ದುರ್ಗತಿ ಬಂತೋ ನನಗೆ ಗೊತ್ತಿಲ್ಲ. ಅವರು ಸಚಿವರಾಗಿದ್ದಾಗ ಅವರ ಭಾಷಣವನ್ನು ಕೇಳಿದ್ದೇನೆ. ಬಹಳ ಆತ್ಮೀಯರಾಗಿರುವವರು. ಆದರೆ ಈ ರೀತಿಯ ಇಂಗ್ಲೀಷ್ ಕಾಯಿಲೆ ಏಕೆ ಬಂತೋ ಗೊತ್ತಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ತಾವು ಹಿರಿಯ ಸದಸ್ಯರು. ನೀವು ಹೇಳಿದ ಹಾಗೆ ನಾನು ನಿಮ್ಮ ಬಗ್ಗೆ, ಮಾನ್ಯ ಅಧ್ಯಕ್ಷರ ಬಗ್ಗೆ ಅಪೂರವಾದ ಗೌರವ, ಆಪಾರವಾದ ಗೌರವ ಇಟ್ಟುಕೊಂಡಿರುವವನು.

ಶ್ರೀ **ವಾಟಾಳ್ ನಾಗರಾಜ್** : ಆಪಾರವಾದ ಅಭಿಮಾನ ಹೋಗಿ ಅಪೂರವಾದ ಅಭಿಮಾನ ಆದರೆ ಹಣೆಬರಹ ಏನು.?

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಅಪಾರವಾದ ಗೌರವ ಎಂದೇ ನಾನು ಹೇಳಿದ್ದುದು. ಇಲ್ಲಿ ಏನಾಗಿದೆ ಎಂದರೆ ನನಗೆ ಶಾಂತ ರೀತಿಯಲ್ಲಿ ಮಾತನಾಡುವುದಕ್ಕೆ ಆ ಭಾಗದ ಸದಸ್ಯರು ಅವಕಾಶ ಕೊಡುತ್ತಿಲ್ಲ. ಕಾರಣ.... ಏನೆಂದರೆ,

ಅಧ್ಯಕ್ಷರು : ಸಗೀರ್‌ರವರೇ, ನೀವು ಕನ್ನಡ ಮಾತನಾಡಿದ ಹಾಗೇ ಒಬ್ಬರಿಗೆ ಹಿಂದಿಯಲ್ಲಿ ಟೆಲಿಗ್ರಾಂ ಬಂತಂತೆ. ಸೇಠ್ ಲಕ್ನೋದಿಂದ ವಾಪಸ್ ಬರಬೇಕಾಗಿದ್ದವರು ಆದರೆ ಅವರು ಆಜ್ಮೀರ್‌ಗೆ ಹೋದರು. ಸೇಠ್ ಆಜ್ಮೀರ್ ಗಯಾ ಎಂದು ಟೆಲಿಗ್ರಾಂ ಮನೆಗೆ ಕಳುಹಿಸಬೇಕಾಗಿತ್ತು. ಆದರೆ ಸೇಠ್ ಆಜ್ ಮರ್ ಗಯಾ ಎಂದು ತಿಳಿದು ಕೊಳ್ಳುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರ ಮೇಲೆ ಸಗೀರ್ ಅಹಮದ್‌ರವರಿಗೆ ಬಹಳ ಅಪರೂಪವಾದ ಗೌರವ ಇದೆ ಎಂದು ಹೇಳಿ ಅಪಾರವಾದ ಎಂದು ಹೇಳುವ ಬದಲು ಅಪೂರವಾದ ಗೌರವ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಈಗಾಗಲೇ ಸುಮಾರು ಪದಗಳನ್ನು ಅವರು ಹೇಳಿದ್ದಾರೆ. ಆದರೆ ಅವರು ಧೈರ್ಯವಾಗಿ ಕನ್ನಡದಲ್ಲಿ ಭಾಷಣ ಮಾಡುತ್ತಾರಲ್ಲ ಅದನ್ನು ನಾವು ಮೆಚ್ಚಬೇಕಾಗುತ್ತದೆ. ಅದನ್ನು ನಾವು ನೋಡಿ ಖುಷಿ ಪಡಬೇಕು.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ನನಗೆ ಗೌರವವನ್ನು ತಾವು ಕೊಡುತ್ತೀರಿ. ಅದಕ್ಕೆ ನಾನು ಮತ್ತೊಮ್ಮೆ ಚಿರಋಣಿ. ನಮ್ಮ ರಾಜ್ಯದ ಈ ಕನ್ನಡ ಭಾಷೆಗೆ ಇದರದೇ ಆದಂಥ ಇತಿಹಾಸ ಇರುವಂಥ ಭಾಷೆ ಬಗ್ಗೆ ನಾವು ಈ ಸದನದಲ್ಲಿ ಬಹಳಷ್ಟು ಮಾತನಾಡುತ್ತೇವೆ. ಆದರೆ ಈ ಭಾಷೆ ಬಗ್ಗೆ ಗೌರವ ಕೊಡುವಂಥ ಜನ ಯಾರು ಎಂದು ಹೇಳಿ ಇಲ್ಲಿಯವರೆವಿಗೂ ಕಂಡುಹಿಡಿಯವುದಕ್ಕೆ ಸಾಧ್ಯವಾಗಿಲ್ಲ. ಸರ್ಕಾರಿ ನೌಕರಿಗಳಲ್ಲಿ ಅಲ್ಪಸಂಖ್ಯಾತರಿಗೆ ಅವಕಾಶ ಸಿಕ್ಕುವುದಿಲ್ಲ ಎನ್ನುವಂಥ ಕಾರಣದಿಂದ ಇವೊತ್ತು ಅಲ್ಪಸಂಖ್ಯಾತರೂ ಕೂಡ ಕನ್ನಡವನ್ನು ಕಲಿಯುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಾನು ಮಾತನಾಡುವ ಸಂದರ್ಭದಲ್ಲಿ ಮಾನ್ಯ ವಾಟಾಳ್‌ರವರು ಹೇಳಿದ ಹಾಗೆ ನಾನು ಅಂಗ್ಲೋ ಭಾಷೆಯಲ್ಲಿಯೇ ಮಾತನಾಡಬೇಕಾಗಿತ್ತು. ಆದರೆ ಈ ಜನ ನನಗೆ ಅವಕಾಶ ಕೊಟ್ಟು ಕನ್ನಡದಲ್ಲಿಯೇ ಮಾತನಾಡಲು ಸಂದರ್ಭವನ್ನು ಒದಗಿಸಿಕೊಟ್ಟಿದ್ದಾರೆ. ನಾನು ಇವೊತ್ತಿಗೂ ಕನ್ನಡದಲ್ಲಿಯೇ ಮಾತನಾಡಬೇಕೆಂದು ಪ್ರಯತ್ನ ಪಡುತ್ತಿದ್ದೇನೆ. ಸಾಕಷ್ಟು ಪುಸ್ತಕಗಳನ್ನು ಓದುತ್ತೇನೆ, ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮ ರೀತಿಯಲ್ಲಿ ಕನ್ನಡ ಮಾತನಾಡುವಂಥ ಪ್ರಯತ್ನವನ್ನು ಮಾಡಿಕೊಳ್ಳುತ್ತಿದ್ದೇನೆ. ನನ್ನ ಕುಟುಂಬದಲ್ಲಿ ಇರತಕ್ಕಂಥ ಮಕ್ಕಳ ವಿದ್ಯಾಭ್ಯಾಸವನ್ನು ಕನ್ನಡ ಭಾಷೆಯಲ್ಲಿಯೇ ಕೊಡಿಸುತ್ತಿದ್ದೇನೆ. ಆ ಬಗ್ಗೆ ಕುಟುಂಬದವರಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಆದರೆ ನಾವು ವಾಟಾಳ್ ನಾಗರಾಜ್‌ರವರು ಮಾತನಾಡುವ ಹಾಗೆ ಮಾತನಾಡಲು ಆಗದಿರಬಹುದು. ಆದರೆ ನಮ್ಮದೇ ಆದಂಥ ಈ ಭಾಷೆ ಬಗ್ಗೆ ಏನಾಗಿದೆ ಎಂಬ ಬಗ್ಗೆ ಚಿಂತನೆ ಮಾಡುವಂಥ ಸ್ಥಿತಿ ಇವೊತ್ತು ಇಲ್ಲ. ನಾನು ಒಂದು ತಪ್ಪು ಮಾತನಾಡಬಹುದು. ಅನೇಕರು ಬೇರೆಬೇರೆ ರೀತಿಯಲ್ಲಿ ಮಾತನಾಡುವವರು ಇದ್ದಾರೆ. ಆಗ ನಾವು ಎದ್ದು ಮಾತನಾಡುವುದಿಲ್ಲ. ಏಕೆಂದರೆ ಅವರು ಬರತಕ್ಕಂಥ ಭಾಗದಂತೆ ಅವರ ಭಾಷೆ ಇರುತ್ತದೆ. ಆಗ ಮಾತುಗಳು ಆಕಸ್ಮಾತ್ ತಪ್ಪಾಗುತ್ತವೆ. ನಾನು ಹುಟ್ಟಿನಿಂದ ಕನ್ನಡಿಗ. ಆದರೆ

ನನಗೆ ಕನ್ನಡಕಲಿಯುವಂತಹ ಅವಕಾಶ ಕಲ್ಪಿಸಿ ಕೊಡದೇ ಇರುವುದರಿಂದ ನಾನು ಅಷ್ಟು ಸ್ವಚ್ಛವಾಗಿ ಕನ್ನಡದಲ್ಲಿ ಮಾತನಾಡುವುದಕ್ಕೆ ಸಾಧ್ಯವಾಗದೇ ಹೋದರೂ ಸಹ ಮಾತನಾಡುತ್ತೇನೆ. ಗುಲ್ಬರ್ಗ ಬಿಜಾಪುರದ ಕಡೆ ಯಾವರೀತಿ ಮಾತನಾಡುತ್ತಾರೆ ಎನ್ನುವುದು ನನಗೆ ಗೊತ್ತಿದೆ. ಅದನ್ನೆಲ್ಲಾ ಮಾತನಾಡುವುದಕ್ಕೆ ಹೋಗಬಾರದು. ಕುಮಾರಸ್ವಾಮಿಯವರು ಅಲ್ಲಿ ಕುಳಿತು ಹೇಳಿಬಿಟ್ಟರು ಸಗೀರ್ ಅಹಮದ್ ಸಾಹೇಬರು ತಪ್ಪು ಮಾತನಾಡುತ್ತಾರೆ ಎಂದು.

ಶ್ರೀ **ಗುರುಪಾದಪ್ಪ ನಾಗಮಾರಪಲ್ಲಿ** : ನಮ್ಮ ಕನ್ನಡಕ್ಕಿಂತ ನಿಮ್ಮ ಕನ್ನಡ ಚೆನ್ನಾಗಿ ಇದೆ. ಅದನ್ನು ನಾವು ಒಪ್ಪುತ್ತೇನೆ.

ಶ್ರೀ **ಸಿ.ಆರ್. ಸಗೀರ್ ಅಹಮದ್** : ದೇಶಪಾಂಡೆಜೀ ಅವರ ಕನ್ನಡಕ್ಕಿಂತ ಚೆನ್ನಾಗಿ ಇದೆಯೋ.

ಶ್ರೀ **ಗುರುಪಾದಪ್ಪ ನಾಗಮಾರಪಲ್ಲಿ** : ಮಾನ್ಯ ವಾಟಾಳ್ ನಾಗರಾಜ್‌ರವರೇ ಬೀದರ್ ಭಾಷೆಯಲ್ಲಿ ಒಂದು ಹೇಳುತ್ತೇನೆ, 'ಮಾರುತ್ಯಾನ್ ಕಟ್ಟೆ ಮೇಲೆ ಸೂಯರ್ರ್ಯಾ ಬಂದಿತ್ತು, ಬೆಟ್ಸಾಕ್ಕೆ ಹೋಗಿದ್ದೆ, ಬೈರ್ರ್ಯಾದ ಮೇಲೆ ಜೋಡಾ ಇಟ್ಟಿದ್ದೆ, ಕುತ್ಕೊಂಡುಬಿಲ್ಲಿ ಬಂದು ಎತ್ತಿಕೊಂಡು ಹೊರಟುಹೋಯಿತು' ಇದರ ಅರ್ಥ ಹೇಳಿ.

ಶ್ರೀ **ಸಿ.ಆರ್. ಸಗೀರ್ ಅಹಮದ್** : ಅದರ ಅರ್ಥ ನನಗೆ ಆಗಿಲ್ಲ, ಅದರ ಅರ್ಥ ಹೇಳಿ. ಮಾತನಾಡಲಿಕ್ಕೆ ಹತ್ತುತ್ತೇನೆ ಎನ್ನುತ್ತಾರೆ.

ಶ್ರೀ **ವಾಟಾಳ್ ನಾಗರಾಜ್** : ಅಂಕದೊಂಕ: ಅವನ ತಮ್ಮನಾ ಕರಿಗುಡ್ಡದ ಮೇಲೆ...

ಶ್ರೀ **ಗುರುಪಾದಪ್ಪ ನಾಗಮಾರಪಲ್ಲಿ** : ಅಲ್ಲಿ ಕನ್ನಡ ಎಂದರೆ ಮರಾಠಿ, ಹಿಂದಿ, ಕನ್ನಡ ಮಿಕ್ಸ್ ಮಾಡಿ ಮಾತನಾಡುವಾಗ ಗೊತ್ತಾಗುವುದಿಲ್ಲ, ಅದಕ್ಕಿಂತ ಇವರು ಚೆನ್ನಾಗಿ ಮಾತನಾಡುತ್ತಾರೆ ಎಂದು ಹೇಳಿದ್ದುದು.

ಶ್ರೀ **ಸಿ.ಆರ್. ಸಗೀರ್ ಅಹಮದ್** : ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯದಲ್ಲಿ ಅನೇಕ ಸಮಸ್ಯೆಗಳು ಇಲ್ಲದೇ ಹೋದರೂ ಸಹ ಸಮಸ್ಯೆಗಳನ್ನು ಹುಟ್ಟುಹಾಕಿ ಸಾರ್ವಜನಿಕರ ಗಮನವನ್ನು ಸರ್ಕಾರದ ಕಡೆ ತರುವುದರಲ್ಲಿ ಈ ಸರ್ಕಾರ ಯಶಸ್ವಿಯಾಗಿದೆ. ಯಾವ್ಯಾವ ವಿಚಾರಗಳನ್ನು ಹೇಳಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ. 47 ವರ್ಷಗಳ ಕಾಲ ರಾಜ್ಯಭಾರ ಮಾಡಿದಂತಹ ರಾಜಕೀಯ ಪಕ್ಷ ಈ ರಾಜ್ಯಕ್ಕೆ ಏನೂ ಮಾಡಲಿಲ್ಲ. ಈ ರಾಜ್ಯದ ಜನರ ಬಗ್ಗೆ ಏನೂ ಚಿಂತನೆ ಮಾಡಲಿಲ್ಲ, ಈ ರಾಜ್ಯದ ಬಡ ಜನರ ಬಗ್ಗೆ ಏನೂ ಚಿಂತನೆ ಮಾಡಲಿಲ್ಲ, ಈ ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ, ಅಲ್ಪಸಂಖ್ಯಾತರ ಬಗ್ಗೆ ಏನೂ ಚಿಂತನೆ ಮಾಡಿಲ್ಲ. ನಾನು ಒಂದು ವಿಚಾರವನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುತ್ತೇನೆ. ನಾವು ಏನೇ ತಪ್ಪು ಮಾಡಿರಬಹುದು, ಜನರು ಏನೇ ತೀರ್ಪು ಕೊಟ್ಟಿರಬಹುದು, ಹಿಂದಿನ ಕಾಂಗ್ರೆಸ್ ಪಕ್ಷದ ಸರ್ಕಾರ ಹಾಕಿಕೊಂಡಿರುವಂತಹ ಜನಪರ ಕಾರ್ಯಕ್ರಮಗಳ ಹೆಸರುಗಳನ್ನೂ ಸಹ ಬದಲಾವಣೆ ಮಾಡುವಂತಹ ಶಕ್ತಿ ನಿಮಗೆ ಸಿಗಲಿಲ್ಲ. ಆಶ್ರಯ ಯೋಜನೆ ಎಂದು ಹೇಳುವಂತಹ ಒಂದು ಕಾರ್ಯಕ್ರಮದ ಹೆಸರನ್ನು ಬದಲಾವಣೆ ಮಾಡುವುದಕ್ಕೆ ಆಗಲಿಲ್ಲ. ಆರಾಧನಾ ಎಂದು ಪ್ರಾರಂಭ

ಮಾಡಿದಂತಹ ಯೋಜನೆಯ ಹೆಸರನ್ನು ಬದಲಾವಣೆ ಮಾಡುವುದಕ್ಕೆ ನಿಮಗೆ ಶಕ್ತಿ ಬರಲಿಲ್ಲ. 'ವಿಶ್ವ' ಎಂದು ಕೈಗಾರಿಕಾ ತರಬೇತಿ ಕೊಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದರ ಬಗ್ಗೆ ಹೆಸರು ಬದಲಾವಣೆ ಮಾಡಲಿಲ್ಲ. ಮತ್ತೇ ನೀವು ಕಾಂಗ್ರೆಸ್‌ನವರು ಏನು ಮಾಡಿದ್ದೀರಿ ಎಂದು ಹೇಳುತ್ತೀರಿ ನೋಡಿ ನೀವು ಮಾಡಿದ್ದೇ ನಾವು ಮಾಡುವುದು ಎಂದು ಹೇಳುತ್ತೇನೆ ಹಾಗಾದರೆ ನೀವು ಹೊಸ ಯೋಜನೆಗಳನ್ನು ಹಮ್ಮಿಕ್ಕೊಂಡಿರುವಂಥಾದ್ದು ಏನು? ಯಾವ್ಯಾವುದು ಎಂದು ಹೇಳೋಣ. ಇವತ್ತು ಅಕ್ರಮವಾಗಿ ಜಮೀನು ಮಾಡಿಕೊಂಡಿರುವುದನ್ನು ಸಕ್ರಮಗೊಳಿಸುವುದರ ಬಗ್ಗೆ ತಾವು ಕಾನೂನು ತಂದಿದ್ದೀರಾ? ಭ್ಯೂ ನ್ಯಾಯ ಮಂಡಲಿಯನ್ನು ರಚನೆ ಮಾಡಿರುರಂತಹ ಕಾನೂನನ್ನು ದಳ ಸರ್ಕಾರ ತಂದಿದ್ದೀರಾ? ದಿವಂಗತ ಶ್ರೀಮಾನ್ ದೇವರಾಜ್ ಅರಸ್ ಅವರನ್ನು ರಾಜ್ಯದ ಕನ್ನಡಿಗರು ಅದರಲ್ಲೂ ವಿಶೇಷವಾಗಿ ಹಿಂದುಳಿದ ವರ್ಗದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನ ಜ್ಞಾಪಿಸಿಕೊಳ್ಳಬೇಕು. ಸನ್ಮಾನ್ಯ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ತಂದಂತಹ ಮಸೂದೆಯನ್ನು ಈಗ ತಾವು ಮಾಡಿದ್ದೀರಿ ಎಂದು ಹೇಳುತ್ತೀರೋ ಅಥವಾ ಕಾಂಗ್ರೆಸ್‌ನವರು ಹಾಳು ಮಾಡಿದ್ದೀರಿ ಎಂದು ಹೇಳುತ್ತೀರೋ? ನಾನು ಹೇಳುವುದಾದರೆ ಇವರು ಮಾಡಿದಂತಹ ರಾಜಕಾರಣದ ಫಲಿತಾಂಶ ಮುಂದಿನ ದಿನಗಳಲ್ಲಿ ಸಿಗುತ್ತದೆಂದು ನಾನು ಭಾವಿಸುತ್ತೇನೆ. ಉದಾಹರಣೆಗೆ ನಾನು ಹೇಳುವುದೇನೆಂದರೆ ಹುಬ್ಬಳ್ಳಿಯಲ್ಲಿರುವ ಈದ್ಗಾ ಮೈದಾನದ ಬಗ್ಗೆ, ಬಿ.ಜೆ.ಪಿ.ಯವರು ಒಂದು ಕಡೆ ವಾದ ಮಾಡಿದರೆ, ಕಾಂಗ್ರೆಸ್‌ನವರು ಒಂದು ಕಡೆ ವಾದ ಮಾಡುತ್ತಿದ್ದುರು. ಆದರೆ ಧ್ವಜರೋಹಣ ಮಾಡಿದ ತಕ್ಷಣ ತಾವು ಸಮಸ್ಯೆ ಬಗೆಹರಿದಿದೆ ಎಂದು ಹೇಳುತ್ತೀರಿ. ರಾಜಕೀಯವಾಗಿ ಆ ಭಾಗದ ಅಲ್ಪಸಂಖ್ಯಾತರ ಸಹಕಾರ, ಸಹಾಯ ಪಡೆಯುವುದಕ್ಕೋಸ್ಕರ ತಾವು ಈ ಒಂದು ರಾಜಕಾರಣ ಮಾಡಿದಿರಿ. ಅದರ ಫಲ ಏನು ಸಿಕ್ಕಿತು, ಏನೂ ಸಿಗಲಿಲ್ಲ. ಧ್ವಜಾರೋಹಣ ಮಾಡವರಂತಹ ಸಂದರ್ಭದಲ್ಲಿ ಮನಃಪೂರ್ವಕವಾಗಿ ಈ ದೇಶದ ಧ್ವಜವನ್ನು ಹಾರಿಸುವುದಕ್ಕೆ ಯಾವ ಮುಸಲ್ಮಾನರ ವಿರೋಧವೂ ಇರಲಿಲ್ಲ. ರಾಜಕೀಯವಾಗಿ ಮತ್ತು ನ್ಯಾಯಾಲಯಗಳ ತೀರ್ಪಿನ ಅಡಚಣೆಗಾಗಿ ಧ್ವಜಾರೋಹಣ ಮಾಡುವಂತಾದ್ದರ ಬಗ್ಗೆ ವಿಳಂಬವಾಗಿತ್ತೇ ವಿನಃ ಕಾಂಗ್ರೆಸ್ ಪಕ್ಷದವರಾಗಲಿ ಅಥವಾ ಅಲ್ಲಿ ವಾಸಿಸುತ್ತಿರುವಂತಹ ಅಲ್ಪಸಂಖ್ಯಾತರಾಗಲಿ ನಮ್ಮದೇ ಆದಂತಹ ಧ್ವಜವನ್ನು ಹಾರಿಸುವ ಬಗ್ಗೆ ಯಾವತ್ತು ಸಹ ವಾದವಿವಾದ ನಡೆದಿದ್ದಲ್ಲ. ಆದರೆ ಧ್ವಜರೋಹಣವನ್ನು ಮಾಡಿ ಅಲ್ಲಿ ಇದ್ದಂತಹ ಒಗ್ಗಟ್ಟಿನ ಸಂಸ್ಥೆ ಅಂಜುಮಾನ್ ಸಂಸ್ಥೆಯಲ್ಲಿ ಒಡಕನ್ನು ತಂದು ಅಲ್ಪಸಂಖ್ಯಾತರ ಮನವೊಲಿಸುವಂತಹ ಪ್ರಯತ್ನ ಮಾಡಿದಂತಹ ಸಂದರ್ಭದಲ್ಲಿ ಚುನಾವಣೆ ನಡೆಸುವುದಕ್ಕಾಗಿ ತಾವು ಅಡ್ಡಿ ಪಡಿಸಿದ್ದೀರಿ. ಇವತ್ತು ಏನಾಯಿತು? ನಿಮ್ಮ ಭಾಗದ, ನಿಮ್ಮ ನಾಯಕರ, ನಿಮ್ಮ ಕಾರ್ಯಕರ್ತರು ಇವತ್ತು ಆ ಅಂಜುಮಾನ್ ಸಂಸ್ಥೆ ನಡೆಯುವಂತಹ ಸಂದರ್ಭದಲ್ಲಿ ಸೋಲು ಅನುಭವಿಸಬೇಕಾದಂತಹ ಪರಿಸ್ಥಿತಿಯನ್ನು ತಮ್ಮ ಕಣ್ಣೆದುರಿಗೆ ನೋಡಿದಿರಿ. ಸರ್ಕಾರ ಇದ್ದು, ಸರ್ಕಾರದ ಮಂತ್ರಿಗಳಿದ್ದು, ಸಂಬಂಧಪಟ್ಟಂತಹ ಒಬ್ಬ ಮಂತ್ರಿಗಳಿದ್ದರೂ ಸಹ ಇವತ್ತು ಚುನಾವಣೆ ನಡೆಯುವಂತಹ ಸಂದರ್ಭದಲ್ಲಿ ಸೋಲನ್ನು ಅನುಭವಿಸಬೇಕಾಯಿತು. ಹಾಗಾದರೆ ತಾವು ಇವತ್ತು ಅಲ್ಪಸಂಖ್ಯಾತರು ತಮ್ಮ ಹಿಂದೆ ಇದ್ದಾರೆ ಎಂದು ಭಾವಿಸಿದರೆ ಪ್ರಾಯಶಃ ಮುಂದಿನ ದಿನಗಳಲ್ಲಿ ಇದರ ಫಲಿತಾಂಶ ನಿಮಗೆ ಸಿಗುತ್ತದೆಂದು ನಾನು ಭಾವಿಸುತ್ತೇನೆ. ತಾವು ಪದೇಪದೇ ಹೇಳುತ್ತೀರಿ, ಕಾಂಗ್ರೆಸ್‌ನವರು ಬಿಜೆಪಿ ಯವರ

ಜೊತೆಗೆ ಶಾಮೀಲಾಗಿದ್ದಾರೆ ಎಂದು. ಇಲ್ಲಿ ನಗರಾಭಿವೃದ್ಧಿ ಸಚಿವರು ಕುಳಿತಿದ್ದಾರೆ, ರಾಮನಗರದಲ್ಲಿ ನಡೆದಂತಹ ನಗರಸಭಾ ಚುನಾವಣೆ, ನಿಮ್ಮ ಕಡತದಲ್ಲಿ, ಸರ್ಕಾರಿ ಆದೇಶಗಳಲ್ಲಿ ಸತತವಾಗಿ ಅಲ್ಪಸಂಖ್ಯಾತ ಕೋಮಿಗೆ ಸೇರಿದ ಒಬ್ಬ ವ್ಯಕ್ತಿ ಅಧ್ಯಕ್ಷನಾಗಿ ಬರುತ್ತಿದ್ದ ಸಂದರ್ಭದಲ್ಲಿ ಬಿಜೆಪಿ ಐದು ಜನ ಸದಸ್ಯರನ್ನು ಒಳಗೊಂಡು ತಾವು ಜನತಾ ದಳದ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡಿಲ್ಲವೋ? ಇವತ್ತು ಅಲ್ಪಸಂಖ್ಯಾತರ ಮನವೊಲಿಸುವಂತಹ ಮಾತುಗಳನ್ನು ಆಡುವಂತಹ ಪ್ರಯತ್ನಗಳನ್ನು ತಾವು ಮಾಡುತ್ತಿರೋ ಅದನ್ನು ಸಾಬೀತು ಪಡಿಸಿ. ಅದರ ಫಲಿತಾಂಶ ರಾಮನಗಲದಲ್ಲಿ ನಡೆದಂತಹ ಚುನಾವಣೆಯಲ್ಲಿ ಜನತಾ ದಳದವರು ಮಾಡಿರುವಂತಹ ಈ ಪ್ರಯತ್ನಗಳು, ಅವರಿಗೆ ಸೋಲಿಸಿರುವಂತಹ ವಿಚಾರಗಳನ್ನು ಗಮನಲ್ಲಿಟ್ಟುಕೊಂಡು, ಯಾವರೀತಿ ತಾವು ಅವರನ್ನು ಸೋಲಿಸುವಂತಹ ಪ್ರಯತ್ನ ಮಾಡಿದಿರೋ, ಆ ಸಮಯ ಬಂದಾಗ ತಮ್ಮನ್ನು ಸೋಲಿಸಿ ಕಳುಹಿಸಿರುವಂತಹ ವಿಚಾರ ತಮ್ಮ ಗಮನದಲ್ಲಿದೆ. ಆದರೂ ತಾವೆಲ್ಲಾ ಸದಸ್ಯರು ಹೇಳುತ್ತೀರಿ, ಸರ್ಕಾರ ಆಳುವಂತಹವರು ಹೇಳುತ್ತೀರಿ, ಕಾಂಗ್ರೆಸ್‌ನವರು ಬಿಜೆಪಿ ಜೊತೆ ಶಾಮೀಲಾಗಿದ್ದಾರೆ ಎಂದು. ರಾಜ್ಯಪಾಲರ ಭಾಷಣದಲ್ಲಿ ಒಂದು ಕಡೆ ಹೇಳುತ್ತಾರೆ ಮೈ ಗೌರ್ವನ್ಮೆಂಟ್, ಬೇಡ ಇಂಗ್ಲೀಷ್‌ನಲ್ಲಿ ಹೇಳಿದರೆ ವಾಟಾಳರು ಬೈಯ್ದಾರು. ಇಲ್ಲಿ ನಸ್ನದೇ ಆದಂತಹ ಭಾಷೆಯಲ್ಲಿ ಮಾತನಾಡುವುದಕ್ಕೆ ನನಗೇನೂ ಹೆದರಿಕೆ ಇಲ್ಲ. ಸ್ವಲ್ಪ ಹೆಚ್ಚು ಕಡಿಮೆ ಆಗಬಹುದು. ಹಶ್ಮಿಯವರು ಮಾತನಾಡುವಾಗಲೂ ನನಗೆ ಸಂತೋಷವಾಗುತ್ತದೆ. ಏಕೆಂದರೆ ಅವರು ಬೀದರ್, ಗುಲ್ಬರ್ಗ ಕಡೆ ನಡೆಯುವಂತಹ ಉರ್ದು ಭಾಷೆ ಬಿಟ್ಟು ಪ್ರಯತ್ನ ಮಾಡಿ ಕನ್ನಡದಲ್ಲಿ ಮಾತನಾಡುವ ಪ್ರಯತ್ನ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಖಂಡ್ರೆ ಯವರ ಕನ್ನಡಕ್ಕಿಂತಲೂ ಬಹಳ ಚೆನ್ನಾಗಿ ಮಾತನಾಡುತ್ತೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ, ನನ್ನ ಸರ್ಕಾರ ಹೆಣ್ಣುಮಕ್ಕಳ ಶೋಷಣೆಗೆ ಒಳಪಟ್ಟಿದಂತಹ ಜನಾಂಗ ಮತ್ತು ಅಲ್ಪಸಂಖ್ಯಾತರ ರಕ್ಷಣೆ ಮಾಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ, ಅದಕ್ಕಾಗಿ ಬದ್ಧರಾಗಿದ್ದೇವೆ ಎಂದು ಹೇಳಿದ್ದಾರೆ. ಏನು ಸ್ವಾಮಿ ತಾವು ಮಾಡಿರುವಂಥ ವಿಚಾರಗಳಾದರು ಏನು? ಅನೇಕ ಜನ ನಮ್ಮ ಮಿತ್ರರು ಇವೊತ್ತು ಮಾತನಾಡಿದ್ದಾರೆ. ಕಾನೂನು ವ್ಯವಸ್ಥೆಯಲ್ಲಿ ಈ ಸರ್ಕಾರ ವಿಫಲವಾಗಿದೆ ಎಂಬುವುದರ ಬಗ್ಗೆ ದಾಖಲಾತಿಗಳನ್ನು ನಾವು ಇನ್ನು ಹೊಂದಿಸಿಕೊಡಬೇಕು. ಮಾನ್ಯ ಗೃಹಮಂತ್ರಿಗಳು ಮೊನ್ನೆ ಹೇಳುತ್ತಿದ್ದರು, ನೀವು ನಮಗೆ ಕೃತಜ್ಞತೆ ಸಲ್ಲಿಸಬೇಕು ಕಾನೂನು ವ್ಯವಸ್ಥೆ ಈ ರಾಜ್ಯದಲ್ಲಿ ಬಹಳ ಉತ್ತಮವಾಗಿದೆ ಎಂದು. ಇತಿಹಾಸದ ಪುಟಗಳಲ್ಲಿ ಬರೆಯುವಂಥ ದಿನಗಳು ನಿಮ್ಮ ಸರ್ಕಾರ ಆಳುತ್ತಿರುವಂಥ ಈ ಸಂದರ್ಭದಲ್ಲಿ ಘಟನೆಗಳು ನಡೆದಿರೆ. ಉದಾಹರಣೆಗೆ ಚಿತ್ತರಂಜನ್‌ನವರು ಕೊಲೆ. ಯಾವುದೇ ಪಕ್ಷಕ್ಕೆ ಸಂಬಂಧಪಟ್ಟಿರತಕ್ಕಂಥ ಒಬ್ಬ ಶಾಸಕರಾಗಲೀ, ಇಲ್ಲಿ ಬಿ.ಜೆ.ಪಿ. ಶಾಸಕ ಎಂದು ಹೇಳಿ ನಾವೇನು ಚಿನ್ಹೆ ಹಾಕಿಕೊಂಡು ಬರುವುದಿಲ್ಲ, ಕಾಂಗ್ರೆಸ್ ಶಾಸಕರು ಎಂದು ನಾವೇನು ಚಿನ್ಹೆ ಹಾಕಿಕೊಂಡು ಬರುವುದಿಲ್ಲ ಅಥವಾ ಜನತಾದಳ ಶಾಸಕರು ಎಂದು ಹೇಳಿ ನಾವೇನು ಚಿನ್ಹೆ ಹಾಕಿಕೊಂಡು ಬರುವುದಿಲ್ಲ . ಆದರೆ ಒಬ್ಬ ಶಾಸಕನ ಹತ್ಯೆಯಾಗಿರುವ ಸಂದರ್ಭದಲ್ಲಿ ಸರ್ಕಾರ ನಡೆಸಿರುವ ಪ್ರಯತ್ನ ಏನು? ಈ ಕೊಲೆ ಆರೋಪಿಗಳನ್ನು ಬಂಧಿಸಲಾಗಿದೆಯೋ? ಇದೇ ರೀತಿಯಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಸರ್ವಸದಸ್ಯರು ಸಭೆ

ನಡೆಯುವಂಥ ಸಂದರ್ಭದಲ್ಲಿ ಒಬ್ಬ ನಗರಸಭಾ ಸದಸ್ಯನ ಕೊಲೆಯಾಗುತ್ತದೆ ಎಂದು ಹೇಳಿದರೆ ಯಾವರೀತಿಯಲ್ಲಿ ತಾವು ಈ ರಾಜ್ಯದ ಜನರಿಗೆ ರಕ್ಷಣೆ ನೀಡುತ್ತಿದ್ದೀರಿ ಎನ್ನುವುದರ ಬಗ್ಗೆ ನಾನು ಯಾವ ಯಾವ ವಿಚಾರಗಳನ್ನು ಇವೊತ್ತು ಈ ಸದನಕ್ಕೆ ತರಬೇಕು ಎಂದು ಕೇಳಬೇಕಾಗುತ್ತದೆ. ಹೌದು ಒಪ್ಪುತ್ತೇನೆ, ಅನೇಕ ಜನ ಸದಸ್ಯರು ಹೇಳುತ್ತಾರೆ ನಿಮ್ಮ ಕಾಲದಲ್ಲಿ ಗೋಲಿಬಾರ್ ಆಗಿಲ್ಲವೋ, ನಿಮ್ಮ ಕಾಲದಲ್ಲಿ ಲಾಕಪ್‌ಡೆತ್ ಆಗಿಲ್ಲವೋ, ನಿಮ್ಮ ಕಾಲದಲ್ಲಿ ದರೋಡೆ ನಡೆದಿಲ್ಲವೋ ಎಂದು. ಅದು ನಡೆದಿರುವುದರಿಂದ ನಾವು ಇಲ್ಲಿ ಬಂದಿದ್ದೇವೆ. ಹಾಗಾದರೆ ನೀವು ಮಾಡಿರುವ ವಿಚಾರವೆಲ್ಲ ಮಾಡುತ್ತೀರೇನು? ಹೌದು ಕಾಂಗ್ರೆಸ್‌ನವರು ಹಾಕಿರುವ ಹೆಜ್ಜೆಗಳ ಮೇಲೆ ತಾವು ನಡೆಯುತ್ತೀರೋ ಎಂದು ಒಂದೇ ಒಂದು ಪ್ರಶ್ನೆ ನನ್ನದು. ಹಾಗಾದರೆ ತಾವು ಜನರಿಗೆ ಆಶ್ವಾಸನೆ ಕೊಟ್ಟು ಈ ದೇಶದಲ್ಲಿ ರಕ್ಷಣೆ ಕೊಡುವುದರ ಜೊತೆಗೆ ಶೋಷಣೆಗೆ ಒಳಪಟ್ಟಿದ್ದಂಥ ಜನಾಂಗ ಇರಬಹುದು, ಅಲ್ಪಸಂಖ್ಯಾತರು ಇರಬಹುದು, ಹಿಂದುಳಿದಂಥ ವರ್ಗದವರು ಇರಬಹುದು. ಅವರಿಗೆ ರಕ್ಷಣೆ ಕೊಡುವುದರಲ್ಲಿ ತಾವು ವಿಫಲರಾಗಿಲ್ಲವೆ ಎಂದು ಈ ಸದನದಲ್ಲಿ ಅಧ್ಯಕ್ಷರ ಮುಖಾಂತರ ನಾನು ಪ್ರಶ್ನೆ ಹಾಕುತ್ತೇನೆ. ಆ ದೃಷ್ಟಿಯಿಂದ ತಮ್ಮ ಸರ್ಕಾರ ಕಾನೂನು ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಗೃಹಸಚಿವರು ಹೇಳಿದ ಹಾಗೆ ನಿಮ್ಮ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುವಂಥ ದಿನ ಬಹಳ ದೂರವಿಲ್ಲ, ಬಹಳ ಬೇಗನೆ ಅಭಿನಂದನೆಯನ್ನು ಸಲ್ಲಿಸುವಂಥ ದಿನಗಳು ಬರುತ್ತವೆ. ಏಕೆಂದರೆ ಜನ ಹೇಳುತ್ತಿದ್ದಾರೆ, ಇವೊತ್ತು ನಾವು ಹೇಳುವಂಥ ವಿಚಾರ ಅಲ್ಲ. ಸನ್ಮಾನ್ಯ ಅಧ್ಯಕ್ಷರೆ, ಈ ರೈತರಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮ. ಇದರಲ್ಲಿ ಏನು ಹೇಳುತ್ತಾರೆ ಎಂದರೆ,

> "My Government intends to provide a Sharper focus to the development of rainfed agriculture on a watershed basi. With this in view, we shall be launching a special watershed development programme based on Israeli technology in one district of each revenue division of the State"

ಎಲ್ಲಿದೆ ಸ್ವಾಮಿ? ಏಕೆಂದರೆ, ಸನ್ಮಾನ್ಯ ಬೈರೇಗೌಡರು ಇಲ್ಲಿ ಕುಳಿತಿದ್ದಾರೆ. ಇಸ್ರೇಲ್ ದೇಶದ ಟೆಕ್ನಾಲಜಿ ಮೇಲೆ ನಾವು ರೈತರಿಗೆ ಅನುಕೂಲವನ್ನು ಒದಗಿಸಿಕೊಡುತ್ತೇವೆ, ಆ ಟೆಕ್ನಾಲಜಿಯ ಪ್ರಕಾರ ರೈತರಿಗೆ ಸಾಕಷ್ಟು ವಿಚಾರದಲ್ಲಿ ನಾವು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ ಎಂದು ಹೇಳುವುದರ ಜೊತೆಗೆ ಇಸ್ರೇಲ್‌ಗೆ ಹೋಗಿಬರುವ ಅವಕಾಶವನ್ನು ಈ ಸರ್ಕಾರದವರು ಮಂತ್ರಿಗಳಿಗೆ, ಶಾಸಕರುಗಳಿಗೆ ಕಲ್ಪಿಸಿಕೊಟ್ಟಿದ್ದಾಯಿತು, ಆದರೆ ಈ ಕಾರ್ಯಕ್ರಮ ಎಲ್ಲಿದೆ? ಇದಕ್ಕೆ ಆಗಬೇಕಾದಂಥ ವಿಚಾರದಲ್ಲಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು? ಇದೇ ಪುಸ್ತಕದಲ್ಲಿ ತಾವು ಹೇಳಿರುವಂತದ್ದು, ತಾವು ಒಂದೊಂದು ವಿಚಾರವನ್ನು ಹೇಳಿಲ್ಲ. ತಾವು ಏನು ಹೇಳಿದ್ದೀರಿ, ಪರಿಶಿಷ್ಟ ಜಾತಿ:ಪರಿಶಿಷ್ಟವರ್ಗ ಹಾಗೂ ಅಲ್ಪಸಂಖ್ಯಾತರಿಗಾಗಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ 25 ಸಾವಿರ ಹೆಕ್ಟೇರ್ ವಾಟರ್ ಷೆಡ್ ಸ್ಕೀಂನಲ್ಲಿ ನಾವು ಕೆಲಸಮಾಡುತ್ತೇವೆ ಎಂದು ತಾವು ವಾಗ್ದಾನ ಮಾಡಿದಿರಿ, ಎಷ್ಟು ಹೆಕ್ಟೇರ್‌ಗಳಲ್ಲಿ ತಾವು ಇವೊತ್ತು ಈ ಗಂಗಾಕಲ್ಯಾಣ

ಯೋಜನೆಯ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದೀರಿ ಸ್ವಾಮಿ? ಎಲ್ಲೂ ಇಲ್ಲ. ನಾನು ಒಬ್ಬ ಜಿಲ್ಲಾಪಂಚಾಯಿತಿಯ ಸದಸ್ಯನಾಗಿ ಇವೊತ್ತು ಸಮಾಜ ಕಲ್ಯಾಣ ಇಲಾಖೆಯ ಸಭೆಗಳಿಗೆ ಹೋಗಿ ಬಿಡುಗಡೆಯಾಗಿರುವಂಥ ಹಣದ ವಿಚಾರವನ್ನೂ ಸಹ ಜಿಲ್ಲಾಪಂಚಾಯಿತಿಯಲ್ಲೂ ಮಾತನಾಡಿದರೂ ಸಹ ಗಂಗಾಕಲ್ಯಾಣ ಯೋಜನೆ ಈ ರಾಜ್ಯದಲ್ಲಿ ಯಾವ ಭಾಗದಲ್ಲಿಯೂ ಸಹ ಇವೊತ್ತಿನವರೆಗೆ ಯಶಸ್ವಿಯಾಗಿ ನಡೆಯದೇ ಇರುವಂಥ ವಿಚಾರ ನಮ್ಮ ಗಮನಕ್ಕಂತೂ ಬಂದಿದೆ. ಮಾನ್ಯ ಮಂತ್ರಿಗಳಾದಂಥ ಬೈರೇಗೌಡರು ಈ ವಿಚಾರದಲ್ಲಿ ಏನು ಹೇಳುತ್ತಾರೆ ಎಂಬುವುದನ್ನು ನಾನು ಅವರ ಉತ್ತರದಲ್ಲಿ ನಿರೀಕ್ಷಿಸುತ್ತೇನೆ. ಇನ್ನೂ ಹಿಂದೆ ವಾಗ್ದಾನ ಮಾಡಿದಂಥ ಅನೇಕ ವಿಚಾರಗಳಲ್ಲಿ, ಈಗ ಅನೇಕ ಮಿತ್ರರು, ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳ ಬಗ್ಗೆ ಆಗಲೇ ಮಾತನಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಎ.ಪಿ.ಎಂ.ಸಿ. ವತಿಯಿಂದ ರಸ್ತೆ ಮಾಡುವಂಥ ಕಾರ್ಯಕ್ರಮ ನಾವು ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದ್ದರು. 50 ಕಿಲೋ ಮೀಟರ್‌ನಷ್ಟು ಗ್ರಾಮಾಂತರ ಪ್ರದೇಶದ ರಸ್ತೆಗಳನ್ನು ನಾವು ಅಭಿವೃದ್ಧಿಪಡಿಸುತ್ತೇವೆ, ಇದಕ್ಕೆ ಶಾಸಕರುಗಳು ಸೂಚನೆ ಮಾಡಬೇಕು ಎನ್ನುವ ಒಂದು ಪತ್ರವ್ಯವಹಾರವೂ ಸಹ ಶಾಸಕರ ಜೊತೆಯಲ್ಲಿ ಆಯಿತು. ತಾವು ಎಷ್ಟು ಕಿಲೋಮೀಟರ್ ರಸ್ತೆಯನ್ನು ಮಾಡಿದ್ದೀರಿ ಸ್ವಾಮಿ? ತಾವು ಈ ಯೋಜನೆಯಿಂದ ಐದು ವರ್ಷಗಳಲ್ಲಿ 50 ಕಿಲೋಮೀಟರ್ ರಸ್ತೆಗಳನ್ನು ಅಭಿವೃದ್ಧಿ ಪಡಿಸುತ್ತೇವೆಂದು ಹೇಳಿದಿರಿ, ಎಷ್ಟು ಕಿಲೋಮೀಟರ್ ರಸ್ತೆಗಳನ್ನು ತಾವು ಅಭಿವೃದ್ಧಿ ಪಡಿಸಿದ್ದೀರಿ? ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ವಿಚಾರದಲ್ಲಿ ಹೇಳುವುದಾದರೆ ಪ್ರಾಯಶಃ ಈ ನಮ್ಮ ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿರುವಂತಹ, ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಸೇರಿರುವಂತಹ ಜಿಲ್ಲಾಪಂಚಾಯಿತಿ ವ್ಯಾಪ್ತಿಗೆ ಸೇರಿರುವಂತಹ ರಸ್ತೆಗಳನ್ನು ಅಭಿವೃದ್ಧಿ ಪಡಿಸಿರುವಂಥ ಮಾಹಿತಿಯನ್ನೇನಾದರು ಕೊಡುತ್ತೇವೆ, ಅದಕ್ಕೆ ಇಷ್ಟು ಹಣ ಖರ್ಚು ಮಾಡಿದ್ದೇವೆ ಎಂದು ತಾವು ಹೇಳಿದರೆ ಈ ಭಾಗದ ಶಾಸಕರೇ ಅಲ್ಲ, ಆ ಭಾಗದ ಶಾಸಕರೂ ಒಪ್ಪುತ್ತಾರೆ. ಏಕೆ ಒಪ್ಪುತ್ತಾರೆ ಎಂದು ಹೇಳಿದರೆ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುತ್ತೇವೆ ಎಂದು ಹೇಳಿದಂಥ ತಮ್ಮ ಸರ್ಕಾರ ಯಾವುದೇ ಹಳ್ಳಿಗಳಲ್ಲಿ ಈ ರಸ್ತೆಗಳನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಯಾವುದೇ ಜಿಲ್ಲಾಪಂಚಾಯಿತಿಯಲ್ಲೂ ಸಹ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಹಣದ ಕೊರತೆಯಿಂದ ನರಳುತ್ತಿದ್ದೇವೆ ಎಂಬ ಉತ್ತರ ಬಂದಿದಿಯೇ ವಿನಃ ಅಭಿವೃದ್ಧಿಯಲ್ಲಿ ಬಹಳ ಹಿಂದುಳಿದಿರುವಂತಹದ್ದರ ಬಗ್ಗೆ ಮಾನ್ಯ ಅಧ್ಯಕ್ಷರ ಮುಖಾಂತರವಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ತಾವು ಏನು ಆಲೋಚನೆಯನ್ನು ಮಾಡಿದ್ದೀರಿ, ಹಳ್ಳಿಗಾಡುಗಳಲ್ಲಿ ಬದುಕುವಂಥ ರೈತರಿಗೆ ಯಾವ್ಯಾವ ಅನುಕೂಲತೆಗಳನ್ನು ಒದಗಿಸಿಕೊಡ್ಡಿದ್ದೀರಿ ಎಂಬುವುದರ ಬಗ್ಗೆ ತಾವು ಹೇಳಬೇಕಾಗುತ್ತದೆ. ಏಕೆಂದರೆ ತಾವು ಪದೇ ಪದೇ ಕೇಳುತ್ತೀರಿ, ತಮ್ಮ ಕಾಲದಲ್ಲಿ ಏನು ಮಾಡಿದ್ದೀರಿ ಎಂದು. ನಮ್ಮ ಕಾಲದಲ್ಲಿ ಮಾಡದೇ ಇರುವುದಕ್ಕಾಗಿ ನಾವು ಇಲ್ಲಿ ಇದ್ದೇವೆ. ನಮ್ಮ ಕೈಯಲ್ಲಿ ಆದಂಥ ನಮ್ಮ ಕೈಯಲ್ಲಿ ಮಾಡಬೇಕಾದಂಥ ನಮ್ಮ ರಾಜಕೀಯ ಪಕ್ಷ, ನಮ್ಮ ಪಕ್ಷದ ವತಿಯಿಂದ ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ಪ್ರಾಯಶಃ, ನಾಗರೀಕರಿಗೆ, ಸಾರ್ವಜನಿಕರಿಗೆ, ಗ್ರಾಮಾಂತರ ಪ್ರದೇಶಗಳಲ್ಲಿರುವಂಥ ರೈತರಿಗೆ ಅನುಕೂಲವಾಗುವಂತೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಜನ ಇವೊತ್ತು

ನಮ್ಮ ಪಕ್ಷವನ್ನು ನಮ್ಮ ಸರ್ಕಾವನ್ನು ಮೆಚ್ಚುವಂತಹದ್ದನ್ನು ನಾವು ನೋಡಿದ್ದೇವೆ. ಮುಂದಿನ ದಿನಗಳಲ್ಲೂ ಆ ಕಾರ್ಯಕ್ರಮಗಳಲ್ಲಿ ನಮ್ಮ ಪಕ್ಷ, ನಮ್ಮ ಸರ್ಕಾರ ಯಶಸ್ವಿಯಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.......

(ಈ ಹಂತದಲ್ಲಿ ಮಾನ್ಯ ಉಪಸಭಾಧ್ಯಕ್ಷರು ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಿದರು)

ಸನ್ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಅಲ್ಪಸಂಖ್ಯಾತರಿಗಾಗಿ ತಾವು ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೀರಿ. ಒಂದೊಂದು ಕಾರ್ಯಕ್ರಮವನ್ನು ತಾವು ಘೋಷಣೆ ಮಾಡಿಲ್ಲ. ತಾವು ಹೇಳಿದಿರಿ,

> "One the lines of the Morarji Desai Residential Schools, my Government has sanctioned five residential schools exclusively for the benefit of the students of Muslim minority community in the State. These Urdu medium residential schools will be run by reputed Muslim minority institutions in the educational field"

ಮುಸಲ್ಮಾನರು ಅಥವಾ ಅಲ್ಪಸಂಖ್ಯಾತರ ಮಕ್ಕಳಿಗಾಗಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ವಾಗ್ದಾನ ಮಾಡಿದಂಥ ಸರ್ಕಾರ ನಿಮ್ಮ ಜನತಾದಳದ ನಾಯಕರ ಸ್ವತ್ತೇ ಇದು; ಯಾವ ಯಾವ ಭಾಗಗಳಲ್ಲಿ, ಯಾವ ಜಿಲ್ಲೆಯಲ್ಲಿ ಈ ವಸತಿ ಶಾಲೆಗಳನ್ನು ಪ್ರಾರಂಭ ಮಾಡಿದ್ದೀರಿ ಎಂದು ಹೇಳಬೇಕು. ಇದು ಮೊಸಳೆ ಕಣ್ಣೀರು ಸುರಿಸುವಂತಹದ್ದಲ್ಲ. ಯಾವ ಯಾವ ವಿಚಾರಗಳೆಂದು ಹೇಳೋಣ. ಇವೊತ್ತು ನಿಮ್ಮ ಸರ್ಕಾರದ ಪ್ರತಿನಿಧಿಗಳು ಇರಬಹುದು ಅಥವಾ ನಿಮ್ಮ ವರಿಷ್ಠ ಮಂಡಳಿಯವರು ಇರಬಹುದು, ದೆಹಲಿಯಲ್ಲಿ ಕುಳಿತು ಪತ್ರಿಕಾ ಪ್ರಚಾರಕ್ಕಾಗಿ ಹೇಳುತ್ತಾರೆ ಅಲ್ಪಸಂಖ್ಯಾತರಿಗಾಗಿ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮಕ್ಕೆ ಏಳೂವರೆ ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಅಲ್ಪಸಂಖ್ಯಾತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಐದು ವಸತಿ ಶಾಲೆಗಳನ್ನು ನಾವು ಪ್ರಾರಂಭ ಮಾಡಿದ್ದೇವೆ, ವಕ್ಫ್ ಮಂಡಳಿಗೆ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಇದು ಪತ್ರಿಕೆಗಳಲ್ಲೂ ಬಂದಿದೆ. ಈ ವಸತಿ ಶಾಲೆಗಳನ್ನು ಎಲ್ಲಿ ಪ್ರಾರಂಭ ಮಾಡಿದ್ದೀರಿ ಎಂಬುದನ್ನು ತಾವು ಹೇಳಬೇಕು. ಇದು ಕೇವಲ ಪುಸ್ತಕದ ಬದನೆಕಾಯಿಯಂತೆ ಇದೆ ಇದು ಕೇವಲ ಅಲ್ಪಸಂಖ್ಯಾತರ ಉದ್ಧಾರಕ್ಕಾಗಿಯೋ ಅಥವಾ ಜನತಾ ದಳದ ವರಿಷ್ಠರ ಉದ್ಧಾರಕ್ಕಾಗಿಯೋ ಎನ್ನುವ ಉತ್ತರವನ್ನು ನಾನು ಇವತ್ತು ಸರ್ಕಾರದಿಂದ ನಿರೀಕ್ಷೆ ಮಾಡುತ್ತೇನೆ. ತಾವು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಏಳೂವರೆ ಕೋಟಿ ರೂಪಾಯಿಗಳನ್ನು ಕೊಡುವುದರ ಜೊತೆಗೆ 12,800 ಫಲಾನುಭವಿಗಳನ್ನು ಆಯ್ಕೆ ಮಾಡಿ, ಆರ್ಥಿಕವಾಗಿ ಅವರಿಗೆ ಸಹಕಾರ ಕೊಡುತ್ತೇವೆಂದು ಹೇಳಿದ್ದೀರಿ. ಎಷ್ಟು ಹಣವನ್ನು ಇದಕ್ಕಾಗಿ ಬಿಡುಗಡೆ ಮಾಡಿದ್ದೀರಿ. ಈ ಸರ್ಕಾರ ಹೇಳಿದಂತೆ ನಡೆದುಕೊಂಡಿಲ್ಲ. ಒಂದು ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದು, ಇವತ್ತು ಕೇವಲ ನಾಲ್ಕು

ಸಾವಿರ ಜನ ಫಲಾನುಭವಿಗಳನ್ನು ಆಯ್ಕೆ ಮಾಡಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಅರ್ಜಿಗಳನ್ನು ಕಳುಹಿಸಿರುವಂತಹ ಸಂದರ್ಭದಲ್ಲಿ ನನ್ನ ಅಂದಾಜಿನ ಪ್ರಕಾರ ಶೇ.10 ರಷ್ಟು ಅಲ್ಪಸಂಖ್ಯಾತರ ಯುವಕರು ಈ ಸಾಲ, ಸವಲತ್ತುಗಳನ್ನು ಪಡೆದಿದ್ದಾರೆಯೇ ವಿನಹ ಅವರು ಹೇಳಿದಷ್ಟು ಪ್ರಮಾಣದಲ್ಲಿ ಈ ಸಾಲ, ಸವಲತ್ತುಗಳನ್ನು ಪಡೆದಿಲ್ಲ. ನಾನು ವಕ್ಫ್ ಮಂಡಳಿಯ ಬಗ್ಗೆ ಹೇಳಬೇಕಾಗುತ್ತದೆ. ಇವತ್ತು ನಾವು ಫೆಬ್ರವರಿ ಮಾಹೆಯಲ್ಲಿದ್ದೇವೆ. ನಮಗೆ ಸುದ್ದಿ ಮುಟ್ಟಿರುವ ಪ್ರಕಾರ ಮಾರ್ಚಿ 14 ಅಥವಾ 17ನೇ ತಾರೀಖಿನಂದು ಬಜೆಟ್ ಅಧಿವೇಶನ ಪ್ರಾರಂಭವಾಗಲಿದೆ. ತಾವು ಎಷ್ಟು ಹಣವನ್ನು ಈ ವಕ್ಫ್ ಮಂಡಳಿಗೆ ಬಿಡುಗಡೆ ಮಾಡಿದ್ದೀರಿ. ಗಡ್ಡದ ಸಾಹೇಬರುಗಳು ವಕ್ಫ್ ಮಂತ್ರಿಯವರ ಕಛೇರಿಗೆ, ಮನೆಗಳಿಗೆ ತಿರುಗಿ ತಿರುಗಿ ಅವರ ಅರ್ಧ ಅಡಿ ಗಡ್ಡ ಒಂದು ಅಡಿಯಾಗಿ ಹೋಗಿದೆ. ಇಲ್ಲಿಯವರೆಗೂ ಹಣವನ್ನು ಅದಕ್ಕೆ ಬಿಡುಗಡೆ ಮಾಡಿಲ್ಲ. ಇದು ಜನತಾದಳದ ಮೊಸಳೆ ಕಣ್ಣೀರು ಎಂದು ಹೇಳದೆ ಮತ್ತೆ ಏನೆಂದು ಹೇಳೋಣ. ತಾವು ಇವತ್ತಿಗೂ ಕೂಡ ಅಲ್ಪಸಂಖ್ಯಾತರ ಬಗ್ಗೆ ಮಾತನಾಡುವಂತಹ ಹಕ್ಕು ಇಟ್ಟುಕೊಂಡಿದ್ದೀರಾ ಎನ್ನುವಂಥಾದ್ದು ನನ್ನ ಪ್ರಶ್ನೆಯಾಗಿದೆ. ತಾವು ಪ್ರಾಥಮಿಕ ಶಾಲೆಗಳಿಗೆ ಉರ್ದು ಪುಸ್ತಕಗಳನ್ನು ಮುದ್ರಿಸಿರುವಂಥಾದ್ದನ್ನು ಮಕ್ಕಳು ಓದಲಿಕ್ಕ ಆಗುವುದಿಲ್ಲ. ಹಾಗಾದರೆ ಸರ್ಕಾರಕ್ಕೆ ಕಣ್ಣು ಇಲ್ಲವೇ, ಈ ಸರ್ಕಾರ ಏನಾದರೂ ಕುರುಡು ಆಗಿದೆಯಾ? ಎಂದು ನಾನು ತಮ್ಮ ಮುಖಾಂತರ ಪ್ರಶ್ನೆ ಹಾಕಬೇಕಾಗಿದೆ. ಕನ್ನಡ ಶಿಕ್ಷಕರನ್ನು ಇವರು ನೇಮಿಸಿದ್ದೇವೆಂದು ಹೇಳುತ್ತಾರೆ. ಸಾರ್ವಜನಿಕ ಪರೀಕ್ಷೆಗಳು ಇವೆ ಎಂದು ಸರ್ಕಾರದವರು ಘೋಷಣೆಯನ್ನು ಮಾಡುತ್ತಾರೆ. 7ನೇ ತರಗತಿಯಲ್ಲಿರುವಂತಹ ಅಲ್ಪಸಂಖ್ಯಾತರು ಮಕ್ಕಳು 7ನೇ ತರಗತಿಯಿಂದ 8ನೇ ತರಗತಿಗೆ ಹೋಗಲು ಹೇಗೆ ಸಾಧ್ಯ ಎಂದು ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ. ಶಿಕ್ಷಕರನ್ನು ನೇಮಿಸಿ ಇನ್ನೂ 3 ತಿಂಗಳುಗಳಾಗಿಲ್ಲ. ಹಾಗಾಗಿ ಒಬ್ಬ 7ನೇ ತರಗತಿಯ ವಿದ್ಯಾರ್ಥಿ ತುರ್ತಾಗಿ ಕನ್ನಡ ಕಲಿಯುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ಸರ್ಕಾರ ಗಮನಿಸಬೇಕಾಗುತ್ತದೆ. ಇವತ್ತು ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಯಾವ ರೀತಿಯಲ್ಲಿ ಕಡಿಮೆಯಾಗುತ್ತದೆನ್ನುವುದರ ಬಗ್ಗೆ ಹೇಳುವುದಾದರೆ ವಿದ್ಯಾರ್ಥಿಗಳಿಗೆ ಅದರಲ್ಲೂ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನೇಮಿಸದೆ ಫಲಿತಾಂಶ ಉಲ್ಟ ಆದಾಗ ಆ ಮಕ್ಕಳು ಮತ್ತೆ ಶಾಲೆಗೆ ಹೋಗುವ ಪ್ರಯತ್ನ ಮಾಡುತ್ತಾರೆಯೇ ಎಂಬುದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ. ಆ ರೀತಿ ಆಲೋಚನೆ ಮಾಡದೇ ಹೋದಲ್ಲಿ ಪ್ರಾಯಶಃ ಉರ್ದು ಶಾಲೆಗಳಲ್ಲಿ ಡ್ರಾಪ್ ಔಟ್ಸ್ ಆಗುತ್ತದೆ. ಈ ವರ್ಷ ತಾವು ಸಾರ್ವಜನಿಕ ಪರೀಕ್ಷೆ ಎಂದು ಏನು ಮಾಡಿದ್ದೀರಿ, ಇದು ಪ್ರಾಯಶಃ 7ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಂಥ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಒಂದು ಪಕ್ಷ 7ನೇ ತರಗತಿಯಲ್ಲಿ ಫೇಲ್ ಆದಾಗ ಅವರು 8ನೇ ತರಗತಿಗೆ ಹೋಗುವ ಸಾಧ್ಯತೆಗಳಿಲ್ಲ. ಒಂದು ಸಾರಿ ಫೇಲಾದರೆ ಅವರು ಮತ್ತೆ ಶಾಲೆಗೆ ಹೋಗುವಂತಹ ಪ್ರಮೇಯವಿರುವುದಿಲ್ಲವೆಂಬುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಏನು ಮಾಡುತ್ತಾರೆ ಎಂಬುದನ್ನು ತಾವು ಚಿಂತನೆ ಮಾಡಿ ಅಲ್ಪಸಂಖ್ಯಾತರಿಗೆ ಹೇಳಬೇಕಾಗುತ್ತದೆ. ಏಕೆಂದರೆ ಸಾರ್ವಜನಿಕ ಪರೀಕ್ಷೆ ಮಾಡುವುದರಿಂದ ಎಲ್ಲರೂ ವಿದ್ಯಾವಂತರಾಗುತ್ತಾರೆನ್ನುವುದಲ್ಲ. ಆದರೆ ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆಂದು ನಾನು ತಮ್ಮ ಮುಖಾಂತರ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಇದರ ಜೊತೆಗೆ ಬಹಳ

ವಿಚಿತ್ರವಾದಂತಹ ವಿಚಾರಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಅದು ಏನೆಂದರೆ, ಈ ರಾಜ್ಯದಲ್ಲಿ ನಿವೇಶನ ರಹಿತ ಜನರನ್ನು ನಾವು ಗುರುತಿಸಿದ್ದೇವೆಂದು ತಾವು ಹೇಳಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಎಲ್ಲಾ ಪತ್ರಿಕೆಗಳಲ್ಲೂ ಈ ವಿಷಯಕ್ಕೆ ಪ್ರಚಾರ ಸಿಕ್ಕಿದೆ. ಅವರಿಗೆ ತಾವು ಏನು ತೋರಿಸಿದ್ದೀರಿ ಎಂದರೆ ಸಾಬರ ಭಾಷೆಯಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. "ಅಥೆಲಿ ಮೇ ಜನ್ನತ್" ಅಂದರೆ ಅಂಗೈಯಲ್ಲಿ ಸ್ವರ್ಗ" ತೋರಿಸುವುದು ಎಂದು ಹೇಳುತ್ತಾರೆ. ಅಂಗೈಯಲ್ಲಿ ಆಕಾಶ ಸೂರ್ಯನನ್ನು ನೋಡಿದ್ದಿಯೇನಪ್ಪಾ ಎಂದು ಕೇಳಿದ್ದಕ್ಕೆ ನೋಡಿದ್ದೇನೆ. ಅಲ್ಲಿಗೆ ಕರೆದುಕೊಂಡು ಹೋಗುತ್ತೀಯಾ ಎಂದರೆ ಕರೆದುಕೊಂಡು ಹೋಗುತ್ತೇನೆ ಎನ್ನುತ್ತಾರೆ. ಏಕೆಂದರೆ, ಅಲ್ಲಿ ಹೋದರೆ ಅವನು ಭಸ್ಮವಾಗುತ್ತಾನೆಯೇ ವಿನಃ ವಾಪಸ್ಸು ಬರುವುದಿಲ್ಲ. ಆ ರೀತಿಯ ಹೇಳಿಕೆಗಳು ಬರುತ್ತಿವೆ. ಈ ರಾಜ್ಯದಲ್ಲಿ 20 ಲಕ್ಷ ಬಡ ಕುಟುಂಬದವರು ಇದ್ದಾರೆ, 10 ಎಕರೆ ಜಮೀನು ಇರುವವರು ಇವತ್ತು ಬಡಕುಟುಂಬದವರು, ಹಮಾಲಿ ಕೆಲಸ ಮಾಡುವವರು ಬಡಕುಟುಂಬದವರು, ಒಬ್ಬ ಆಟೋ ಡ್ರೈವರ್ ಸಹ ಬಡ ಕುಟುಂಬದವನು, ತಾವು 20 ಲಕ್ಷ ಜನರನ್ನು ಗುರುತಿಸಿದ್ದೀರಿ. ಹಿಂದಿನ ವರ್ಷದಲ್ಲಿ ತಾವು ಏನೂ ಮಾಡಿಲ್ಲ. ಈ ಪುಸ್ತಕದಲ್ಲಿ ತಾವು ಏನು ಹೇಳಿದ್ದೀರಿ ಎಂದರೆ 1996-97ನೇ ಸಾಲಿನಲ್ಲಿ ಒಂದು ಲಕ್ಷದ ಎಪ್ಪತ್ತೈದು ಸಾವಿರ ನಿವೇಶನ ರಹಿತ ಜನರಿಗೆ ನಾವು ನಿವೇಶನಗಳನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದೀರಿ. ತಾವು ಇದುವರೆಗೂ ಎಷ್ಟು ನಿವೇಶನಗಳನ್ನು ಒದಗಿಸಿದ್ದೀರಿ. ಮೊನ್ನೆ ತಾವು ಪ್ರಶ್ನೋತ್ತರ ಸಂದರ್ಭದಲ್ಲಿ ನಮ್ಮ ಸರ್ಕಾರ ಒಂದು ಲಕ್ಷದ ಇಪ್ಪತ್ತು ಸಾವಿರ ನಿವೇಶನಗಳನ್ನು ಒದಗಿಸಿ ಕೊಟ್ಟಿದೆ ಎಂದು ಹೇಳಿದ್ದೀರಿ. ತಾವು ಮಾಡಿದ ವಾಗ್ದಾನದಂತೆ ಎರಡು ವರ್ಷಗಳಲ್ಲಿ ಎರಡು ಲಕ್ಷವಲ್ಲ, ತಾವು ಇಲ್ಲಿಯವರೆಗೂ ಮೂರುವರೆ ಲಕ್ಷ ನಿವೇಶನ ರಹಿತರಿಗೆ ನಿವೇಶನಗಳನ್ನು ಒದಗಿಸಿಕೊಡಬೇಕಾಗಿತ್ತು. ಆದರೆ ಇದುವರೆಗೂ ತಾವು ಎಷ್ಟು ನಿವೇಶನಗಳನ್ನು ಒದಗಿಸಿದ್ದೀರಿ ಎಂದರೆ ಕೇವಲ ಒಂದು ಲಕ್ಷದ ಇಪ್ಪತ್ತು ಸಾವಿರ ಮಾತ್ರ. ಮಾನ್ಯ ನಗರಾಭಿವೃದ್ಧಿ ಸಚಿವರು ಇಲ್ಲಿ ಇದ್ದಾರೆ. ನಗರ ಪ್ರದೇಶಗಳ ವಿಚಾರವೇ ಇಲ್ಲ. ಇವತ್ತು ಆಶ್ರಯ ಯೋಜನೆ ಇರಬಹುದು, ಅಂಬೇಡ್ಕರ್ ಯೋಜನೆ ಇರಬಹುದು, ಇಂದಿರಾ ಅವಾಸ್ ಯೋಜನೆ ಇರಬಹುದು, ಪಟ್ಟಣ ಪ್ರದೇಶಗಳಲ್ಲಿ ವಿತರಿಸಿರುವಂತಹ ಮನೆಗಳ ಅಂಕಿ ಸಂಖ್ಯೆಗಳನ್ನು ಈ ಸರ್ಕಾರ ಹೇಳಲಿ, ನಾನು ಅದನ್ನು ಕೇಳುವುದಕ್ಕೆ ಸಿದ್ಧನಿದ್ದೇನೆ. ಈ ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ಬರತಕ್ಕಂಥ ನಿವೇಶನ ರಹಿತ ಬಡಜನರಿಗೆ ಈ ಸರ್ಕಾರ ಏನಾದರೂ ಈ ಯೋಜನೆಗಳ ಅಡಿಯಲ್ಲಿ ಮನೆಗಳನ್ನು ವಿತರಿಸಿದೆಯೇ? ಇಲ್ಲ. ಸಂಪೂರ್ಣವಾಗಿ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡ ಜನರ ಬಗ್ಗೆ ಇವರಿಗೆ ಚಿಂತನೆ ಇಲ್ಲ. ಇವರು ಒಂದು ಮಸೂದೆಯನ್ನು ತಂದರು. ರೆವಿನ್ಯೂ ಇಲಾಖೆಯ ಜಮೀನುಗಳನ್ನು ಬಡ ಜನರಿಗೆ ನಿವೇಶನಗಳನ್ನು ಮಾಡುವುದಕ್ಕೆ ಎಂದು ಮಸೂದೆ ತಂದರು. ಆಗ ನಾವು ಸಭಾತ್ಯಾಗ ಮಾಡಿ ಹೊರಗಡೆ ಹೋಗಿದ್ದೇವೆ. ಈ ಮಸೂದೆಯನ್ನು ತರುವಂಥಾದ್ದು ಸೂಕ್ತವಲ್ಲ. ಈ ರಾಜ್ಯದಲ್ಲಿ ಹೊರ ರಾಜ್ಯಗಳಿಂದ ಬರುವಂತಹ ಮತ್ತು ಹೊರ ದೇಶಗಳಿಂದ ಬರುವಂತಹ ಕೈಗಾರಿಕೋದ್ಯಮಿಗಳಿಗೆ ಅನುಕೂಲವಾಗುತ್ತದೆ, ಬಡವರಿಗೆ ಇದರಿಂದ ಅನುಕೂಲವಾಗುವುದಿಲ್ಲವೆಂದು ಹೇಳಿ ಇಲ್ಲಿ ಬೊಬ್ಬೆ ಹಾಕಿದ್ದೇವೆ ಸಭಾತ್ಯಾಗ ಮಾಡಿದ್ದೇವೆ, ಧರಣಿಯನ್ನು ಮಾಡಿದ್ದೇವೆ. ಇವತ್ತು ಈ ಜಮೀನು ಯಾರಿಗೆ ಹೋಗಿದೆ, ಪಟ್ಟಣ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಬಡವರಿಗೆ ಹೋಗಿದೆಯೆ? ಇವತ್ತು ಬೆಂಗಳೂರಿನ ಸುತ್ತಮುತ್ತಲೂ

ಇರುವ ಹಳ್ಳಿಗಳಲ್ಲಿ ಎಷ್ಟು ನಿವೇಶನಗಳನ್ನು ವಿತರಣೆ ಮಾಡಿದ್ದಾರೆಂಬುದು ಹೇಳಲಿ, ಒಂದು ನಿವೇಶನವನ್ನೂ ವಿತರಣೆ ಮಾಡಿಲ್ಲ. ನಗರಗಳಲ್ಲಿ ಒಂದು ಮನೆಯನ್ನೂ ಸಹ ವಿತರಣೆ ಮಾಡಿಲ್ಲ. ಹಾಗಾದರೆ ಇವರ ಸರ್ಕಾರ ಜನಪರ ಕಾರ್ಯಕ್ರಮಗಳಲ್ಲಿ ಕನ್ನಡಿಗರಿಗೆ ಹೇಳಿರುವಂತಹ ವಿಚಾರದಲ್ಲಿ ಯಶಸ್ವಿಯಾಗಿದೆಯೇ ಎಂದರೆ ಸಂಪೂರ್ಣವಾಗಿ ವಿಫಲವಾಗಿದೆ. ಬಡವರ ಶಾಪ ನಿಮಗೆ ಬಹಳ ಬೇಗ ತಟ್ಟುತ್ತದೆ. ಈಗಾಗಲೇ ಎರಡು ಕಡೆ ನಿಮಗೆ ಬಡವರ ಶಾಪ ತಟ್ಟಿದೆ, ಇನ್ನೂ ಮುಂದಿನ ದಿವಸಗಳಲ್ಲಿ ತಟ್ಟುತ್ತದೆ. ಅದು ಹೇಗೆ ತಟ್ಟುತ್ತದೆಂದರೆ ನೀವು ಗಾಳಿ ಪಟ ಹೇಗೆ ಹೋಗುತ್ತದೆಯೋ ಹಾಗೆ ಹೋಗುತ್ತೀರಿ. ನೀವು ದೂರವಾದಂತಹ ಆಲೋಚನೆಯನ್ನು ಮಾಡಬೇಡಿ. ಅರ್ಧ ಆಯಸ್ಸು ಮುಗಿದು ಹೋಗಿದೆ. ನಿಮಗೆ ಕುಷ್ಠರೋಗ ಅಂಟಿದೆ. ಬೆರಳು ಹೋಗಿದೆ, ಕೈ ಹೋಗಿದೆ, ಇನ್ನು ಸ್ವಲ್ಪ ದಿವಸಗಳು ಹೋದರೆ ಕಾಲು ಹೋಗುತ್ತದೆ.

ಉಪಾಧ್ಯಕ್ಷರು : ನೀವು ಈ ಕಡೆ ನೋಡಿಕೊಂಡು ಮಾತನಾಡಿ, ಆ ಕಡೆ ನೋಡಿ ಮಾತನಾಡಬೇಡಿ. ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ನವಲತ್ತೈದು ನಿಮಿಷಗಳಾಯಿತು. ತಾವು ತಮ್ಮ ಭಾಷಣವನ್ನು ಬೇಗ ಮುಗಿಸಬೇಕು. ಇನ್ನೂ ಅನೇಕ ಜನರು ಮಾತನಾಡುವವರು ಇದ್ದಾರೆ. ನಿಮ್ಮ ಪಕ್ಷದವರೇ ಇನ್ನು ತುಂಬಾ ಜನರು ಮಾತನಾಡುವವರು ಇದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಸದಸ್ಯರು ಕೈ, ಕಾಲು, ಹೋಗಿದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಬೂಟಾಸಿಂಗ್‌ರವರಿಗೆ ಏನು ಹೋಗಿದೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಹೇಳುತ್ತೇನೆ, ಕೇಳಿ ನಾನು ಮಾತನಾಡುಬಾರದೆಂದು ಇದ್ದೆ. ಕಾಶ್ಮೀರದಲ್ಲಿ ನಾವು ಚುನಾವಣೆ ನಡೆಸಿದ್ದೇವೆ ಎಂದರು, ಟಿಕೆಟ್ ಕೊಟ್ಟು ನಿಲ್ಲಿಸಿದರು ಅವರನ್ನು ಹೊರುವುದಕ್ಕೆ 4 ಜನ ಬಂದಿದ್ದಾರೆ. ಉತ್ತರಪ್ರದೇಶದಲ್ಲಿ ಮಣ್ಣಿನ ಮಗ, ಕಿಸಾನಕ್ ಬೇಟಾ ಎಂದರು. ಏನು ಆಯಿತು ಸ್ವಾಮಿ? ಎಷ್ಟು ಜನ ಆರಿಸಿ ಬಂದರು? ಏನು ಜನ ಆರಿಸಿ ಬಂದಿದ್ದಾರೆ. 4 ಜನ ಹೊರುವುದಕ್ಕೆ ಒಬ್ಬ ಎದುರುಗಡೆ ಮಡಿಕೆ, ಇನ್ನೊಬ್ಬ ಚೆಂಬು, ಮತ್ತೊಬ್ಬ ಲೋಟ ಆಯಿತಾ ಸ್ವಾಮಿ? ಅಲ್ಲಿ ಆ ರೀತಿ ಹೇಳಿ ಅಲ್ಲಿಂದ ಪಂಜಾಬಿಗೆ ಹೋದರು. ಈ ಗಡ್ಡದ ಸಾಬರಿಗೆ ಗಡ್ಡಕ್ಕೆ ಬೆಂಕಿ ಹತ್ತಿಕೊಂಡಿತು. ಆಗ ನಮ್ಮದು ಕೂದಲಾದರೂ ಉಳಿಯಿತು, ಇವರದು ಏನು ಉಳಿಯಿತು? ಇವರದು ಏನೂ ಉಳಿಯಲಿಲ್ಲ ಚಕ್ರ ಮಾತ್ರ ಉಳಿಯಿತು, ಎತ್ತೂ ಇಲ್ಲ ಗಾಡಿಯೂ ಇಲ್ಲ. ಆದರೆ ಇವರು ಮಾತನಾಡುತ್ತಾರೆ. ಇನ್ನು ಮುಂದೆ ಇವರ ಕಥೆ ಏನಾಗುತ್ತದೆಂದು ಗೊತ್ತಿದೆ. ಅದಕ್ಕೆ ಇವರು ಶಕ್ತಿಯನ್ನು ಬೆಳಿಸಿಕೊಳ್ಳಲಿಕ್ಕೆ ಲೋಕಶಕ್ತಿ ಕಡೆ ಹೋಗುವುದಕ್ಕೆ ರೆಡಿ ಇದ್ದಾರೆಂದು ಪ್ರಚಾರ ಸಿಗುತ್ತದೆ. ಅದು ಯಾವಾ ಇವರಿಗೆ ಶಕ್ತಿ ಸಿಗುತ್ತದೆಂದು ನಾವು ನೀವು ನೋಡೋಣ.

ಶ್ರೀ ರಮೇಶ್ ಸಿ.ಜಿಗಜಿಣಗಿ : ಮಧ್ಯಪ್ರದೇಶದಲ್ಲಿ ನಿಮ್ಮ ಕಮಾಲಾನಾಥ್‌ರವರ ಪರಿಸ್ಥಿತಿ ಏನಾಯಿತು ಹೇಳಿರಿ? ಅವರು ಹೊರುವುದಕ್ಕೆ 4 ಜನ ಹಿಡಿಯಲಿಕ್ಕೆ 3 ಜನ ಎಂದು ಏಕೆ ಹೇಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಾವು ಒಪ್ಪಿಕೊಳ್ಳುತ್ತಿದ್ದೇವೆ, ಇಲ್ಲವೆಂದು ಇಲ್ಲ. ನಾವು ಸತ್ತೂ ಇಲ್ಲ ಚಟ್ಟಾ ಹೊರುವುದಕ್ಕೆ ಜನರೂ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಜನ ಇಲ್ಲವೆಂದರೆ ಹೊರುವ ಪ್ರಶ್ನೆ ಎಲ್ಲಿ ಬರುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮುನ್ಸಿಪಾಲಿಟಿ ಲಾರಿಯಲ್ಲಿ ಹೋಗುತ್ತೇವೆ ಬಿಡಿ. ನಿಮ್ಮ ಕಡೆ ಹೊರುವುದಕ್ಕೆ ಜನ ಇದ್ದಾರಲ್ಲ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಇದು ಇವರ ಆಡಳಿತ, ಏನು ಸ್ವಾಮಿ ಇದು? ಮುಂದಿನದು ಬೇರೆ. ಮಾರ್ಚಿನಲ್ಲಿ ನಿಮ್ಮ ಕಥೆ ಹೇಗಾಗುತ್ತದೆ ನೋಡಿ, ಈಗ 6 ಗಂಟೆಗಳ ಕಾಲ ವಿದ್ಯುತ್ ತೆಗೆಯುತ್ತಿದ್ದೀರಿ ಆಗ 12 ಗಂಟೆ ತೆಗೆಯಬೇಕು. ತೆಗೆಯದೇ ಇದ್ದರೆ ನಿಮಗೆ ಉಳಿಗಾಲವಿಲ್ಲ. ಆ ಕಾಲ ಬರುತ್ತಿದೆ, ನೀವೇ ಆದೇಶ ಹೊರಡಿಸಬೇಕು.

ಶ್ರೀ ಡಿ.ನಾರಾಯಣಸ್ವಾಮಿ : ಸಗೀರ್ ಅಹಮದ್‌ರವರೇ, ನೀವು ಪಾಪ ಮಾಡಿ ಅಲ್ಲಿ ಕುಳಿತಿದ್ದೀರಿ, ಜನರು ತಿರಸ್ಕಾರ ಮಾಡಿರುವುದನ್ನು ನೀವು ಮರೆಯಬೇಡರಿ. ನೀವು ಬಡವರಿಗೆ ಎಷ್ಟು ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದೀರಿ, ಎಷ್ಟು ಆಶ್ರಯ ಕೊಟ್ಟರಿ ಎನ್ನುವುದು ಚರಿತ್ರೆಯಲ್ಲಿ ದಾಖಲಾಗಿದೆ. ಚುನಾವಣೆಯಲ್ಲಿ ಜನರು ಓಟುಗಳ ಮೂಲಕ ತೋರಿಸಿ ಕೊಟ್ಟಿದ್ದಾರೆ, ಅದಕ್ಕೆ ನೀವು ಅಲ್ಲಿ ಕುಳಿತಿದ್ದೀರಿ. ತಿರುಗಿ ಬಡವರ ಬಗ್ಗೆ ಕಾಳಜಿ ನಿಮಗೆ, ಹಿಂದೆ ಆಶ್ರಯ ಸಮಿತಿಗಳ ಮೂಲಕ ಬಡವರಿಗೆ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿಕೊಟ್ಟರಿ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಮುಖಾಂತರ ಅವರಿಗೆ ಒಂದು ವಿಚಾರವನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ನನಗೆ ಅವರು ಪ್ರಶ್ನೆ ಮಾಡುವುದು ಬೇಡ. ತಮ್ಮ ಅಪ್ಪಣೆ ಪಡೆದು ಪ್ರಶ್ನೆ ಮಾಡಲಿ. ನಾವು ಆಸ್ಪತ್ರೆಗೆ ಒಬ್ಬ ರೋಗಿಯನ್ನು ಕರೆದುಕೊಂಡು ಹೋಗುತ್ತೇವೆ. ಕೆಲವರಿಗೆ ಪೆನ್ಸಿಲಿನ್ ಆಗುವುದಿಲ್ಲ, ರಿಯಾಕ್ಷನ್ ಆಗುತ್ತದೆ. ಇವರ ಕಡೆಯವರು 3 ಕಡೆ 3 ಪೇಷಂಟ್, ಹೋದರು. ಪೆನ್ಸಿಲಿನ್ ಟೆಸ್ಟ್ ಮಾಡಿದಾಗ ಗುಳ್ಳೆ ಬರುವುದಕ್ಕೆ ಶುರುವಾಯಿತು. ಏನಾದರೂ ಆಗಲಿ ಪರವಾಗಿಲ್ಲ ಇದ್ದರೆ ಇರಲಿ ಸತ್ತರೆ ಸಾಯಲಿ ಎಂದು ಹೇಳಿ ಡಾಕ್ಟರು ಪೆನ್ಸಿಲಿನ್ ಕೊಟ್ಟರು. 3 ಕಡೆ ಜನ ಸತ್ತರು. 1) ರಾಮನಗರ, 2) ಚಿಕ್ಕನಾಯಕನಹಳ್ಳಿ, 3) ಮೈಸೂರು, ಮತ್ತೆ ಯಾವ ಡೋಸ್‌ಬೇಕು ಇವರಿಗೆ? ಮತ್ತೆ ಯಾವ ಮಾತ್ರೆ ಬೇಕ್ರಿ ನಿಮಗೆ?

ಶ್ರೀ ಡಿ. ನಾರಾಯಣಸ್ವಾಮಿ : ಚಿಕ್ಕನಾಯಕನ ಹಳ್ಳಿಯಲ್ಲಿ ನಿಮ್ಮ ಸ್ಥಾನ ಯಾವುದು ಎಂದು ತೋರಿಸಿರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಮ್ಮದು ಮೂರನೇ ಸ್ಥಾನ ಎಂಬುದನ್ನು ಒಪ್ಪುತ್ತೇವೆ, ಒಪ್ಪುವುದಿಲ್ಲವೆಂದು ಹೇಳಿದ್ದೇವೆಯೆ? ನಿಮ್ಮದು ಹೇಳಿ, ಎಡ ಬಲ ಎರಡೂ ಹೋಯಿತಲ್ಲ.

ಉಪಾಧ್ಯಕ್ಷರು : ಸಗೀರ್ ಅಹಮದ್‌ರವರೇ, ಬೇಗ ಮುಗಿಸಿ, ಒಂದು ಗಂಟೆಯಾಯಿತು ಆ ಕಡೆ ಈ ಕಡೆ ನೋಡಬೇಡಿರಿ, ಇನ್ನೂ ಅನೇಕ ಜನ ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಬಡವರ ಬಗ್ಗೆ ಪ್ರೀತಿ, ವಿಶ್ವಾಸ ಹೊಂದಿರುವಂತಹ ಸರ್ಕಾರವೇ ಇದು? ರಾಜ್ಯಪಾಲರು ಹೇಳುತ್ತಾರೆ.

> 'My Government has fulfilled its promise by supplying 10 kgs of rice at subsidised rate to the Green Card Holders'

ಇವರು ಗ್ರೀನ್ ಕಾರ್ಡ್ ಹೋಲ್ಡರ್, ಬಗ್ಗೆ ಏನು ಹೇಳಿದ್ದಾರೆ ಸ್ವಾಮಿ, ಒಂದು ವರ್ಷ ಅಲ್ಲ ಕೇವಲ 8 ತಿಂಗಳಲ್ಲಿ ಇವರು ಅಕ್ಕಿ ಕೊಟ್ಟು ಸುಸ್ತಾಗಿ ಬಿಟ್ಟರೆ ಮುಂದೆ ಏನು ಮಾಡುತ್ತಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆಹಾರ ಇಲಾಖೆಯಿಂದ ಒಂದು ಸುತ್ತೋಲೆ ಹೊರಡುತ್ತದೆ. ಏನು ಸುತ್ತೋಲೆ ಹೊರಡಿಸುತ್ತಾರೆಂದರೆ ದಿನಾಂಕ:1-10-1996 ರಿಂದ ಮುಂದಿನ ಆದೇಶದವರೆಗೆ ಹೊಸ ಪಡಿತರ ಚೀಟಿಗಳನ್ನು ನೀಡುವುದನ್ನು ನಿಲ್ಲಿಸಲಾಗಿದೆ. ಏಕೆ ಸ್ವಾಮಿ ಇದು? ತಾವು ಚುನಾವಣಾ ಸಮಯದಲ್ಲಿ ವಾಗ್ದಾನ ಮಾಡಿದ್ದೀರಿ, ನಾವು ರೂ. 3-20 ರಂತೆ ಅಕ್ಕಿ ಒದಗಿಸುತ್ತೇವೆ, ಹಸಿರು ಚೀಟಿಯನ್ನು ಕೊಡುತ್ತೇವೆ ಎಂದು ಹೇಳಿದಿರಿ. ತೀರ್ಪು ಕೊಡುವವರು ಜನ, ಈ ರಾಷ್ಟ್ರದ ಮಾಜಿ ಪ್ರಧಾನಿ ದಿವಂಗತ ಇಂದಿರಾಗಾಂಧಿಯವರ ಭಾವಚಿತ್ರ ಹೊಂದಿರುವಂತಹ ಪಡಿತರ ಚೀಟಿಯನ್ನು ಬದಲಾವಣೆ ಮಾಡಿದರು. ಬದಲಾವಣೆ ಮಾಡಿದ ನಂತರ ಮಹಾತ್ಮ ಗಾಂಧೀಜಿಯವರ ಭಾವಚಿತ್ರ ಹೊಂದಿದಂತಹ ಪಡಿತರ ಚೀಟಿ ಕೊಟ್ಟರು. ಪಡಿತರ ಚೀಟಿ ಮುದ್ರಿಸಲು 5 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆಂದು ಈ ಸದನದಲ್ಲಿ ಹೇಳಿದ್ದಾರೆ. ಇನ್ನು ಒಂದೂ ಕಡೆ ಈ ರಾಜ್ಯದಲ್ಲಿ ಕಳ್ಳ ಕಾರ್ಡು ಇದೆ ಎಂದು ಹೇಳುತ್ತಾರೆ. ನಿಮ್ಮ ಸರ್ಕಾರ ಬಂದು ಎಷ್ಟು ವರ್ಷವಾಯಿತು ಸ್ವಾಮಿ? ಸಾರ್ವಜನಿಕರಿಗೆ ನೀವು ಕಳ್ಳರು ಎಂದು ಹೇಳುತ್ತಿರಾ, ಬಡವರಿಗೆ ನೀವು ಕಳ್ಳರು ಎಂದು ಹೇಳುತ್ತೀರೋ, ರೈತರಿಗೆ ನೀವು ಕಳ್ಳರು ಎಂದು ಹೇಳುತ್ತಿರೋ, ಆಟೋ ಚಾಲಕರಿಗೆ ನೀವು ಕಳ್ಳರು ಎಂದು ಹೇಳುತ್ತೀರೋ, ಹಮಾಲರಿಗೆ ನೀವು ಕಳ್ಳರು ಎಂದು ಹೇಳುತ್ತೀರೋ, ಬಡವರು ಆಗಿರತಕ್ಕ ಅಲ್ಪಾಸಂಖ್ಯಾತರಿಗೆ ನೀವು ಕಳ್ಳರು ಎಂದು ಹೇಳುತ್ತೀರೋ ಇಂದಿರಾಗಾಂಧಿ ಇರುವಂತಹ ಭಾವಚಿತ್ರ ತೆಗೆದು ಹಾಕಿ ಮಹಾತ್ಮಾಗಾಂಧಿಯವರ ಭಾವಚಿತ್ರ ಹಾಕಿ ತಾವು ಕೊಟ್ಟ ಪಡಿತರ ಚೀಟಿಗಳಲ್ಲಿ ಕಳ್ಳ ಕಾರ್ಡು ಇದೆ ಎಂದು ಹೇಳಿದರೆ ಯಾರು ಸ್ವಾಮಿ ಈ ಕೆಲಸ ಮಾಡಿದವರು? ಕಾಂಗ್ರೆಸ್‌ನವರು ಮಾಡಿದರೇ? ಬಿ.ಜೆ.ಪಿ.ಯವರು ಮಾಡಿದರೇ? ನಿಮ್ಮ ಸರ್ಕಾರದವರು ಅಲ್ಲವೇ ಸ್ವಾಮಿ, ಇಂದಿರಾಗಾಂಧಿಯವರ ಭಾವಚಿತ್ರ ತೆಗೆದು ಮಹಾತ್ಮಾಗಾಂಧಿ ಅವರ ಭಾವಚಿತ್ರವನ್ನು ಅಳವಡಿಸಿ ಚೀಟಿಗಳನ್ನು ವಿತರಣೆ ಮಾಡಿದವರು?

ಶ್ರೀ ವಾಟಳ್ ನಾಗರಾಜ್ : ಇದರಲ್ಲಿ ನನ್ನ ತಕರಾರು ಏನೂ ಇಲ್ಲ, ಮಾತೆತ್ತಿದರೆ ಬಿ.ಜೆ.ಪಿ. ಬಗ್ಗೆ ಬಹಳ ಪ್ರಶಂಸೆ ಮಾಡುತ್ತಾ ಇದ್ದೀರಿ ಅಂದಾಗ ಏನು ಇಷ್ಟು ಹತ್ತಿರ ಆಗುತ್ತಿದ್ದೀರಿ ಎಂದು ಭಯವಾಗುತ್ತಿದೆ;

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ವಾಟಳ್ ನಾಗರಾಜ್‌ರವರು ಹೇಳುವುದರಲ್ಲಿ ಅರ್ಥ ಇದೆ, ಮತ್ತು ನ್ಯಾಯಾವೂ ಇದೆ. ಈ ಸಂದರ್ಭದಲ್ಲಿ ಏನು ಹೇಳಬೇಕಾಗುತ್ತದೆ ಎಂದರೆ ಅಲ್ಪಸಂಖ್ಯಾತರು ಇಡೀ ಹಿಂದೂಸ್ಥಾನದಲ್ಲಿ ಮಹಮದ್ ಪೈಗಂಬರ್‌ರವರ ಜನ್ಮದಿನವವನ್ನು ಆಚರಣೆ ಮಾಡತಕ್ಕ ಸಂದರ್ಭದಲ್ಲಿ ಈ ರಾಷ್ಟ್ರದ ಚುಕ್ಕಾಣಿ ಹಿಡಿದಿರುವಂತಹ ನಾಯಕರು ಯಾರ ಮನೆಗೆ ಹೋಗಿದ್ದರು? ಏತಕ್ಕೆ ಹೋಗಿದ್ದರು? ನಿಮಗೆ ಗೊತ್ತೇನು? ಗೊತ್ತಿಲ್ಲದಿದ್ದರೆ ಹೇಳುತ್ತೇನೆ ಕೇಳಿ, ಬಾಳಠಾಕ್ರೆ ಅವರ ಮನೆಗೆ ಹೋಗಿದ್ದರು. ಏಕೆ ಹೋದರು ಸ್ವಾಮಿ, ಇಲ್ಲಿ ಪಾರ್ಲಿಮೆಂಟಿನ ಸದಸ್ಯರ ಹೆಸರು ತೆಗೆದುಕೊಳ್ಳುವ ಹಾಗಿಲ್ಲ, ಆದುದರಿಂದ ಜನತಾದಳದ ವರಿಷ್ಠರು ಎಂದು ಹೇಳುತ್ತೇನೆ.

ಶ್ರೀ ವಾಟಳ್ ನಾಗರಾಜ್ : ಯಾರು ಎಂದು ಹೇಳಬೇಕು?

ಶ್ರೀ ಸಿ.ಆರ್. ಸಗೀರ್ ಅಹಮದ್ : ಹೇಳಿದರೆ ನಮ್ಮನ್ನು ನೀವು ಸಿಕ್ಕಿಸುತ್ತೀರಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸಿ.ಎಂ. ಇಬ್ರಾಹಿಂ ಎಂದರೆ ಭಯವಾಗುತ್ತದೆ, ಅದಕ್ಕೋಸ್ಕರ ಹೇಳುತ್ತಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಹಿಂದಿನ ನಡವಳಿಕೆಯಲ್ಲಿ ತಾವು ಏನು ಹೇಳಿದ್ದಿರೆಂದರೆ ಈ ಸದನದಲ್ಲಿ ಹಾಜರಿಲ್ಲದೇ ಇರತಕ್ಕ ಸಂಸತ್ ಸದಸ್ಯರ ಹೆಸರನ್ನೂ ತೆಗೆದುಕೊಳ್ಳಬಾರದೆಂದು ಹೇಳಿದ್ದೀರಿ. ಅದು ಕಾನೂನು ಬಾಹಿರ. ಇಲ್ಲಿ ವಾದ ವಿವಾದ ಮಾಡಿಕೊಳ್ಳುವುದಕ್ಕೆ ಅವರು ಇರುವುದು ಅಗತ್ಯ ಎಂದು ಹೇಳಿರುವುದರಿಂದ.......

ಶ್ರೀ ಎಲ್.ಆರ್. ಶಿವರಾಮೇಗೌಡ : ಅದು ಇಡೀ ಪ್ರಪಂಚಕ್ಕೆ ಗೊತ್ತಿರುವ ವಿಷಯ ನೀವೇನು ಹೇಳುವುದು? ಸಿ.ಎಂ. ಇಬ್ರಾಹಿಂ ಅವರ ಹೆಸರು ಹೇಳುವುದಕ್ಕೆ ನಿಮಗೆ ಧೈರ್ಯವಿಲ್ಲ.

ಉಪಾಧ್ಯಕ್ಷರು : ಬೇರೆಯಾರಿಗೂ ಅವಕಾಶ ಕೊಡಬೇಕು ಬೇಗ ಮುಗಿಸಿ, ಇಲ್ಲದಿದ್ದರೆ ತಮ್ಮ ಪಕ್ಷದವರಿಗೆ ಬೇರೆಯಾರಿಗೂ ಟೈಮ್ ಸಿಗುವುದಿಲ್ಲ, ಈಗಾಗಲೇ ನೀವು ಪ್ರಾರಂಭ ಮಾಡಿ ಒಂದು ಆಯಿತು, ತಾವು ದಯಮಾಡಿ ಮುಗಿಸಿ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಶ್ರೀ ವಾಜಪೇಯಿ ಅವರ ಮನೆಗೆ ಶ್ರೀ ಸೀತಾರಾಂ ಕೇಸರಿಯವರು ಹೋಗಿದ್ದರೇ?

ಶ್ರೀ ವಾಟಳ್ ನಾಗರಾಜ್ : ಈ ಒಂದು ಪ್ರಶ್ನೆಯನ್ನು ನಾನು ಕೇಳುವುದರಲ್ಲಿ ಅರ್ಥ ಇದೆ, ಅವರು ಕೇಳುವುದರಲ್ಲಿ ಅರ್ಥ ಇಲ್ಲ. ಏಕೆಂದರೆ ಬೆಳಿಗ್ಗೆಯಿಂದ ಇವರು ಸದನದಲ್ಲಿ ಇರುವುದಿಲ್ಲ. ಈಗ ಕೊನೆಯ ಘಳಿಗೆಯಲ್ಲಿ ಏನೋ ಮಾತನಾಡುವುದಕ್ಕೆ ಹೋಗುತ್ತಾರೆ. ನಾನು ಅದನ್ನು ಒಪ್ಪುವುದಿಲ್ಲ.

ಉಪಾಧ್ಯಕ್ಷರು : ತಾವು ಬೇಗ ಮುಗಿಸಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ಸರ್ಕಾರ ಕಳ್ಳ ಪಡಿತರ ಚೀಟಿಗಳಿದ್ದಾವೆಂದು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡುತ್ತದೆ. ಇಡೀ ರಾಜ್ಯದಲ್ಲಿ ಕಳ್ಳ ಪಡಿತರ ಚೀಟಿ ಎಷ್ಟಿದೆ ಎನ್ನುವುದರ ಬಗ್ಗೆ ಇವತ್ತು ಇವರು ಹೇಳುತ್ತಾರೆ, ಈ ಮಾಹಿತಿಗಳನ್ನು ಒದಗಿಸಿಕೊಡುತ್ತಾರೆ. ಹಾಗಾದರೆ ಇದು ಸರ್ಕಾರದ ನೀತಿಯೇ ಎಂದು ನಾನು ಕೇಳುತ್ತೇನೆ. ನೋಡಿ ಇಲ್ಲಿ ಅಧಿಕ ಹಸಿರು ಪಡಿತರ ಚೀಟಿ 22,56,208 ಇಷ್ಟು ಕಳ್ಳ ಚೀಟಿಗಳಿದ್ದಾವೆಂದು ಹೇಳಿದರೆ, ಇವತ್ತು ಈ ಜನರಿಗೆ ಕಳ್ಳರೆಂದು ಹೇಳುವ ವಿಚಾರ ತಮ್ಮ ಸರ್ಕಾರದ್ದಾಗಿದೆಯೇ? ಹಸಿರು ಪಡಿತರ ಚೀಟಿಗಳನ್ನು ವಿತರಣೆ ಮಾಡುವಾಗ ನಿರ್ಣಯವನ್ನು ತೆಗೆದುಕೊಂಡವರು ಯಾರು? ಈ ನಿರ್ಣಯವನ್ನು ತೆಗೆದುಕೊಂಡಂಥ ಸಂದರ್ಭದಲ್ಲಿ ಈ ಹಸಿರು ಪಡಿತರ ಚೀಟಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿದವರು ಯಾರು? ತಾವು ಬೀದಿ ಬೀದಿಗಳ ಸಮೀಕ್ಷೆಯನ್ನು ನಡೆಸಿದ್ದೀರಿ, ಹಳ್ಳಿ ಹಳ್ಳಿಗಳ ಸಮೀಕ್ಷೆಯನ್ನು ನಡೆಸಿದ್ದೀರಿ, ನಗರ ಪ್ರದೇಶಗಳಲ್ಲಿ ತಾವು ಸಮೀಕ್ಷೆಯನ್ನು ನಡೆಸಿದ್ದೀರಿ, ಇವತ್ತು ತಾವು ಏನು ಹೇಳುತ್ತಿದ್ದೀರಿ ಎಂದರೆ ಮುಂದೆ ಕೊಡುವ ಹಸಿರು ಪಡಿತರಚೀಟಿಯ ಫಲಾನುಭವಿಗಳ ವಾರ್ಷಿಕ ಆದಾಯ ರೂ.6,400 ಮಾತ್ರ ಇರಬೇಕೆಂದು ತಮ್ಮ ಸುತ್ತೋಲೆಯಲ್ಲಿ ಹೇಳುತ್ತೀರಿ. ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರದ ನೀತಿಯ ಬಗ್ಗೆ ನಮಗೆ ಬಹಳ ಸ್ಪಷ್ಟವಾದ ಮಾಹಿತಿಯನ್ನು ಕೊಡಬೇಕಾಗುತ್ತದೆ. ಈ ರಾಜ್ಯದಲ್ಲಿ ಕಾರ್ಮಿಕರ ಕನಿಷ್ಟವೇತನ ಎಷ್ಟು ಎಂದು ಅವರು ಘೋಷಣೆ ಮಾಡಿದ್ದಾರೆ. ಹಮಾಲಿಗಳಿಗೆ ಇವತ್ತು ಎಷ್ಟು ಸಂಬಳ, ಸಾರಿಗೆ ಸಿಗುತ್ತದೆಂದು ಇವರಿಗೆ ಗೊತ್ತಾಗಿದೆ. ಆದರೆ ಒಬ್ಬ ಹಸಿರು ಪಡಿತರಚೀಟಿಯನ್ನು ಪಡೆಯುವ ಅರ್ಹ ವ್ಯಕ್ತಿಗೆ ರೂ.6,400 ಅದಾಯ ಇರಬೇಕೆಂದು ಹೇಳಿದರೆ, ಇವತ್ತು ಈ ಆದಾಯದಲ್ಲಿ ಮನೆಯಲ್ಲಿ ಒಂದು ಎಮ್ಮೆಯನ್ನು ಸಾಕುವುದಕ್ಕಾಗುವುದಿಲ್ಲ. ತೌಡು, ಹುಲ್ಲು ಎಲ್ಲವನ್ನು ತಂದು ಹಾಕಿದರೂ ಕೂಡ ವರ್ಷಕ್ಕೆ ರೂ.12,000 ಮೇಲ್ಪಟ್ಟು ಖರ್ಚಾಗುತ್ತದೆ. ಆ ದೃಷ್ಟಿಯಿಂದ ಈ ಸರ್ಕಾರ ಏನು ಈ ಸುತ್ತೋಲೆಯನ್ನು ಹೊರಡಿಸಿದೆಯೋ ಇದನ್ನು ವಾಪಸ್ ಪಡೆಯಬೇಕಾಗುತ್ತದೆ, ಜೊತೆಗೆ ವಾರ್ಷಿಕ ಆದಾಯ ಕನಿಷ್ಟ ರೂ.6,400 ಇರಬೇಕೆಂದು ಏನು ನಿಗದಿ ಮಾಡಿದ್ದೀರಿ ಅದನ್ನು ಹೆಚ್ಚಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಯಾವ್ಯಾವ ವಿಚಾರವೆಂದು ಹೇಳಲಿ? ನಾನು ದಾಖಲಾತಿಗಳೊಂದಿಗೆ ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಈಗ ಸಮಾಜ ಕಲ್ಯಾಣ ಇಲಾಖೆಯನ್ನೇ ತೆಗೆದುಕೊಳ್ಳೋಣ. ನಾವು ಇವತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಅಭಿವೃದ್ಧಿಗಾಗಲಿ, ಅವರ ಏಳಿಗೆಗಾಗಲಿ ಅದರ ಬಗ್ಗೆ ಬಹಳಷ್ಟು ಚರ್ಚೆಯನ್ನು ಮಾಡುತ್ತೇವೆ. ಇವತ್ತು ಮಾನ್ಯ ಬಿ.ಬಿ. ಶಿವಪ್ಪನವರು ಅವರ ವಿಚಾರದಲ್ಲಿ ಮಾತನಾಡಿದ್ದಾರೆ. ಉಪಾಧ್ಯಕ್ಷರೆ, ನಾನು ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಂತರ್ಜಾತಿ ವಿವಾಹವಾಗಿರುವ ಇಪ್ಪತ್ತೈದು ಪ್ರಕರಣಗಳಲ್ಲಿ, ಸರ್ಕಾರ ಇವತ್ತಿನವರೆಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಡುವಂಥಾದ್ದು ಚಿಕ್ಕಮಗಳೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಕಛೇರಿಗೆ ಒಂದು ವರ್ಷದಿಂದ ಬರಲಿಲ್ಲ. ಹಾಗಾದರೆ ನಿಮ್ಮ ನೀತಿಯೇನು? ನಿಮ್ಮ ನಿಯಮಗಳೇನು? ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಪ್ರಶ್ನೆ ಮಾಡಬೇಕಾಗಿದೆ. ಇದು ಒಂದೇ ವಿಚಾರವಲ್ಲ, ಇವತ್ತು ಪರಿಶಿಷ್ಟಜಾತಿ ಪರಿಶಿಷ್ಟವರ್ಗದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕೊಟ್ಟಿರುವ ಸಮವಸ್ತ್ರಗಳ ಬಗ್ಗೆ ಹೇಳುವುದಾದರೆ, ಅದು ಎಷ್ಟು ಕಳಪೆಮಟ್ಟದ್ದೆಂಬುದನ್ನು ಬಹುಶಃ ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ.

ಹಾಗಾದರೆ ಇದು ತಮ್ಮ ನೀತಿಯೇ ಎಂದು ನಾನು ಈ ಸಂದರ್ಭದಲ್ಲಿ ಅವರಿಗೆ ಪ್ರಶ್ನೆ ಮಾಡುತ್ತಿದ್ದೇನೆ. ಇನ್ನೊಂದು ಕಡೆ ಹೇಳುತ್ತಾರೆ, ಇದನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಬೇಕು. "Proposal for improving the service conditions of Moulvis and Archakas". ಇವರ ಸರ್ಕಾರದಲ್ಲಿ ಇವರೊಬ್ಬರು ಉಳಿದಿದ್ದರು. ಇವರ ಸರ್ಕಾರದಲ್ಲಿ ಇವರೊಬ್ಬರೇ ಉಳಿದಿದ್ದವರು, ಬಾಕಿಯವರೆಲ್ಲ ಸಿಕ್ಕಿಕೊಂಡಿದ್ದರು. ಬಿ.ಜೆ.ಪಿ.ಯವರು ಸಿಕ್ಕಿಕೊಂಡಿದ್ದರು, ಕಾಂಗ್ರೆಸ್‌ನವರು ಸಿಕ್ಕಿಕೊಂಡಿದ್ದರು, ಹಮಾಲರು ಸಿಕ್ಕಿಕೊಂಡಿದ್ದರು, ಆಟೋ ರಿಕ್ಷಾದವರು ಸಿಕ್ಕಿಕೊಂಡಿದ್ದರು, ಬಡತನದ ರೇಖೆಯ ಕೆಳಗೆ ಬರುವ ಜನರೆಲ್ಲಾ ಸಿಕ್ಕಿಕೊಂಡಿದ್ದರು.

ಶ್ರೀ ಎಂ. ಶ್ರೀನಿವಾಸ್ : ಬಿ.ಜೆ.ಪಿ.ಯವರು ಸಿಕ್ಕಿ ಹಾಕಿಕೊಂಡಿದ್ದರು ಎಂದು ಏತಕ್ಕೆ ಹೇಳುತ್ತೀರಿ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಸಿಕ್ಕಿದ್ದರು ಎಂದು ಹೇಳಿದೆ, ಸಿಕ್ಕಿಹಾಕಿಕೊಂಡರು ಎಂದು ಹೇಳಲಿಲ್ಲ ಸ್ವಾಮಿ. ಅವರ ಕೈಗೆ ಕಾಂಗ್ರೆಸ್‌ನವರು ಸಿಕ್ಕಿದ್ದೇವೆ, ಈಗ ನಾವು ವಿರೋಧಪಕ್ಷದಲ್ಲಿ ಇರುವುದರಿಂದ ಹೇಳಿದ್ದು; ಹಾಗೆ ಹೇಳಿದ್ದಲ್ಲ.

ಉಪಾಧ್ಯಕ್ಷರು : ಜಯಚಂದ್ರರವರೆ, ಅವರು ಕೇಳದೆ ಇದ್ದರೆ ಬೇರೆಯವರನ್ನು ಮಾತನಾಡಲು ಹೇಳಬೇಕಾಗುತ್ತದೆ; ನಾವು ಹೇಳುವುದನ್ನು ಕೇಳಬೇಕು ಈವರೆಗೆ ತಾವು ಒಂದು ಗಂಟೆ ಐದು ನಿಮಿಷಗಳನ್ನು ತೆಗೆದುಕೊಂಡಿದ್ದೀರಿ, ತಮಗೆ ಇನ್ನೆಷ್ಟು ಸಮಯ ಕೊಡಬೇಕು?

ಶ್ರೀ ಸಿ.ಆರ್. ಸಗೀರ್ ಅಹಮದ್ : ಇನ್ನು ಹತ್ತು ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ದೇವಾಲಯಗಳಲ್ಲಿರುವ ಅರ್ಚಕರಿಗೆ ಸಂಭಾವನೆ ಕೊಡುವುದರ ಬಗ್ಗೆ ಚಿಂತನೆ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಮಸೀದಿಯಲ್ಲಿರುವ ಮೌಲ್ವಿಗಳಿಗೆ ಸಂಭಾವನೆ ಕೊಡುತ್ತೇವೆಂದು ತಾವು ಹೇಳಿದ್ದೀರಿ.

ಉಪಾಧ್ಯಕ್ಷರು : ರಾಜೇಂದ್ರನ್‌ರವರೆ, ಅವರು ತಮ್ಮ ಮಾತನ್ನು ಮುಗಿಸುವುದಿಲ್ಲ, ತಾವು ಮಾತನಾಡಿ. ಅಲ್ಲ, ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದು ಗಂಟೆ ಐದ ನಿಮಿಷವಾಯಿತು ಒಬ್ಬೊಬ್ಬ ಸದಸ್ಯರಿಗೆ ಒಂದೊಂದು ಗಂಟೆ ಕೊಟ್ಟರೆ ಎಷ್ಟು ಸದಸ್ಯರು ಮಾತನಾಡಬಹುದೆಂಬುದನ್ನು ನೀವೆ ಲೆಕ್ಕಾ ಹಾಕಿ. ತಾವು ಅವರ ಕಡೆ ನೋಡಿ ಏತಕ್ಕೆ ಮಾತನಾಡಬೇಕು, ತಾವು ಬೇಗ ಮುಗಿಸಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಈ ಸರ್ಕಾರ ಹೇಳಿರುವಂತೆ ಅರ್ಚಕರಿಗೆ ಹಾಗೂ ಮೌಲ್ವಿಗಳಿಗೆ ಸಂಭಾವನೆಯನ್ನು ಕೊಡುತ್ತೇವೆಂದು ಭಾಷಣದಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಈ ಸರ್ಕಾರವೇನಾದರೂ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆಯೇ?, ಇದರ ಬಗ್ಗೆ ನೀತಿ ಏನಾದರೂ ಹಮ್ಮಿಕೊಂಡಿದ್ದೀರೋ? ತಾವು ಏನಾದರೂ ನಿಯಮಗಳನ್ನು ಹಮ್ಮಿಕೊಂಡಿದ್ದೀರೋ? ಆದರೆ ತಾವು ಕನ್ನಡಿಗರಿಗೆ ಹೇಳಿರುವ ತಮ್ಮ ವಿಚಾರಗಳು ಕನ್ನಡಿಯಾಗಿ ಉಳಿದಿದೆಯೇ ವಿನಃ, ಕನ್ನಡಿಯಲ್ಲಿ ಅವರ ಮುಖಗಳನ್ನು ನೋಡುವ ಅವಕಾಶ ಈ ಕನ್ನಡಿಗಳಿಗೆ ಒದಗಿ ಬರಲಿಲ್ಲ

ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಉಪಾಧ್ಯಕ್ಷರೆ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು : ಜಯಚಂದ್ರರವರೆ, ನಿಮ್ಮ ಸದಸ್ಯರಿಗೆ ಹೇಳಬೇಕು, ನಾವು ಎಷ್ಟು ಸಾರಿ ಹೇಳುವುದು, ಈಗಾಗಲೇ ಒಂದು ಗಂಟೆಗಿಂತ ಹೆಚ್ಚಿನ ಕಾಲವನ್ನು ತೆಗೆದುಕೊಂಡು ಇನ್ನೂ ಮಾತನಾಡುತ್ತಿದ್ದರೆ ಏನು ಮಾಡುವುದು? ನಿಮ್ಮಲ್ಲಿ ಶಿಸ್ತು ಇರಬೇಕು, ಈ ರೀತಿ ಮಾಡಿದರೆ ಹೇಗೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಸ್ವಾಮಿ, ಪಾನನಿಷೇಧವನ್ನು ತರುತ್ತೇವೆಂದು ಹೇಳಿದಿರಿ, ಹೆಣ್ಣು ಮಕ್ಕಳ ಮಾನವನ್ನು ನಾವು ಉಳಿಸುತ್ತೇವೆಂದು ಹೇಳಿದಿರಿ, ಹೆಣ್ಣು ಮಕ್ಕಳ ಉದ್ಧಾರಕ್ಕಾಗಿ ನಾವು ಪ್ರಯತ್ನ ಮಾಡುತ್ತೇವೆಂದು ಹೇಳಿದಿರಿ, ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿದಿರಿ, ಅಧಿಕಾರದಲ್ಲಿ ಮಹಿಳೆಯರಿಗೆ ಶೇಕಡ 33 ರಷ್ಟು ಅವಕಾಶ ಕೊಡುತ್ತೇವೆಂದು ಹೇಳಿದಿರಿ, ಅವರ ಮುಖಾಂತರವೇ ತಾವು ಇಡೀ ರಾಜ್ಯದಲ್ಲಿ ಮುಂದಿನ ವರ್ಷದಲ್ಲಿ ಪಾನನಿಷೇಧವನ್ನು ಜಾರಿಗೆ ತರುತ್ತೇವೆಂದು ಹೇಳಿದ್ದೀರಿ ಆದರೆ ರಾಜ್ಯದಲ್ಲಿ ಶಿವಪ್ಪನವರು ಹೇಳಿದ ಹಾಗೆ ಮಾಲು ಲೋಡ್‌ಗಟ್ಟಲೆ ಹೋಯಿತು. ಇವತ್ತು ನಮ್ಮ ಗಮನಕ್ಕೆ ಬಂದಿರುವ ವಿಚಾರವೇನೆಂದರೆ, ಇನ್ನು ಹೊಸ ಹೊಸ ಪರವಾನಿಗೆ ಕೊಡುವುದರ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆ ಎಂದು ನಮಗೆ ಸುದ್ದಿ ಇದೆ, ಆದುದರಿಂದ ಈ ಸರ್ಕಾರ ಕನ್ನಡಿಗರಿಗಾಗಿ ಆಡಿದಂಥ ಮಾತು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಿಲ್ಲ. ಇವರದೇ ಆದಂಥ ಮೇಲಿನದು ಮತ್ತು ಇಲ್ಲಿನದು ಕಚ್ಚಾಟಗಳಲ್ಲೇ ಇವರು ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಇವರು ಪ್ರಯತ್ನಗಳನ್ನು ಮಾಡುತ್ತಿರುವುದರಿಂದ ಸಂಪೂರ್ಣವಾಗಿ ಈ ರಾಜ್ಯದಲ್ಲಿ ಆಡಳಿತ ಕುಸಿದು ಹೋಗಿದೆ. ಮೂರು ಕಾಸಿನ ಕೆಲಸ ಯಾವುದೇ ಜಿಲ್ಲೆಯಲ್ಲಾಗಲಿ, ಯಾವುದೇ ಹಳ್ಳಿಯಲ್ಲಾಗಲಿ ನಡೆಯದಿರುವುದರಿಂದ ಸಾರ್ವಜನಿಕರು ಮುಂದಿನ ದಿನಗಳಲ್ಲಿ ಇವರಿಗೆ ಉತ್ತಮವಾದ ಪಾಠವನ್ನು ಶಿವಪ್ಪನವರಿಗೂ ಸೇರಿದಂತೆ ಕಲಿಸುತ್ತಾರೆ ಎಂದು ಹೇಳಿ, ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) : ಸನ್ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತುಂಬಾ ಸಂತೋಷ. ಈ ನಮ್ಮ ಸರ್ಕಾರ ಇಪ್ಪತ್ತೇಳು ಪುಟಗಳ ಒಂದು ಮ್ಯಾಜಿಕ್ ಷೊ ಕೊಟ್ಟಿದೆ; ನೋಡಿದ ತಕ್ಷಣ ಇದು ಮ್ಯಾಜಿಕ್ ತರಹ ಕಾಣಿಸುತ್ತಿದೆ. ಆದರೆ ಇದರಲ್ಲಿ ಮೆರಿಟ್ಸ್, ಡಿಮೆರಿಟ್ಸ್ ಎರಡೂ ಇದೆ. ಮೆರಿಟ್ ಏನೆಂದರೆ, ಒಳ್ಳೆಯ ಸರ್ಕಾರ ನ್ಯಾಯವಾಗಿ, ನಿಜವಾಗಿ ನಮ್ಮ ಮಂತ್ರಿಗಳೆಲ್ಲಾ ಕೆಲಸ ಮಾಡುತ್ತಿರುವರು ಎಂದು ಈ ಸದನದಲ್ಲಿರುವ ನಾವೆಲ್ಲ ಶಾಸಕರು ಹೇಳುವುದಕ್ಕೆ ಬಹಳ ಸಂತೋಷವಾಗುತ್ತಿದೆ. ಈ ಮೆರಿಟ್ಸ್ ಬಗ್ಗೆ ಮಾತನಾಡುವುದಕ್ಕೆ ಆ ಕಡೆ ಯಾರು ಇಲ್ಲ; ಮತ್ತೆ ಡಿಮೆರಿಟ್ಸ್ ಮಾತನಾಡುರುದಕ್ಕೆ ಈ ಕಡೆ ಇರಬೇಕು; ಆದರೂ ನಾನು ಹೇಳಬೇಕು. ಸರ್ಕಾರ ಯಾವ ರೀತಿ ನಡೆಯುತ್ತಿದೆ ಎಂದು ಹಿರಿಯ ಸದಸ್ಯರಾದ, ನಮ್ಮ ಸನ್ಮಾನ್ಯ ಸಗೀರ್ ಅಹಮದ್‌ರವರು, ಸನ್ಮಾನ್ಯ ವಾಟಾಳ್ ನಾಗರಜ್‌ರವರು ಎಲ್ಲಾ ಇಲಾಖೆಗಳ ಬಗ್ಗೆ

ಮಾತನಾಡಿದ್ದಾರೆ. ಸರ್ಕಾರ ಯಾವ ರೀತಿಯಲ್ಲಿದೆ ಎಂದರೆ, ಸಾರ್ವಜನಿಕರು ಏನಾದರೂ ಒಂದು ಗ್ರಿವೆನ್ಸ್ ತೆಗೆದುಕೊಂಡು ಹೋದರೆ, ನಮ್ಮ ಮಂತ್ರಿಗಳಾಗಿರಲಿ ಅಥವಾ ನಮ್ಮ ಮುಖ್ಯಮಂತ್ರಿಗಳಾಗಿರಲಿ ಎರಡು ಸ್ಲೋಗನ್ ಇಟ್ಟುಕೊಂಡಿದ್ದಾರೆ. ಅವು ಯಾವುವೆಂದರೆ, ನೋಡುತ್ತೇವೆ, ಮಾಡುತ್ತೇವೆ. ಯಾವಾಗ ನೋಡುವುದು, ಯಾವಾಗ ಮಾಡುವುದು ಎನ್ನುವುದನ್ನು ನಾನು ಎರಡು ವರ್ಷಗಳಿಂದಲೂ ನೋಡುತ್ತಿದ್ದೇನೆ, ಸ್ವಾಮಿ, ಇನ್ನು ಮಾಡುವುದೂ ಇಲ್ಲ, ನೋಡುವುದೂ ಇಲ್ಲ. ಮಾನ್ಯ ಅಧ್ಯಕ್ಷರೆ, ನಾವು ಯಾವಾಗಲೂ ಜನತಾದಳದ ಸರ್ಕಾರಕ್ಕೆ ಸಪೋರ್ಟ್ ಮಾಡಿದ್ದೇವೆ. ಇವತ್ತಿಗೂ ಮಾಡುತ್ತಿದ್ದೇವೆ ನಾಳೆಯ ದಿವಸವೂ ಮಾಡುತ್ತೇವೆ. ಆದರೆ ಇವರು ನಮ್ಮನ್ನು ಯಾವಾಗ ನೋಡುತ್ತಾರೆಂದು ಇನ್ನೂ ನನಗೆ ಹೇಳಿಲ್ಲ. ಇವರಿಗೆ ಸಪೋರ್ಟ್ ಮಾಡಿ ಏನು ಪ್ರಯೋಜನವಾಗಿದೆ ಎಂದು ಈಗ ನನಗೆ ನೋವಾಗಿದೆ. ಬಡವರಿಗೆ ಸಹಾಯ ಮಾಡುವ ಸರ್ಕಾರವೆಂದು ಇವರು ಹೇಳುತ್ತಾರೆ. There is a slogan. Rich people are becoming richer and poor becoming poorer and poorer. To speak about the industries, I am sorry to say that the Minister of Industries is a narrow-minded Minister. I am proud to say, the first Chief Minister was from my place and my District, Mr. K.C.Reddy. The Kolar District has produced veteran politicians but today Kolar has no industrial area at all. If you are so desired and if you have a broad mindes out look you could have convented this Kolar Gold Fields area, land of gold into a land of pearls, gems and diamonds, But the present Ministers are all marrow-minded. They only Want that in industries should and not in any other place come to their Constituency, They are not thinking in terms of developing Kolar District where poor people are living in large numbers. The Industires Minister has very proudly mentioned, That they would bring investment from NRIS to develop Karnataka State. But where only to Bangalore, Mysore, Hassan, or Shimoga. What sin the people of Kolar district have committed, Mr. Dy.Speaker, Sri? The entire Kolar District is a reserved constituency and 70% of the population belongs to scheduled castes and scheduled tribes. ಅಲ್ಲಿ ಏನು ಇಂಡಿಸ್ಟ್ರೀ ಕೊಟ್ಟಿದ್ದಾರೆ? ಸನ್ಮಾನ್ಯ ಸಿ. ಬೈರೇಗೌಡರು ಮಂತ್ರಿಯಾಗಿದ್ದಾರೆ, ಸನ್ಮಾನ್ಯ ಕೃಷ್ಣರೆಡ್ಡಿಯವರೂ ಸಹ ಮಂತ್ರಿಯಾಗಿದ್ದಾರೆ. ಆದರೆ ನಮ್ಮ ತಲೆಯಲ್ಲಿ ಏನು ಬರೆದಿದೆ ನೋಡಿ, ಕೋಲಾರ ಜಿಲ್ಲೆಯೂ ಸಹ ಡೆವಲಪ್ ಆಗಿಲ್ಲ, ನಮ್ಮ ಕೆ.ಜಿ.ಎಫ್. ಸಹ ಡೆವಲಪ್ ಆಗಿಲ್ಲ. Serveral times I brought to the notice of the Government K.G.F. constitutes 90% of the people belonging to SCs & STs. But till today, the Government has not turned their mind to wards K.G.F. In India if there is only one place where 90% population belongs to SCs/STs and that is KGF. When the legislators put forth certain things to the Government, the Government

should think over it with a broad mind. Whenever we bring certain things it to the notice of the Ministers, they say, what we can do, because the entire BEML area belongs to the Government of India and we cannot do anything. Sir, this is the fate of the KGF people. Today the Central Government is .... by our respectable prime Minister Shri.Deva Gowda. He is our ಮಣ್ಣಿನ ಮಗ, ಕೆ.ಜಿ.ಎಫ್. ನಲ್ಲಿರುವವರೆಲ್ಲರೂ ನೀರಿನ ಮಕ್ಕಳೇ? Are they not sons of the soil? These people even today are eagerly waiting that Karnataka Government, the Janata Dal Government, is going to undertake upliftment of the Seheduled casts and scheduled tribe people but till today whether the Government is sleeping or the Legislature is sleeping is the question that has arisen in the minds of those people. There are 16000 graduates in KGF. Several times I brought it to the Government's notice. ಸರ್ಕಾರ ಎಂದರೆ ಏನು? ಬಡವರಿಗೆ ಏನೇನು ಅನುಕೂಲಗಳು ಆಗಬೇಕೋ, ಬಡವರು ಎಲ್ಲೆಲ್ಲಿ ಇದ್ದಾರೋ ಅವರುಗಳನ್ನು ನೋಡಿ ಸಹಾಯ ಮಾಡುವುದೇ ಸರ್ಕಾರದ ಕೆಲಸ. ಮನುಷ್ಯರು ಇರುವಂತಹ ಟೈಮ್‌ನಲ್ಲಿ ಎಲ್ಲಾ ಬೇಕಾದಷ್ಟು ತೊಂದರೆಗಳು ಇವೆ. ಅವನು ಸತ್ತು ಹೋದ ಮೇಲೆ ಎರಡೇ ತೊಂದರೆಯಾಗುತ್ತದೆ. ಏನೆಂದರೆ ಸುಡುವುದೇ ಅಥವಾ ಹೂಳುವುದೇ ಎಂದು. ಸುಟ್ಟು ಬಿಟ್ಟರೆ ಯಾವುದೇ ತೊಂದರೆ ಇಲ್ಲ. ಹೂತುಬಿಟ್ಟರೆ ಎರಡು ತೊಂದರೆಯಾಗುತ್ತದೆ ಏನೆಂದರೆ ಹುಲ್ಲು ಬೆಳೆಯುತ್ತದೆಯೋ ಇಲ್ಲವೋ ಎಂದು ಇಲ್ಲ ಎಂದರೆ ಯಾವುದೇ ತೊಂದರೆ ಇಲ್ಲ, ಹುಲ್ಲು ಬೆಳೆದುಬಿಟ್ಟರೆ ಎರಡು ತೊಂದರೆಯಾಗುತ್ತದೆ. ಹಸು ಆ ಹುಲ್ಲನ್ನು ತಿನ್ನುತ್ತದೆಯೇ ಇಲ್ಲವೋ ಎಂದು. ಇಲ್ಲ ಎಂದರೆ ಯಾವುದೇ ತೊಂದರೆ ಇಲ್ಲ. ತಿಂದುಬಿಟ್ಟರೆ ಎರಡು ತೊಂದರೆಯಾಗುತ್ತದೆ. ಹಾಲು ಕೊಡುತ್ತದೆಯೋ ಇಲ್ಲವೇ ಎಂದು. ಹಾಲು ಕೊಡುವುದಿಲ್ಲ ಎಂದರೆ ಏನೂ ತೊಂದರೆ ಇಲ್ಲ. ಹಾಲು ಕೊಟ್ಟು ಬಿಟ್ಟರೆ ಎರಡು ತೊಂದರೆಯಾಗುತ್ತದೆ, ಆ ಹಾಲನ್ನು ಮನುಷ್ಯ ಹಾಲು ಕುಡಿದು ಬಿಟ್ಟರೆ ಎರಡು ತೊಂದರೆಯಾಗುತ್ತದೆ. ಅವನು ಇರುತ್ತಾನೋ ಇಲ್ಲವೋ ಎಂದು. ಇದ್ದರೆ ಯಾವ ತೊಂದರೆಯೂ ಸಹ ಇಲ್ಲ. ಇಲ್ಲ ಎಂದರೆ ಅವನನ್ನು ಸುಡುವುದೇ ಅಥವಾ ಹೂಳುವುದೇ ಎಂದು ಎರಡು ತೊಂದರೆಯಾಗುತ್ತದೆ. ಆ ರೀತಿಯಾಗಿ ಸರ್ಕಾರದವರು ನೋಡುತ್ತಾರೆಯೇ?, ಮಾಡುತ್ತಾರೆಯೇ? ಆ ರೀತಿಯಾಗಿ ನಮ್ಮ ಗತಿ. ಇದು ಏನೆಂದರೆ ನನ್ನ ನೋವು ಹೇಗಿದೆ ನೋಡಿ. ಇದು ಬಹಳ ಮುಖ್ಯವಾದುದು, ಸರ್ಕಾರದವರು ಯಾವಾಗಲಾದರೂ ಬಡವರ ಬಗ್ಗೆ ಮಾತನಾಡಿದ ತಕ್ಷಣ ಬರೀ ಪುಸ್ತಕದಲ್ಲಿ 27 ಪುಟಗಳನ್ನು ತೋರಿಸುತ್ತಾರೆ. ಅದರಲ್ಲಿ ನಾವು ಬಡವರಿಗೆ ಅನುಕೂಲಗಳನ್ನು ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಅನುಕೂಲಗಳು ಇದ್ದರೆ ಅದು ಪುಸ್ತಕದಲ್ಲಿ ಇರಬಾರದು. ಪ್ರಾಕ್ಟಿಕಲ್ ಆಗಿ ಇರಬೇಕು. ಆದರೆ ಆ ರೀತಿಯಾಗಿ ಇಲ್ಲವೇ? ನಮ್ಮ ಕಷ್ಟವನ್ನು ಯಾರ ಹತ್ತಿರ ಹೋಗಿ ಹೇಳುವುದು? ಸದನದಲ್ಲಿ ನಾವು ಮಾತನಾಡುತ್ತೇವೆ, ಸದನದಲ್ಲಿ ಹೋಗಿ ನಾವು ಕೇಳುತ್ತೇವೆಂದರೆ ಜನ ನಮ್ಮನ್ನು ನೋಡಿ ನಗುತ್ತಾರೆ, ಇವರು ಹೋಗಿ ಕೇಳಿ ಏನು ಮಾಡುತ್ತಿದ್ದಾರೊ, ಏನೂ ಮಾಡುವುದಿಲ್ಲ ಎಂದು ಆ ಪರಿಸ್ಥಿತಿಯು ಬರಬಾರದು.

> I have brought it to the notice of this House and the House should consider it. It is a reserved constituency, It is a scheduled caste concentrated people area and therefore I request the Governmet should to give more attention to that place.

ಅದು ಇಲ್ಲ. ಯಾವ ಶಾಸಕರಾದರೂ ಮಾತನಾಡಲಿ, ಹೇಗಾದರೂ ಮಾತನಾಡಲಿ, ನಾವು ನೋಡುವುದನ್ನು ನೋಡೋಣ, ನಾವು ಮಾಡುವುದನ್ನು ಮಾಡೋಣ ಎಂದು ಹೋಗಿ ಬಿಟ್ಟರೆ ಸರ್ಕಾರದಲ್ಲಿ ನಾನು ಏನು ಹೇಳುವುದಕ್ಕೆ ಆಗುತ್ತದೆ.? ಇನ್ನೊಂದು ವಿಷಯ ಸರ್ಕಾರದವರು ಯಾವ ರೀತಿಯಲ್ಲಿ ಅಡ್ಮಿನಿಸ್ಟ್ರೇಷನ್ ಮಾಡುತ್ತಿದ್ದಾರೆ ನೋಡಿ I may be a junior legislator. I am a new-comer. I had put a question last time. You may decide whether justice is on my side or on the Government's side. This was the question asked:- "Whether the Government during the last academic year has sanctioned B.ED. College to any place in Karnataka. If so, to the names of those organisations and where these colleges have been sanctioned and also the criteria being adopted while sanctioning the colleges." The answer given was : "Sri Guru Raghavendra College of Education run by Swami Vivekananda Vidya Samsthe, Shikaripura." I had put another question- "Why the sanction was not accorded for Dr.Ambedkar Foundation, KGF, to open B.ED. College?". The answer given was : "Since the embargo is imposed on opening of new colleges." ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವ ಹೆಸರಿನಲ್ಲಿ ಕೆ.ಜಿ.ಎಫ್. ನಲ್ಲಿ ಒಂದು ಬಿ.ಎಡ್. ಕಾಲೇಜು ಬೇಕೆಂದರೆ ಎಂಬಾರ್ಗೋ ಎಂದು ಹೇಳುತ್ತೀರಿ, ಎಲ್ಲಿ ಕೊಟ್ಟಿದ್ದೀರಿ ಎಂದರೆ ಇಲ್ಲಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ಸರ್ಕಾರದವರು ಈ ರೀತಿ ಅಡ್ಮಿನಿಸ್ಟ್ರೇಷನ್ ಮಾಡಬಹುದೇ? ಇದನ್ನು ತೆಗೆದುಕೊಂಡುಹೋಗಿ ಕೋರ್ಟಿಗೆ ಹಣ ಖರ್ಚು ಮಾಡಿ ಲಾಯರ್‌ನ್ನು ಇಟ್ಟು ಕೇಸ್ ಫೈಲ್ ಮಾಡಿ ಮತ್ತೆ ನಿಮ್ಮ ಹತ್ತಿರ ಬಂದು ಕೆ.ಜಿ.ಎಫ್. ಗೆ ಬಿ.ಎಡ್. ಕಾಲೇಜು ಕೊಡಿ ಎಂದು ಕೇಳುವುದಕ್ಕೆ ನಾನು ಇಲ್ಲಿ ಶಾಸಕನಾಗಿ ಬಂದಿದ್ದೇನೆಯೇ? Are you fair to the scheduled castes and scheduled trises people, you tell me. You have failed to support the scheduled castes. ನೀವು ಕೊಟ್ಟಿರುವಂತಹ ಉತ್ತರ ಯಾವ ರೀತಿ ಇದೆಯೆಂದರೆ, ಶಿಕಾರಿಪುರದಲ್ಲಿ ಒಂದು ಕಾಲೇಜನ್ನು ಕೊಟ್ಟಿದ್ದೇವೆ ಎಂದು ಕೆ.ಜಿ.ಎಫ್. ನಲ್ಲಿ ಏಕೆ ಕೊಟ್ಟಿಲ್ಲ ಎಂದರೆ ಎಂಬಾರ್ಗೋ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಏನು ಪರಿಶಿಷ್ಟ ಜಾತಿಯವರಿಗೆ ಕೊಡಬೇಕು ಎಂದಾಗ ಎಂಬಾರ್ಗೋ ಬಂದು ಬಿಡುತ್ತದೆಯೇ? ಬೇರೆ ಕಡೆ ಕೊಡುವುದಕ್ಕೆ, ಸ್ಯಾಂಕ್ಷನ್ ಮಾಡುವುದಕ್ಕೆ ನಿಮ್ಮ ಪೆನ್‌ನಲ್ಲಿ ಇಂಕ್ ಎಲ್ಲಾ ಸರಿಯಾಗಿ ಇದೆಯೇ? ಆಗ ಎಂಬಾರ್ಗೋ ಬರುವುದಿಲ್ಲವೇ? Is this the way the Government should function? ಮಾನ್ಯ ಅಧ್ಯಕ್ಷರೆ, ಇದನ್ನೆಲ್ಲಾ ಇಟ್ಟುಕೊಂಡು ಶಾಸಕನಾಗಿ ಮಾತನಾಡುವುದಕ್ಕೆ

ನನಗೆ ನಾಚಿಕೆಯಾಗುತ್ತದೆ. I feel ashamed to stand here as an M.L.A. because I cannot tell the people about the pain which I am under going here Hon.'ble Minister Sri Byregowda Promised me that he will post very good Commissioner, a very straight-forward Commissioner, and also a very clean-handed Commissioner. Immediately I wrote a letter to the Hon'ble Minister confirming my willing non for postiy Commissioner above qualities to the KGF. But even after a ...10 days, he was not posted; Then I requested the Minister again. The Minister informed me ಅವರನ್ನು ಟ್ರಾನ್ಸ್‌ಫರ್ ಮಾಡಬಾರದೆಂದು ಸನ್ಮಾನ್ಯ ಶ್ರೀ ಕೃಷ್ಣಾರೆಡ್ಡಿಯವರು ಅಬ್ಜೆಕ್ಷನ್ ಕೊಟ್ಟಿದ್ದಾರೋ ಅಥವಾ ಶ್ರೀ ರೋಷನ್ ಬೇಗ್‌ರವರು ಕೊಟ್ಟಿದ್ದಾರೋ ಗೊತ್ತಿಲ್ಲ. ನೋಡಬೇಕು ಎಂದು ಹೇಳಿದರು. Then I requested the respectful Minister Shri Krishna Reddy. I wrote a letter to him to transfer Mr. Hanumanthappa to KGF. They posted Mr.Hanumanthappa to KGF but he worked only for 3 days. On the 4th day again he has been transferred and the old Commissioner has been retained. To whom have I to tell these feelings? There after, met the Hon'ble Minister Sri Byregowda and explained to him these development. The he took me to the Hon'ble Chief Minister. The Chief Minister passed an order to post Mr.Hanumanthappa to KGF. But they have not posted. I was told that the principal Secretary to the C.M. has cancelled it . Here I would like to know whether the bureaucrats are superior or the Hon'ble Chief Minister is superior.? Then the Principal Secretary to C.M. told me that is in the court and they have stained a stay. Then I requested him to the stay vacated. He ..... that it was not his duty'. Sir We have an Advocate General, we have a law Secretary. Can't they get the stay vacted? I asked for a copy, but they said that they cannot give the copy. They do not want to give me the copy. Then I myself wrote to the Advocate General, and got that copy and submitted to the Law Sceretary. Is it the legislator's duty to go and get the copy? Like a peon, I had to go to the Court, I had to meet the Law Secretary, and the Principal Secretary. What was the Government doing? Is it a transparent Government? Is it a crystal clear society? This only show that your administration is not bonafide. It clearly shows the malafide intention with which you are carrying on the administration. It is a true fact. Then I went to the Chief Minister along with my Kolar District Minister. Again he has passed an order to the Chief Secretary to to post Mr.Hanumanthappa to KGF. Here I

want to bring it to your notice that for the clean administration only I have agreed to take Mr.Hanumanthappa, and not just because Mr.Hanumanthappa belongs to a Scheduled-caste. 5 2/1 months is over but that Commissioner is not posted anywhere. Is it not a shame to the scheduled caste man? Is it not a great injustice to the scheduled castes? I am not perticularly a S.C. caste man asked to be posted to KGF. I have only asked the basis of his clean image, then to post him an It is only the Kolar District Minister who asked me to accept him as Commissioner for KGF. This shows that this Government is not for scheduled castes and scheduled tribes. If they are really honest and true, they would have posted him to KGF 5 months back; Apart from the earlier instance of non sanctioning is a B.ED Collage to KGF, I brought several times to the notice of the Hon'ble Minister for Education, about the case were a man is cheating lakhs of rupees I have produced all documents in this regard . But till today they have not taken action saying that their officers are forth-right, I have given all the documents and papers to the Minister but inspite of the no action was taken. To whose notice should I bring? Is it not my duty to bring it to the notice of this House? The whole House should give me justice. If inspite of this if the Government has no fear it only shows the Government's negligence. I would like to bring some more points to the notice of this House. Sir, Mr. Watal Nagaraj said murders are taking place in KGF. As a legislator only I am controlling and not as a police officer. You can take the previous record. In the same House it was announced that 63 cases have been registened against the previans legislator. Till today I am not haveing a single case in my constituency. That shows that the legislator should be clean first, which I am maintaining but not your Government Inspite of that, because of your negligence, there was a murder. ನಮ್ಮ ಊರಿನಲ್ಲಿ ಒಬ್ಬ ಕಾನ್ಸ್ಟೇಬಲ್ ಆಗಿ ಸೇರಿ ನಂತರ ಹೆಡ್ ಕಾನ್‌ಸ್ಟೇಬಲ್ ಆಗಿ, ನಂತರ ಕೆ.ಎ.ಎಸ್. ಪಾಸ್ ಮಾಡಿಕೊಂಡು ಕೊನೆಗೆ ಎಸ್.ಐ. ಆಗಿ ರಿಟೈರ್ಡ್ ಆಗುತ್ತಾನೆಂದರೆ ಇದರ ಬಗ್ಗೆ ಎಷ್ಟು ಸಲ ಸರ್ಕಾರದ ಗಮನಕ್ಕೆ ತಂದಿದ್ದೇನೆ. I do not belong to your party but I am a human being. I am a legislator. Can't you oblige my word? Can't you oblige to my request? Is it not your duty to co-operate with me? ಎಷ್ಟೋ ಸಲ ನಿಮ್ಮ ಸರ್ಕಾರಕ್ಕೆ ಸಹಕಾರ ಕೊಟ್ಟಿದ್ದೇವೆ. ನಿಮ್ಮ ಸರ್ಕಾರಕ್ಕೆ ಕೋ-ಆಪರೇಟ್ ಮಾಡಿದರೂ ಸಹಿತ ನೀವು ಏನೂ ಮಾಡಲಿಲ್ಲವೆಂದರೆ, ನಾಳೆ ನನಗೆ ಸಪೋರ್ಟ್ ಬೇಕೆಂದರೆ ವಿರೋಧ ಪಕ್ಷದವರು ನಮಗೆ ಸಪೋರ್ಟ್ ಮಾಡುತ್ತಾರೆಯೇ?

ಇವರು ಯಾವಾಗಲೂ ಜನತಾ ದಳ ಸರ್ಕಾರಕ್ಕೆ ಕೋ-ಆಪರೇಟ್ ಮಾಡುತ್ತಿದ್ದರು, ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ, ಸರ್ಕಾರದ ಜೊತೆಯಲ್ಲಿ ಇವರು ಇರುವವರು, ಇವರಿಗೆ ಏನಾದರೂ ತೊಂದರೆ ಆದರೆ ಇವರಿಗೆ ಸಪೋರ್ಟ್ ಮಾಡಬಾರದು ಎನ್ನುವ ಭಾವನೆ ಅವರಿಗೆ ಬಂದು ಬಿಟ್ಟರೆ ನನ್ನ ಗತಿ ಏನಾಗುತ್ತದೆ? ಹೊಡೆಯುವ ಸಮಯದಲ್ಲಿ ನಿಮ್ಮ ಕಡೆಗೆ ರಾಮ ರಾಮ ಎಂದು ಬಂದಿದ್ದೆ. ಈಗ ನೀವು ಹೊಡೆಯುತ್ತಿದ್ದರೆ ನಾನು ಯಾರ ಹತ್ತಿರ ಹೇಳುವುದು.? Sir, this is the type of Government functioning in KGF Therefore, I request Mr.Speaker Sir, the Government must do what they talk. ಮಾತನಾಡುವುದು ಒಂದು ಮಾಡುವುದು ಒಂದು ಇರಬಾರದು. ಈಗ ಮನೆ ಬೆಳಕು ಎಂಬ ಯೋಜನೆಯನ್ನು ತಂದಿದ್ದಾರೆ. ಇದರಲ್ಲಿ ಒಂದೊಂದು ಮನೆಗೆ ಒಂದೊಂದು ಬಲ್ಬಿನ ಬೆಳಕನ್ನು ಕೊಡಬೇಕು. ಆದರೆ ಇವತ್ತಿನವರೆಗೆ ಒಂದು ಬೆಂಕಿ ಕಡ್ಡಿಯನ್ನೂ ಸಹ ಕೊಡಲಿಲ್ಲ. There are 25000 huts in KGF, located in BGML area. Only 6000 employees are working without light. ಸರ್ಕಾರ ಇವರಿಗೆ ಕೊಟ್ಟಿದ್ದಾರೆಯೇ? ಆದರೆ ಬುಕ್‌ನಲ್ಲಿ ನೋಡಿದ ತಕ್ಷಣ 'ಮನೆ ಬೆಳಕು' ಈ ಯೋಜನೆಯಲ್ಲಿ ಬಡವರಿಗೆ ಕೊಡುವುದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೊಡುವುದು ಎಂದು ಗೊತ್ತಾಗುತ್ತದೆ. ಆದರೆ Not even a single light was provided, If that is so, how can we have confidence in this Government? Therefore, I request you to rectify your mistakes. Kindly concentrate on KGF. Please bear in mind that KGF is having the highest scheduled caste population not only in Karnataka but in the whole India. Kindly don't make false Statements in this House. If the Government is really interested in the emancipation of the scheduled castes, if they want to uplift them, let the Government and let the Chief Minister come forward to help these scheduled castes people in KGF area. Without doing it, if they go on telling that they have done so much, then being legislator, I cannot accept it. It is not my advice, it is my request to rectify the mistakes. If you are not rectifying the mistakes, I will have to quote the example of Ramanagaram, Mr.Speaker, in the elections to the Lok Sabha, I brought the highest number votes to the Janata Dal candidate. They did not get votes where the Janata Dal legislatiors were elected. I did not it Because I thought they will help our people. I requested for a Government College. There are 6700 students studying in one Golden Valley Trust, which I brought to the notice of the Minister. I exppained to him also. He said, there is no demand. I request the Scheduled cast Ministers to come forward to see that the conditions of the scheduled castes in KGF. and improved. Sir, 6700 students are studying in one particular college. Imagine what

is the strength in each class, In this ...... you could have straight away sanctioned a College. There are 1600 graduates in that one small town. Can't you have that human courtesy to grant that? If the Government is not coming forward to help them or co-operate with them, they will have to face the consequences as enshrined in Article 14 of the Constitution of India. They will disturb the Government. Kindly think over this. Kindly think of my feelings. These are the feelings of three lakh Scheduled Caste people residing there. These are the feelings of eighty lakh Scheduled Castes all over the State. Therefore, do not neglect them. Do not think that you are superior. To-day I may be on this side and you may be on that side. Tomorrow, I may go over to that side and you may come on this side. The chair is not permanent. It reminds me of what Dr.Abraham Lincoln said, 'Democracy is of the People, by the People and for the People'. Please justify that. Don't be there only for the sake of your Party. The Government should come forward to help not only the Scheduled Castes/Scheduled Tribes but even Minorities and other poor people. During the last 2 year, not a single house has been allotted to the Scheduled Caste people in K.G.F. What for you are making announcements that you are going to give this much and that much houses? I think similar is the situation in other constituencies also. The Government should seriously consider about the problems brought to their notice by the hon.Members of the House. If you are really concerned about the welfare of the people, you should deliver the goods to them and come out categorically on the floor of the House. Kindly accept your mistake. Please ractify. Shortly we are going to have the Budget session. You have not distributed any land to the KGF. There is no agricultural land in KGF. Under Ambedkar Housing Programme a scheduled caste resident in city area is not eligible to get a House. Do you want that the city area people should go to rural areas? A scheduled casts or scheduled tribe fellow, wherever he may be, either in city area or in rural area, kindly concentrate on their welfare. You are promising to give so many thousands of houses but practically you are not able to keep up that promise. Every year atleast give few hundreds of houses to KGF. Don't go on giving only promises without any budgetary allocation? Don't go on making announcements that we will give colleges, hospitals, houses etc. without money. Kindly think of the well-being of the people of the KGF and do the needful. Sir, I am

really thankful to you for having given me an opportunity to speak on the floor of the House. Thank you.

ಪ್ರಕಟಣೆ

ಉಪಾಧ್ಯಕ್ಷರು : ಕುವೆಂಪು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಭರ್ತಿ ಮಾಡಬೇಕಾದ ಒಂದು ಸ್ಥಾನಕ್ಕೆ ಒಂದೇ ನಾಮಪತ್ರ ಬಂದಿರುವುದರಿಂದ ಶ್ರೀ ಎಸ್.ಎಂ. ನಾಗರಾಜ್ ಅವರು ಚುನಾಯಿತರಾಗಿದ್ದಾರೆಂದು ಘೋಷಿಸುತ್ತೇನೆ.

ಈಗ ಸದನವನ್ನು ಮುಂದೂಡಲಾಗಿದೆ. ನಾಳೆ ಬೆಳಗ್ಗೆ 11-00 ಗಂಟೆಗೆ ಸದನವು ಮತ್ತೆ ಸಮಾವೇಶಗೊಳ್ಳುತ್ತದೆ.

(ಸಭೆಯನ್ನು 6 ಗಂಟೆ 5 ನಿಮಿಷಕ್ಕೆ ಮುಂದೂಡಿ ಮತ್ತೆ ದಿನಾಂಕ 25-2-97 ರ ಮಂಗಳವಾರದಂದು ಬೆಳಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)